ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 18, 2013 ಪುಟ 20 ರೂ. 14/-

ಅಮೃತ ಮಹಲ್ ಭೂಮಿಗಾಗಿ ಹೋರಾಟ



ಯಾಸೀನ್ ಭಟ್ಕಳ್

ಬಾಂಬ್ ಭೂತ!



ಯೋಗೇಶ್ ಮಾಸ್ಟರ್

ಬಂಧನ ಬಿಡುಗಡೆಯ ಸೂತ್ರ



BBMP:DCF ಚಂದ್ರಶೇಖರನ ಹಗಲು ದರೋಡೆ



ಸರ್ಕಾರಿ ಪಶುವೈದ್ಯನ ಆನ್‌ಲೈನ್ ದೋಖಾ

...ೈಕೋ ...ಸ್ಕೇಪ್ ...ದ್ದ




ಕೈಕೊಟ್ಟ ಮೋದಿ ಬಾಯಿಬಿಟ್ಟ ವಂಜಾರ



ವರ್ತಮಾನದ ತಲ್ಲಣಗಳಿಗೆ ರಂಗಭೂಮಿಯ ಸೃಜನಶೀಲ ಸಾಂತ್ವ

ಅಂಚಿನಿಂದ....




ಡಾ.ವಾಸು ಎಚ್.ವಿ.

ಕನ್ನಡ ರಂಗಭೂಮಿಯ ವೈಶಿಷ್ಟ್ಯವೇ ಅದು; ಸದಾ ತನ್ನ ಸುತ್ತಲಿನ ಭಾಷೆ, ಬದುಕಿನ ತವಕ-ತಲ್ಲಣಗಳಿಗೆ ಕಿವಿಯಾದದ್ದು, ಕಣ್ಣಾದದ್ದು ಮತ್ತು ದನಿಯಾದದ್ದು! ಬಹುಶಃ ಅದು ಕನ್ನಡವಷ್ಟೇ ಅಲ್ಲದೆ ಎಲ್ಲಾ ಭಾಷೆಯ, ಎಲ್ಲಾ ದೇಶಗಳ ರಂಗಭೂಮಿಯ ಮೂಲಲಕ್ಷಣವೇ ಆಗಿರಬಹುದು. ಕರ್ನಾಟಕದಲ್ಲೂ ಸಾಹಿತ್ಯ ಸಂಸ್ಕೃತಿ, ರಂಗಭೂಮಿಯ ಚಟುವಟಿಕೆಗಳು ವರ್ತಮಾನದ ಹೊಸ ಬಿಕ್ಕಟ್ಟುಗಳಿಗೆ ನೇರವಾಗಿ ಮುಖಾಮುಖಿಯಾಗುತ್ತಾ ಒಂದು ಹೊರಳು ಹೊರಳಿ, ತಮ್ಮ ಸೃಜನಶೀಲತೆಯ ಮತ್ತೊಂದು ಮಗ್ಗುಲನ್ನು ಹೊರತೋರುತ್ತಿರುವಂತೆ ಭಾಸವಾಗುತ್ತಿದೆ. ದಿನೇದಿನೇ ಸಂಕೀರ್ಣವಾಗುತ್ತಾ ಹೋಗುತ್ತಿರುವ ಬದುಕು ಉಂಟುಮಾಡುತ್ತಿರುವ ತಲ್ಲಣಗಳನ್ನು ಉತ್ತರಿಸುತ್ತಿರುವ ಮೆಲುವಾದ ಸಾಂತ್ವನದ ಧ್ವನಿಯಂತಹ ಅನುಭವವನ್ನು ಉಂಟುಮಾಡುತ್ತಿದೆ. ಇತ್ತೀಚಿನ ಕೆಲವು ಅತ್ಯುತ್ತಮ ರಂಗಪ್ರಯೋಗಗಳು ಇದಕ್ಕೆ ಸಾಕ್ಷಿ!

ಬಹುಶಃ ಕರ್ನಾಟಕದ ಉದ್ದಗಲಕ್ಕೂ ಹಿಂದೆಂದಿಗಿಂತ ಹೆಚ್ಚು ರಂಗಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಅವುಗಳ ಬಗ್ಗೆ ಕೇಳಿ ತಿಳಿದಿದ್ದರೂ, ನಾನು ನೇರವಾಗಿ ಪಾಲ್ಗೊಳ್ಳಲು ಸಾಧ್ಯವಾದ ಕೆಲವನ್ನಷ್ಟೇ ಮುಂದಿಟ್ಟುಕೊಂಡು ಈ ಬರಹವನ್ನು ಸಿದ್ಧಪಡಿಸುತ್ತಿದ್ದೇನೆ. ಕಳೆದ ತಿಂಗಳು ನಾಟಕಕಾರ ಕೆ.ವೈ. ನಾರಾಯಣಸ್ವಾಮಿಯವರ ಐದು ನಾಟಕಗಳನ್ನಿಟ್ಟುಕೊಂಡು ಬಹುರೂಪಿ ನಾಟಕೋತ್ಸವ ಬೆಂಗಳೂರಿನಲ್ಲಿ ಜರುಗಿತು. ಅವು ಈ ಹಿಂದೆ ಪ್ರದರ್ಶನವಾದವೇ ಆಗಿದ್ದರೂ ಎಲ್ಲವನ್ನೂ ಬೇರೆ ಬೇರೆ ರಂಗತಂಡಗಳು ಅಭಿನಯಿಸಿ ಒಂದೆಡೆ ಪೋಣಿಸಿದಾಗ ಹೊಸಬಗೆಯ ಅನುಭೂತಿಯನ್ನು ಅದು ಹುಟ್ಟುಹಾಕಿತು. ಇಂದಿನ ನಾಟಕಕಾರರಲ್ಲಿ ಪ್ರತಿದಿನದ ಸಾಮಾನ್ಯರ ಬದುಕಿನ ಹತ್ತು ಹಲವು ಸೂಕ್ಷ್ಮಾತಿಸೂಕ್ಷ್ಮ ಅಂಶಗಳನ್ನೂ ತನ್ನ ನಾಟಕದ ವಸ್ತುವಿನ ವಿಶಾಲವಾದ ಹರವಿನಲ್ಲಿ ಸೇರಿಸಿ ಎಲ್ಲಿಯೂ ರಸಭಂಗವಾಗದಂತೆ ಹೆಣೆಯಬಲ್ಲ ಅತ್ಯಂತ ಸೃಜನಶೀಲ ನಾಟಕಕಾರರಲ್ಲಿ ಕೆ.ವೈ.ಎನ್ ಒಬ್ಬರು. ಅವರ ಈ ಐದೂ ನಾಟಕಗಳೂ ಇದೇ ದೃಷ್ಟಿಯಲ್ಲಿ ನನಗೆ ವಿಶಿಷ್ಟ ಎನಿಸಿದವು. ಪುರಾಣದ ಕತೆಗಳನ್ನು ಆಧರಿಸಿದ ಅನಭಿಜ್ಞ ಶಾಕುಂತಲ, ಚಕ್ರರತ್ನದಂತಹ ವಸ್ತುಗಳಲ್ಲೂ, ಜಾತಿವ್ಯವಸ್ಥೆಯ ವಿಮರ್ಶೆಯಂತಹ ಸಂಕೀರ್ಣವಾದ ವಿಚಾರವನ್ನು ಎಲ್ಲೂ ಆಭಾಸವಾಗದಂತೆ ಒಳಗೊಳ್ಳುವುದು ಸವಾಲಿನ ಕೆಲಸ. ಆ ಸವಾಲನ್ನು ಕುರಿತ ಕುಶಲಕೆಲಸಗಾರನಂತೆ ಕೆ.ವೈ.ಎನ್ ಯಶಸ್ವಿಯಾಗಿ ನಿಭಾಯಿಸಿದ್ದಾರೆ. ವೈರಾಗ್ಯಮೂರ್ತಿಯಾದ ಬಾಹುಬಲಿ, ಚಮ್ಮಾರನಾಗಿ ಲೌಕಿಕ ಜಗತ್ತಿನ ಎಲ್ಲಾ ರಾಗದ್ವೇಷದ ನಡುವೆ ಇದ್ದೂ ಇಲ್ಲದಂತಿರುತ್ತ, ಅದರ ಗಾಯಗಳನ್ನು ಮಾಯಿಸುವ ಕಲ್ಪನೆಯೇ ಅಸಾಧಾರಣವಾದದ್ದು.(ಇಂತಹ ಕಲ್ಪನೆಗಳ ಪ್ರತಿಮಾತ್ಮಕ ಅರ್ಥಗಳನ್ನು ಅರಿಯಲಾರದ ಕೆಲವು ಧಾರ್ಮಿಕ ಸಂಸ್ಥೆಗಳು ತಮ್ಮ ದೇವರನ್ನು ಚಮ್ಮಾರನನ್ನಾಗಿಸಿದರೆಂದು ಗೋಳಾಡಿ, ನಂತರ ವಿಚಾರವಂತರಿಂದ ಅವನ್ನು ತಿಳಿದುಕೊಂಡು ಸುಮ್ಮನಾದದ್ದು ಓದುಗರ ಗಮನಕ್ಕೆ ಬಂದಿರಬಹುದು). ಅದೇ ನಾಟಕದಲ್ಲಿ ಬಾಹುಬಲಿಯ ಅಣ್ಣ ಭರತನನ್ನು ಯುದ್ಧಕ್ಕೆ ಪ್ರಚೋದಿಸುವ ಚಕ್ರರತ್ನ ಇಂದಿನ ಅಮೆರಿಕನ್ ಸಾಮ್ರಾಜ್ಯಶಾಹಿಯ ಪ್ರತಿರೂಪದಂತೆಯೂ ನೋಡುಗರಿಗೆ ಕಾಣಿಸಬಹುದು! ಬಹುರೂಪಿ ಸರಣಿಯ ಎಲ್ಲಾ ಐದೂ ನಾಟಕಗಳೂ ಹೀಗೆಯೇ ವಿಭಿನ್ನವಾದ ವಸ್ತು ಹಾಗೂ ನಿರೂಪಣಾ ಶೈಲಿಯಿಂದ ಪ್ರೇಕ್ಷಕರನ್ನು ಅಲುಗಾಡಿಸಿದವು.

ಇದರಂತೆಯೇ ಮಂಡ್ಯದಲ್ಲಿ ನಡೆದ ಮೂರು ದಿನಗಳ ಸಕ್ಕರೆ ನಾಟಕೋತ್ಸವವೂ ಕೆಲವು ವಿಭಿನ್ನ ಪ್ರಯೋಗಗಳಿಗೆ ವೇದಿಕೆಯಾಯಿತು. ಮಂಡ್ಯದ ಉತ್ಸಾಹಿ ಯುವಕರ ತಂಡ 'ರಂಗಪಯಣ' ತನ್ನ ಮೊದಲ ವಾರ್ಷಿಕೋತ್ಸವದ ಅಂಗವಾಗಿ ಈ ನಾಟಕೋತ್ಸವವನ್ನು ಆಯೋಜಿಸಿತ್ತು. ಮೊದಲ ದಿನದ ನಾಟಕ ಗಿರೀಶ್ ಕಾರ್ನಾಡರ 'ಟಿಪ್ಪೂ ಕಂಡ ಕನಸು'. ತನ್ನ ಕಥಾವಸ್ತು ಮತ್ತು ಮೂಲಕಥೆಯ ನೇಯ್ಗೆಯಲ್ಲೇ ಬಹಳ ಕ್ಲಿಷ್ಟವಾದ ರಚನೆ ಇದು. ಅದನ್ನು ರಂಗರೂಪಕ್ಕೆ ತರುವುದೂ ಅಷ್ಟೇ ಅಥವಾ ಅದಕ್ಕಿಂತ ಕಷ್ಟಕರವಾದ ಕೆಲಸ. ಇಂಗ್ಲೆಂಡಿನಲ್ಲಿ ಬ್ರಿಟಿಷರು ಟಿಪ್ಪು ಸುಲ್ತಾನನ ಕೊಂದ ಮೇ 4ನೇ ತಾರೀಕನ್ನು ವಿಶ್ವವನ್ನೇ ಗೆದ್ದ ದಿನವಾಗಿ ಆಚರಿಸಲಾಗುತ್ತದೆ. 1999ರಲ್ಲಿ ಟಿಪ್ಪೂವನ್ನು ಕೊಂದು 200 ವರ್ಷಗಳಾದ ಹಿನ್ನೆಲೆಯಲ್ಲಿ ಬಿಬಿಸಿ ಗಿರೀಶ್ ಕಾರ್ನಾಡರನ್ನು ಒಂದು ನಾಟಕ ರಚಿಸಿಕೊಡುವಂತೆ ಕೇಳಿಕೊಂಡಿತ್ತು. ಆ ಸಂದರ್ಭಕ್ಕೆ ಟಿಪ್ಪೂ ಬರೆದಿಟ್ಟಿದ್ದ ತನ್ನ ಕನಸುಗಳ ಐತಿಹಾಸಿಕ ದಾಖಲೆಯನ್ನು ಆಧರಿಸಿ 'ಟಿಪ್ಪೂ ಕಂಡ ಕನಸು' ನಾಟಕವನ್ನು ಕಾರ್ನಾಡರು ರಚಿಸಿದ್ದು. ಮೂಲತಃ ಕನಸುಗಾರನಾಗಿದ್ದ ನಮ್ಮ ನಾಡಿನ ಹೆಮ್ಮೆಯ ಮೈಸೂರು ಹುಲಿ ಟಿಪ್ಪೂ ಸುಲ್ತಾನ್, ಒಬ್ಬ ಜನಪರ ರಾಜನಾಗಿ, ಹೊಸ ಅಭಿವೃದ್ಧಿಯ ಹರಿಕಾರನಾಗಿ, ಪ್ರೀತಿಪಾತ್ರ ತಂದೆಯಾಗಿ, ಬ್ರಿಟಿಷರ ಕುಟಿಲತೆಯ ಮತ್ತು ದೇಶೀ ಅರಸರ ಅವಕಾಶವಾದಿತನದ ಬಲಿಪಶುವಾಗಿ, ಏಕಾಂಗಿ ಕನಸುಗಾರನಾಗಿ ಅನುಭವಿಸಿದ ತಾಕಲಾಟಗಳು, ನೋವುಗಳು ಮತ್ತು ದ್ವಂದ್ವಗಳನ್ನು ನಾಟಕ ಪ್ರೇಕ್ಷಕರೆದುರಿಟ್ಟಿತು. ನೀನಾಸಂ ಪದವೀಧರರಾದ ಹಾಗೂ ಧಾರವಾಡದಲ್ಲಿ ಆಟ-ಮಾಟ ಎಂಬ ರಂಗತಂಡ ಕಟ್ಟಿಕೊಂಡು ಸಕ್ರಿಯರಾಗಿರುವ



'ಮೆಕ್ಕಾ ದಾರಿ' ದೃಶ್ಯ

ಮಹದೇವ ಹಡಪದ್ ನಾಟಕ ನಿರ್ದೇಶಿಸಿದ್ದರು. ತಾಂತ್ರಿಕ ಅಡಚಣೆಗಳ ಹೊರತಾಗಿಯೂ ನಾಟಕದ ಆಶಯ ಜನರನ್ನು ತಲುಪುವಂತೆ ಅದನ್ನು ಸಂಯೋಜಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ತಮ್ಮ ರಂಗತಂಡದ ಮೂಲಕ ಜನಸಾಮಾನ್ಯರ ಶೋಷಿತರ ಹೃದಯಕ್ಕೆ ಹತ್ತಿರವಾದಂಥ ವಿಚಾರಗಳ ಕುರಿತು 'ರಮಾಯಿ', 'ಹೊಲಗೇರಿಯ ರಾಜಕುಮಾರ' ಮೊದಲಾದ ನಾಟಕಗಳನ್ನು ಯಶಸ್ವಿಯಾಗಿ ಪ್ರದರ್ಶಿಸಿರುವವರು ಅವರು. ಎಲ್ಲಕ್ಕಿಂತ ಮಿಗಿಲಾಗಿ, ಮೋದಿಯನ್ನು ಒಬ್ಬ ದೇಶಪ್ರೇಮಿ, ಅವನು ಮಾಡಿದ್ದನ್ನು ಅಭಿವೃದ್ಧಿ ಎಂದೇ ಭಾರತದ ಕಾರ್ಪೊರೇಟ್ ಮಾಧ್ಯಮಗಳು ಅರಚಿಕೊಳ್ಳುತ್ತಿರುವ ಹೊತ್ತಿನಲ್ಲಿ ನಿಜವಾದ ಅಭಿವೃದ್ಧಿ ಹಾಗೂ ದೇಶಭಕ್ತಿಯ ಪ್ರತೀಕವಾದ ಟಿಪ್ಪೂ ಕುರಿತ ನಾಟಕ ಸಕಾಲಿಕವಾದದ್ದೂ ಆಗಿತ್ತು. ಮೂರು ದಿನಗಳ ನಾಟಕೋತ್ಸವದಲ್ಲಿ ಮೂರನೇ ನಾಟಕವಾಗಿ ಮಹದೇವರದ್ದೇ ನಿರ್ದೇಶನದ ಮೊಗಳ್ಳಿ ಗಣೇಶ್‌ರವರ ಕೃತಿ ಆಧಾರಿತ 'ಬುಗುರಿ' ನಾಟಕವೂ ಸಮಕಾಲೀನ ಸಂದರ್ಭದಲ್ಲಿ ತಳಸಮುದಾಯಗಳ ಬದುಕು ಹಾಗೂ ಅವು ಎದುರಿಸುತ್ತಿರುವ ಸಾಂಸ್ಕೃತಿಕ ಸವಾಲುಗಳನ್ನು ತೆರೆದಿಟ್ಟಿತು.

ಇಂತಹ ವಿಭಿನ್ನ ನಾಟಕಗಳ ಸರಣಿಯಲ್ಲಿ ಪ್ರಸನ್ನರ ನಿರ್ದೇಶನದ ದಕ್ಷಿಣ ಆಫ್ರಿಕಾದ ಮಹಾನ್ ಕಲಾವಿದೆ ಹೆಲೆನ್‌ಳ ಜೀವನಾಧಾರಿತ 'ಮೆಕ್ಕಾದಾರಿ' ನಾಟಕ ವಿಶೇಷವಾಗಿ ಗಮನ ಸೆಳೆದದ್ದು. ಕೇವಲ ಮೂರು ಪಾತ್ರಗಳ ನಡುವೆ ನಡೆಯುವ ಸಂಭಾಷಣೆಗಳನ್ನಷ್ಟೇ ... ಸಂಗೀತವೂ ಒಂದು ಪಾತ್ರದಂತೆ ಪ್ರಬಲವಾಗಿರು... ರಂಗಸಜ್ಜಿಕೆಗಳನ್ನಷ್ಟೇ ಬಳಸಿಕೊಂಡಿರುವ, ಆದರೆ ... ಗಹನವಾದ ಅನೇಕ ವಿಚಾರಗಳನ್ನು ಚರ್ಚಿಸ... ನಾಟಕ, ನೋಡಿಯಾದ ನಂತರವೂ ಮನಸ್ಸಿನ... ಕಾಡುವಂಥದ್ದು. ಒಂದು ಶತಮಾನದ ಹಿಂದೆ ... ಆಫ್ರಿಕಾದ ಒಂದು ಹಳ್ಳಿಯಲ್ಲಿ ಬದುಕಿದ್ದ ಹೆಲೆ... ಸರ್ವೇಸಾಧಾರಣವಾದ ಜೀವನದ ನಡುವೆಯೇ ಬಿ... ದಾರಿಯೆಂಬಂತೆ ಕಲೆಗೆ ಹತ್ತಿರಾದವಳು. ಬಹಳ ... ಆಲೋಚನೆಗಳನ್ನು ಹೊಂದಿದ್ದ, ಸ್ವಾತಂತ್ರ್ಯದ ... ಅಭೀಪ್ಸೆಯನ್ನು ಎದೆಯಲ್ಲಿ ಜೀವಂತವಾಗಿರಿಸಿ... ಆಕೆಯ ಪ್ರತಿಯೊಂದು ಶಿಲ್ಪವೂ ಅಲ್ಲಿನ ಕ್ರಾ... ಚರ್ಚಿಗೆ ಧರ್ಮವಿರೋಧಿತನವಾಗಿ ಕಾಣುತಿತ್ತು. ... ಮಣಿಸಲು ಅವರು ಮಾಡಿದ ಎಲ್ಲಾ ಪ್ರಯ... ತನ್ನ ಮುಗ್ಧವಾದ ದಿಟ್ಟತನದಿಂದ ಸೋಲಿಸುವ... ಬದುಕಿನ ಹಲವು ಆಯಾಮಗಳನ್ನು ತೆರೆದಿ... ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ಬದುಕ ಬಯಸು... ಮಹಿಳೆಯ ನೋವು-ನಲಿವುಗಳು, ಆ ಭಾಗದ ... ಭೇದದ ಸಮಸ್ಯೆಗಳನ್ನು ಮುಂತಾದ ಹಲವು ... ವಿಚಾರಗಳನ್ನು ನಾಟಕ ಚರ್ಚಿಸುತ್ತದೆ.

ಈ ಮೂರೂ ಉದಾಹರಣೆಗಳು ರಂ... ಮತ್ತಷ್ಟು ಹೊಸ ಹೊಸ ಪ್ರಯೋಗಗಳೆಡೆಗೆ, ವತ... ಸವಾಲುಗಳೆಡೆಗೆ ಹೊರಳಿಕೊಂಡಿರುವುದನ್ನು ... ಸೂಚಿಸುತ್ತಿವೆ. ಇಂದಿನ ಮಟ್ಟಿಗೆ ಅತ್ಯಗ... ಹಲ್ಲಟವಿದು. ಲೇಖನದ ಆರಂಭದಲ್ಲೇ ನಾನು ... ಸಾಮಾನ್ಯರ ಬದುಕಿಗೆ ಸದಾಕಾಲವೂ ಮಿಡಿ... ರಂಗಭೂಮಿ ಕನ್ನಡದ್ದು. 1985ರಷ್ಟು ಹಿಂದೆ... ನಾಟಕದೊಂದಿಗೆ 'ಸಮುದಾಯ' ಜನಸಮುದಾಯ... ಬೆರೆತಿತ್ತು; ಜನಸಮುದಾಯವನ್ನು ಪ್ರೇರೇಪಿಸಿತ್ತು... ದೀರ್ಘ ಪರಂಪರೆಯ ಹೊರತಾಗಿಯೂ ... ಸಮಯದಿಂದ ಇಂತಹ ಹೊಸತನದ ಗಮಲನ್ನು... ಸೃಜನಶೀಲವೂ ಸಮಕಾಲೀನವೂ ಆ... ರಂಗಪ್ರಯೋಗಗಳ ಕೊರತೆ ಕಾಡುತ್ತಿತ್ತು. ಅದ... ರಂಗಭೂಮಿಯನ್ನು ಸಾಂಸ್ಥಿಕರಿಸಿ, ಜಂಗಮವಾದ... ಸ್ಥಾವರಗೊಳಿಸಹೊರಟ ಸರ್ಕಾರ ಸ್ಥಾಪಿಸಿದ 'ರಂಗಾ... ನಡೆದ ಗೊಂದಲಗಳೂ ರಂಗಭೂಮಿಯ ಗ... ಚ್ಯುತಿ ತಂದಿದ್ದವು. ಒಂದುಬಗೆಯ ಏಕತಾನ... ಅನುಭವವಾಗುತ್ತಿತ್ತು. ಅಷ್ಟರ ನಡುವೆ ಇತ್ತೀಚೆಗೆ ... ಕುವೆಂಪುರವರ ಮೇರು ಕೃತಿ 'ಮಲೆಗಳಲ್ಲಿ ಮದ... ಅಹೋರಾತ್ರಿ ನಾಟಕದೊಂದಿಗೆ ಈ ಏಕತಾನತೆ ... ಈಗಿನ ಪ್ರಯೋಗಗಳಂತೂ ಜನಚಳವಳಿಗಳ ನಿಟ್ಟಿ... ರಂಗಭೂಮಿಯ ಬೆಳವಣಿಗೆಯ ನಿಟ್ಟಿನ... ಆಶಾದಾಯಕವಾಗಿವೆ.

ಸುತ್ತಾಮುತ್ತಾ....

"ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಲೈಂಗಿಕ ದಾಳಿ ಮಾಡಿದ ಆರೋಪವನ್ನು ಹೊತ್ತಿರುವ ಢೋಂಗಿ ಬಾಬಾ ಅಸಾರಾಮನನ್ನು ಪೊಲೀಸರು ಬಂಧಿಸದಂತೆ ಆತನ ಹಿಂಬಾಲಕರು ರಸ್ತೆ ತಡೆ, ರೈಲು ತಡೆ ಮಾಡುತ್ತಾರೆ. ಆದರೆ ಕರ್ನಾಟಕದಲ್ಲಿ ಒಂದು ಪುಸ್ತಕ ಬರೆದಿದ್ದಕ್ಕೆ ಅದರ ಕರ್ತೃವನ್ನು ಪೊಲೀಸರು ಅಕ್ರಮವಾಗಿ ಬಂಧಿಸಿದಾಗ ಆತನ ಪರ ದನಿ ಎತ್ತುವವರೇ ಇರಲಿಲ್ಲ."

- ಎಸ್. ಆನಂದ್, ಬರಹಗಾರ

ನಮ್ಮ ದೇಶದಲ್ಲಿ ಅತ್ಯಾಚಾರಕ್ಕೆ ಬಲಿಯಾಗುವವರಿಗಿಂತ ಆ ಕೃತ್ಯವನ್ನು ಯಾರು ಎಸಗಿದರು ಎಂಬುದೇ ಮುಖ್ಯವಾಗುತ್ತದೆ. ಯಾಕೆಂದರೆ ದೆಹಲಿ ಮತ್ತು ಮುಂಬೈ ಪ್ರಕರಣಗಳಲ್ಲಿ ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿದ ಕೆಳವರ್ಗದ ಜನರನ್ನು ಪೊಲೀಸರು ಒಂದೆರಡು ದಿನಗಳಲ್ಲೇ ಬಂಧಿಸುತ್ತಾರೆ. ಆದರೆ ಅಪಾರ ಐಶ್ವರ್ಯ ಮತ್ತು ಹಿರಿಯ ರಾಜಕೀಯ ನಾಯಕರನ್ನು ತನ್ನ ಹಿಂಬಾಲಕರಾಗಿ ಹೊಂದಿರುವ ಕಪಟ ಅಸಾರಾಮ್ ಎಂಬಾತ ಅಪ್ರಾಪ್ತ ವಯಸ್ಸಿನ ಹುಡುಗಿಯ ಮೇಲೆ ಲೈಂಗಿಕ ದಾಳಿ ಮಾಡಿದ್ದರೂ ಆತನನ್ನು ಬಂಧಿಸಲು ಪೊಲೀಸರು ಮೀನಾಮೇಷ ಎಣಿಸುತ್ತಾರೆ.

- ಅಕ್ಷಯ ಮಿಶ್ರ, ಲೇಖಕಿ

ಕೇಂದ್ರ ಸರ್ಕಾರವು ಕ್ರೀಡಾಪಟುಗಳ ತರಬೇತುದಾರರಿಗೆ 1985ರಿಂದ ದ್ರೋಣಾಚಾರ್ಯ ಪ್ರಶಸ್ತಿಯನ್ನು ನೀಡುತ್ತಾ ಬಂದಿದೆ. ಆದರೆ 2011ರಲ್ಲಿ ಸುಪ್ರೀಂಕೋರ್ಟ್ ಒಂದು ತೀರ್ಪಿನಲ್ಲಿ ಹೀಗೆ ಹೇಳಿದೆ:

"ನಮ್ಮ ದೇಶದ ಆದಿವಾಸಿಗಳಿಗೆ ತಲತಲಾಂತರದಿಂದ ಘೋರ ಅನ್ಯಾಯ ಮಾಡಿರುವುದು ಖೇದಕರ. ನಮ್ಮ ಪುರಾಣಗಳಲ್ಲೂ ಆದಿವಾಸಿಗಳನ್ನು 'ರಾಕ್ಷಸ', 'ಅಸುರ' ಎಂದೆಲ್ಲ ಅವಮಾನಿಸಲಾಗಿದೆ. ಲಕ್ಷಾಂತರ ಆದಿವಾಸಿಗಳನ್ನು ಕೊಂದು, ಅವರ ವಂಶಜರಿಗೆ ಅನ್ಯಾಯ, ಅವಮಾನವನ್ನು ಎಸಗಲಾಗಿದೆ. ಅವರ ಭೂಮಿಯನ್ನು ಕಿತ್ತುಕೊಂಡು ಅವರೆಲ್ಲ ಕಾಡುಮೇಡುಗಳಲ್ಲಿ ರಕ್ಷಣೆ ಪಡೆಯುವಂತೆ ನೋಡಿಕೊಳ್ಳಲಾಗಿದೆ. ಅವರೆಲ್ಲ ಬಡತನದಲ್ಲಿ, ಅನಕ್ಷರತೆಯಲ್ಲಿ, ಅನಾರೋಗ್ಯದಿಂದ ತತ್ತರಿಸುತ್ತಿದ್ದಾರೆ. ಈಗ ಹಲವರು ಅವರನ್ನೆಲ್ಲ ಕಾಡುಗಳಿಂದಲೂ ಒದ್ದೋಡಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದಿವಾಸಿಗಳಿಗೆ ಮಹಾಭಾರತದ ಕಾಲದಲ್ಲೂ ಅನ್ಯಾಯ ಮಾಡಲಾಗಿತ್ತು ಎಂಬುದಕ್ಕೆ ಏಕಲವ್ಯನೇ ಒಂದು ಉದಾಹರಣೆ. ದ್ರೋಣಾಚಾರ್ಯ ಏಕಲವ್ಯನಿಗೆ ಶಿಕ್ಷಣ ನೀಡಿರದಿದ್ದರೂ ಆತ ತನ್ನ ಪ್ರೀತಿಯ ಶಿಷ್ಯ ಅರ್ಜುನನನ್ನು ಬಿಲ್ಲುವಿದ್ಯೆಯಲ್ಲಿ ಮೀರಿಸಬಾರದೆಂದು ಆದಿವಾಸಿ ಏಕಲವ್ಯನ ಹೆಬ್ಬೆಟ್ಟನ್ನೇ 'ಗುರು ದಕ್ಷಿಣೆ'ಯಾಗಿ ಪಡೆಯುತ್ತಾನೆ. ಇದು ಖಂಡನಾರ್ಹ."

ನಮ್ಮ ದೇಶದ ಸರ್ವೋಚ್ಚ ನ್ಯಾಯಾಲಯ ಇಂತಹ ಒಂದು ಗಮನಾರ್ಹ ತೀರ್ಪು ನೀಡಿರುವಾಗ ಕೇಂದ್ರ ಸರ್ಕಾರ ದ್ರೋಣಾಚಾರ್ಯನ ಹೆಸರಿನಲ್ಲಿ ಪ್ರಶಸ್ತಿಯನ್ನು ನೀಡುತ್ತಿರುವುದು ಆದಿವಾಸಿಗಳಿಗೆ ಮತ್ತೆ ಮತ್ತೆ ಅವಮಾನ ಮಾಡುವಂತಿದೆ. ಇದರಿಂದ ಭಾರತೀಯ ಆದಿವಾಸಿಗಳಿಗೂ ಮತ್ತು ಉನ್ನತ ಕ್ರೀಡಾತರಬೇತುದಾರರಿಗೂ ಅನ್ಯಾಯವಾಗುತ್ತಿದೆ. ಆದ್ದರಿಂದ ಕೂಡಲೇ ದ್ರೋಣಾಚಾರ್ಯನ ಹೆಸರಿನಲ್ಲಿ ಈ ಪ್ರಶಸ್ತಿ ಕೊಡುವುದನ್ನು ಸರ್ಕಾರ ನಿಲ್ಲಿಸಬೇಕು.

-ಜಾರ್ಖಂಡ್ ಆದಿವಾಸಿಗಳ ಪರವಾಗಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿಗೆ ಗ್ಲಾಡ್‌ಸನ್ ದುಂಗ್‌ದುಂಗ್ ಎಂಬುವವರು ಬರೆದಿರುವ ಪತ್ರದ ಸಾರಾಂಶ.

ಕಳೆದ ವರ್ಷ ಉದ್ಯಮಿಗಳಿಗೆ ಕೊಟ್ಟ ತೆರಿಗೆ ವಿನಾಯತಿ ಬರೋಬ್ಬರಿ ಐದು ಟ್ರಿಲಿಯನ್ ರೂಪಾಯಿಗಳು. ಉಳ್ಳವರೇ ಹೆಚ್ಚು ಉಪಯೋಗಿಸುವ ಪೆಟ್ರೋಲ್ ಮೇಲೆ ಕೊಟ್ಟ ರಿಯಾಯಿತಿ 1.6 ಲಕ್ಷ ರೂಪಾಯಿಗಳು. ಚಿನ್ನ ಮತ್ತು ವಜ್ರ ವಲಯಕ್ಕೆ ಕೊಟ್ಟ ರಿಯಾಯಿತು 60,000 ಕೋಟಿ ರೂಪಾಯಿಗಳು (ಅಂದಹಾಗೆ ಈ ವಲಯದಲ್ಲಿ ಭಾರತದ ಒಟ್ಟಾರೆ ದುಡಿಯುವ ವರ್ಗದ ಶೇ. ಒಂದಕ್ಕಿಂತ ಕಡಿಮೆ ಜನ ಇದ್ದಾರೆ). ಇದೆಲ್ಲಕ್ಕೆ ಹೋಲಿಸಿದರೆ ಆಹಾರ ಭದ್ರತಾ ಕಾಯಿದೆಯಿಂದಾಗಿ ಖಜಾನೆಗೆ ತಗಲುವ ವೆಚ್ಚ ಕೇವಲ 30,000 ಕೋಟಿ ರೂಪಾಯಿಗಳು. ಅದಕ್ಕಿಂತಲೂ ಮುಖ್ಯವಾಗಿ ಈ ಕಾಯಿದೆಯಿಂದಾಗಿ ನಮ್ಮ ದೇಶದ ಜನಸಂಖ್ಯೆಯ ಶೇ. 67 ಜನರಿಗೆ ಉಪಯೋಗವಾಗಲಿದೆ.

- ರೀತಿಕ ಖೇರಾ, ಅಭಿವೃದ್ಧಿ ತಜ್ಞರು

ಚೆನ್ನಾಗಿ ಮಳೆ ಆದ ವರ್ಷ ನಮ್ಮ ದೇಶದ ಗೋದಾಮುಗಳಲ್ಲಿ 700 ಲಕ್ಷ ಮೆಟ್ರಿಕ್ ಟನ್ನಿನಷ್ಟು ಆಹಾರ ಧಾನ್ಯ ಸಂಗ್ರಹವಾಗುತ್ತದೆ. ಇದನ್ನು ಸರಿಯಾಗಿ ವಿತರಿಸದೆ ಇರುವುದರಿಂದ ಹೆಚ್ಚಿನ ಪಾಲು ಕೊಳೆತು ಹೋಗುತ್ತದೆ. ಇಷ್ಟು ಆಹಾರ ಧಾನ್ಯಗಳ ಚೀಲಗಳನ್ನು ಒಂದರ ಪಕ್ಕ ಇನ್ನೊಂದು ಇಟ್ಟರೆ ಅದರ ಉದ್ದ ಚಂದ್ರನನ್ನೂ ಮುಟ್ಟಿ ವಾಪಸ್ ಬರುವಷ್ಟಾಗುತ್ತದೆ. ಈ ಆಹಾರ ಧಾನ್ಯವನ್ನು ನಮ್ಮ ದೇಶದ ಬಡವರಿಗೆ ಕಡಿಮೆ ದರದಲ್ಲಿ ಹಂಚುವ ಬದಲಾಗಿ ನಮ್ಮ ಸರ್ಕಾರ ಬೇರೆ ದೇಶಗಳ ಹಂದಿಗಳಿಗೋ, ದನಗಳಿಗೋ ... ಇದನ್ನು ಮಾರುತ್ತದೆ.

- ಶೋಮಾ ಚೌಧುರಿ, ತೆಹೆಲ್ಕಾ ಪತ್ರಿಕೆಯ ನಿರ್ವಾಹಕಾ ಸಂ...

* * *

ಒಂದು ಜೋಕ್

ಅಜ್ಜ-ಅಜ್ಜಿ ತಮ್ಮ ಟೆಲಿಫೋನ್ ಆನ್ಸರಿಂಗ್ ಮೆಷೀನ್‌ನಲ್ಲಿ ... ಮಾಡಿರುವ ಸಂದೇಶ:

ಹಲೋ. ನಿಮ್ಮ ಕರೆಯನ್ನು ಸ್ವೀಕರಿಸಲು ಈಗ ನಾನು ಮ... ಆದ್ದರಿಂದ 'ಬೀಪ್' ಎಂಬ ಶಬ್ದ ಕೇಳಿಸಿದ ನಂತರ ತಮ್ಮ ಸ... ರೆಕಾರ್ಡ್ ಮಾಡಿ.

ನೀವು ನಮ್ಮ ಐವರು ಮಕ್ಕಳಲ್ಲಿ ಒಬ್ಬರಾಗಿದ್ದರೆ, ನಂಬರ್ ... ಒತ್ತಿ ಆನಂತರ ನೀವು ಜನಿಸಿದ ಅನುಕ್ರಮದಲ್ಲಿ ಮುಂದಿನ ಸ... ಒತ್ತಿ.

ನೀವು ಎಲ್ಲಿಗೋ ಹೋಗಬೇಕಾಗಿದ್ದು ನಿಮ್ಮ ಮಕ್ಕಳೊಂದ... ಇರಬೇಕೆಂದಿದ್ದರೆ ಎರಡನ್ನು ಒತ್ತಿ.

ನಮ್ಮ ಕಾರಿನ ಜರೂರತ್ತು ಇದ್ದರೆ ಮೂರನ್ನು ಒತ್ತಿ.

ನಿಮ್ಮ ಬಟ್ಟೆಗಳನ್ನು ಒಗೆದು ಇಸ್ತ್ರೀ ಮಾಡಿಸಬೇಕಿದ್ದರೆ ನಾಲ...

ನಿಮ್ಮ ಮಕ್ಕಳನ್ನು ಇವತ್ತು ನಮ್ಮ ಮನೆಯಲ್ಲಿ ಬಿಟ್ಟುಹೋ... ಐದನ್ನು ಒತ್ತಿ.

ನಿಮ್ಮ ಮಕ್ಕಳನ್ನು ಶಾಲೆಯಿಂದ ನಾವು ಕರೆತರಬೇಕಿದ್ದರೆ ಆ...

ಅಡುಗೆ ಮಾಡಿ ನಿಮ್ಮ ಮನೆಗೆ ಕಳುಹಿಸಬೇಕಿದ್ದರೆ ಏಳನ್ನು...

ನೀವು ನಮ್ಮ ಮನೆಗೆ ಊಟಕ್ಕೆ ಬರುತ್ತಿದ್ದರೆ ಎಂಟನ್ನು ಒತ್ತಿ...

ನಿಮಗೆ ಹಣದ ಅವಶ್ಯಕತೆ ಇತ್ತರೆ ಒಂಭತ್ತನ್ನು ಒತ್ತಿ.

ನಮ್ಮಿಬ್ಬರನ್ನು ಒಂದು ಸಿನಿಮಾಗೆ ಮತ್ತು ಆನಂತರ ಹ... ಊಟಕ್ಕೆ ಕರೆದುಕೊಂಡು ಹೋಗಲು ಇಚ್ಛಿಸಿದ್ದರೆ ಮಾತನ್ನು ಮು... . . . ನಾವು ಇಲ್ಲೇ ಕೇಳಿಸಿಕೊಳ್ಳುತ್ತಿದ್ದೇವೆ!

ಯೋಗೇಶ್ ಮಾಸ್ಟರ್ ಅವರ ಬಂಧನ, ಬಿಡುಗಡೆಯ ಸುತ್ತ



• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಕಂಡಹಾಗೆ

ನ್ನೆ ಬುಧವಾರ, 'ಘುಂಢಿ' ಕೃತಿಗೆ ಸಂಬಂಧಿಸಿದಂತೆ ಭವನದಲ್ಲಿ ಕರ್ನಾಟಕ ಕೋಮು ಸೌಹಾರ್ದ ಕರೆದಿದ್ದ ಸಭೆ ಅಭೂತಪೂರ್ವವಾಗಿ ನಡೆಯಿತು. ಬಂದಿದ್ದ ಹಿರಿಯ ಸಾಹಿತಿಗಳು, ಹೋರಾಟಗಾರರು, ಸಂಘಟನೆಗಳ ಮುಖಂಡರು ಎಲ್ಲರೂ ಯೋಗೇಶ್ ಅವರ ಬಂಧನವನ್ನು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹನ್ನು ಖಂಡಿಸಿದರು. ಸಭೆಗೆ ನಾನು ಯೋಗೇಶ್ ಕರೆದಿದ್ದೆ. ಅಲ್ಲಿದ್ದವರಲ್ಲಿ ಹೆಚ್ಚಿನ ಜನ ಯೋಗೇಶ್ ನೋಡಿದ್ದು ಅದೇ ಮೊದಲ ಬಾರಿ. ಸಭೆಯ ಹೇಗನ್ನಿಸಿತು?" ಎಂದು ಯೋಗೇಶ್ ಅವರನ್ನು "ತುಂಬಾ ಸಂತೋಷವಾಯಿತು. ಒಂದು ಹನಿ ಸಮುದ್ರವನ್ನು ಸೇರಿದಾಗ ಅದಕ್ಕೆ ಸಿಗುವಷ್ಟು ನನಗೆ ಸಿಕ್ಕಿತು" ಎಂದರು ಯೋಗೇಶ್.

ವಿವಾದ ಉದ್ಭವಿಸುವ ತನಕ ಯೋಗೇಶ್ ಅವರ ರಿಗೆ ಹೆಚ್ಚು ಗೊತ್ತಿರಲಿಲ್ಲ. ಸಹೋದರ ಕೆ.ಫಣಿರಾಜ್ ಫೋನ್ ಮಾಡಿ "ಇವರು ಯಾರು, ಎಲ್ಲಿದ್ದರು, ಮಾಡುತ್ತಿದ್ದರು ಎಂದು ಓದುಗರಿಗೆ ಪರಿಚಯಿಸು ಬಂದಿದ್ದರು. ಅದೇ ಆಶಯವನ್ನು ಇತರೆ ಹಲವಾರು ರೂ ವ್ಯಕ್ತಪಡಿಸಿದ್ದರು. ಆದ್ದರಿಂದ ಈ ವಾರ ಶ್ ಅವರೊಂದಿಗಿನ ದೀರ್ಘ ಸಂದರ್ಶನವನ್ನು ತ್ತಿದ್ದೇವೆ.

ನ್ನ ಕಳೆದ ವಾರದಲ್ಲಿ ಆದದ್ದು ಮತ್ತು ಅದರಲ್ಲಿ ಈ ಪತ್ರಿಕಾ ತಂಡದ ಪಾತ್ರವನ್ನು ಇಲ್ಲಿ ಹೇಳಿದರೆ ನಿಸುತ್ತಿದೆ.

ಸ್ಟ್ 24ರಂದು 'ಘುಂಢಿ' ಬಿಡುಗಡೆಯಾಗಿ ದಿನ ಅದರ ಬಗ್ಗೆ 'ಪ್ರಜಾವಾಣಿ'ಯಲ್ಲಿ ದ ವರದಿಯನ್ನು ಓದಿ ಸುಮ್ಮನಾಗಿದ್ದೆ. ದಿನ ಈ ಕೃತಿಯ ಸುತ್ತ ಹಲವು ಟಿವಿ ಗಳಲ್ಲಿ ಚರ್ಚೆಗಳು ಪ್ರಾರಂಭವಾದವು. ಯೂ ಇಂತಹ ವಿಷಯಗಳಿಗೆ ಟಿವಿ ಗಳು ಸದಾ ಕಾಯುತ್ತಿರುವುದರಿಂದ ಒಂದು ತಣ್ಣಗಾಗುತ್ತೆ ಎಂದು ಭಾವಿಸಿದ್ದೆ. ಆದರೆ ದ ದಿನಕ್ಕೆ ಇದರ ಸುತ್ತ ಹೆಚ್ಚಾಗುತ್ತಾ ಹೋಯಿತು. ದು ಕೃತಿ, ಇದನ್ನು ವ ಈ ಯೋಗೇಶ್ ಯಾರು, ಎಂಬೆಲ್ಲ ನನ್ನ ತಲೆಯನ್ನು ಈ ಪುಸ್ತಕದ ಬಗ್ಗೆ ವರೂ ಪತ್ರಿಕೆಯಲ್ಲಿ ಬೇಕು ಅನ್ನಿಸಿತು. ಆದರೆ ಶ್ ಅವರನ್ನು ಸುವುದು ಹೇಗೆ?

ದೃಷ್ಟವಶಾತ್ ಬುಧವಾರ ಕಚೇರಿಗೆ 'ಘುಂಢಿ' ಕೃತಿಯ ಪ್ರತಿಗಳು ಬಂದವು. ಆ ದಲ್ಲಿ ಯೋಗೇಶ್ ಮಾಸ್ಟರ್ ಫೋನ್ ನಂಬರ್ ಇತ್ತು. ಅವರಿಗೆ ಫೋನ್ ದರೆ ಅವರು ಕರೆಯನ್ನು ಸ್ವೀಕರಿಸಲಿಲ್ಲ. ಶಃ ಅವರಿಗೆ ಬೆದರಿಕೆ ಕರೆಗಳು ದಬೇಕೆಂದು ಲೆಕ್ಕಹಾಕಿದ ನಾನು ನನ್ನ ಹೆಸರು ಫೋನ್ ಮಾಡಿದ ಉದ್ದೇಶದ ಬಗ್ಗೆ ಅವರಿಗೆ ಕಳುಹಿಸಿದೆ. ಅದೇ ಸಮಯದಲ್ಲಿ ಈ ನ್ನು ಬಿಡುಗಡೆ ಮಾಡಿದ್ದ ಹಿರಿಯ ಲೇಖಕ ರಾಮಚಂದ್ರನ್ ಅವರಿಗೆ ಫೋನ್ ಮಾಡಿ ಕುರಿತಂತೆ ಒಂದು ವಿಮರ್ಶೆಯನ್ನು ಕೊಡುವಂತೆ ವಿನಂತಿಸಿದೆ.


ಹೊತ್ತಿನ ನಂತರ ಯೋಗೇಶ್ ಅವರು ಫೋನ್ ಮಾಡಿ "ಬೆದರಿಕೆ ಕರೆಗಳು ರುವುದರಿಂದ ಎಲ್ಲ ಕರೆಗಳನ್ನು ನಾನು ತ್ತಿಲ್ಲ. ಈಗ ನಿರೀಕ್ಷಣಾ ಜಾಮೀನಿಗೆ ವ್ಯವಸ್ಥೆ ಕೊಳ್ಳುವುದರಲ್ಲಿ ಬ್ಯುಸಿ ಇದ್ದೇನೆ. ಬಿಡುವು ಕೊಂಡು ನಿಮಗೆ ಫೋನ್ ಮಾಡುತ್ತೇನೆ" . ಅವರಿಗೆ ಒಂದಿಷ್ಟು ಧೈರ್ಯದ ಮಾತು ಸುಮ್ಮನಾದೆ.


ಮಾರನೆಯ ದಿನ, ಅಂದರೆ ಕಳೆದ ಗುರುವಾರ, ಪತ್ರಿಕೆ ಹೋಗುವ ತಯಾರಿಯಲ್ಲಿದ್ದಾಗ ಸಂಜೆಯ "ಕರಾವಳಿಯ ಪೊಲೀಸರು ನನ್ನನ್ನು ಬಂಧಿಸಿ ಕೊಂಡು ಹೋಗುತ್ತಿದ್ದಾರೆ" ಎಂದು ಯೋಗೇಶ್ ಎಸ್ಎಂಎಸ್ ಕಳುಹಿಸಿದರು. ಇದೇನಿದು ವಿಚಿತ್ರ, ಕೃತಿ ಬರೆದಿದ್ದಕ್ಕೆ ಬಂಧನವೇ ಎಂದು ನಾವೆಲ್ಲ ಸಿದೆವು. ಎಲ್ಲರಿಗೂ ಗೊತ್ತಿರುವಂತೆ ಈ ಹಿಂದೆ ದಲ್ಲಿ ಹಲವಾರು ಕಾದಂಬರಿಗಳು, ಲೇಖನಗಳು ಸಿಸಿಐಗಳು ... ವಿವಾದದ ಕೇಂದ್ರಬಿಂದುಗಳಾಗಿದ್ದರೂ ಯಾರೂ ಯಾರನ್ನೂ ಬಂಧಿಸಿರಲಿಲ್ಲ, ಅಷ್ಟೇ ಯಾಕೆ, ಕೋಮುವಾದಿ ಬಿಜೆಪಿ ಅಧಿಕಾರದಲ್ಲಿದ್ದಾಗ ವಿವೇಕಾನಂದರ ಬಗ್ಗೆ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಅವರು ಬರೆದ ಲೇಖನದ ವಿರುದ್ಧ ಚೆಡ್ಡಿಗಳು ಅದೆಷ್ಟೇ ದಾಂಧಲೆ ನಡೆಸಿದ್ದರೂ ಅವರನ್ನು ಬಂಧಿಸುವ ಮಟ್ಟಕ್ಕೆ ಸರ್ಕಾರ ಹೋಗಿರಲಿಲ್ಲ. ಈಗ ಪ್ರಗತಿಪರ, ಜಾತ್ಯತೀತ ಮತ್ತು ಸಮಾಜವಾದಿ ಸಿದ್ಧಾಂತದ ಅನುಯಾಯಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿರುವ ಸಂದರ್ಭದಲ್ಲಿ ಯೋಗೇಶರ ಬಂಧನ ಸಹಜವಾಗಿಯೇ ನಮ್ಮನ್ನೆಲ್ಲ ಗೊಂದಲಕ್ಕೆ ದೂಡಿತು.

ನಮ್ಮ ಪಾರ್ವತೀಶ್ ಮತ್ತು ಶಿವಸುಂದರ್ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಫೋನ್ ಮಾಡಿ ಏನಾಗುತ್ತಿದೆ ಎಂದು ವಿಚಾರಿಸಿದಾಗ "ಅವರನ್ನು ಬಂಧಿಸಿಲ್ಲ, ವಿಚಾರಣೆಗೆ ಕರೆದುಕೊಂಡು ಹೋಗಿದ್ದಾರೆ" ಎಂದು ಹೇಳಿದರು. ಪ್ರಾಯಶಃ ಯೋಗೇಶ್ ಅವರು ಈ ಅನಿರೀಕ್ಷಿತ ಬೆಳವಣಿಗೆಯಿಂದ ದುಗುಡಗೊಂಡು ತಮ್ಮನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಭಾವಿಸಿರಬೇಕು ಎಂದುಕೊಂಡೆ. ಆದರೂ ಅವರನ್ನೊಮ್ಮೆ ಕೇಳೋಣ ಎಂದು ಫೋನ್ ಮಾಡಿದರೆ ಅವರ ಜೊತೆ ಇದ್ದ ಶಂಕರ್ ಎಂಬುವವರು "ಇಲ್ಲ ಮೇಡಂ ಅರೆಸ್ಟ್ ಮಾಡಿದ್ದಾರೆ. ಇನ್ನು ಸ್ವಲ್ಪ ಹೊತ್ತಿನಲ್ಲೇ ಜಡ್ಜ್ ಮುಂದೆ ಕರೆದುಕೊಂಡುಹೋಗುತ್ತಾರಂತೆ" ಎಂದಾಗ ನಮಗೆ ಶಾಕ್ ಆಯಿತು.

ಕೂಡಲೇ ನಾನು ಸಿದ್ದರಾಮಯ್ಯನವರ ಆಪ್ತ ಸಹಾಯಕ ವೆಂಕಟೇಶ್ ಅವರಿಗೆ ಫೋನ್ ಮಾಡಿದೆ. "ಸಾಹೇಬರು ಮೀಟಿಂಗ್‌ನಲ್ಲಿದ್ದಾರೆ" ಎಂದರು. "ಅವರೊಂದಿಗೆ ಮುಖ್ಯವಾದ ವಿಷಯ ಮಾತಾಡೋದಿದೆ, ಅವರಿಗೆ ಫೋನ್ ಕೊಡಿ" ಅಂದೆ.

ವೆಂಕಟೇಶ್ ಮುಖ್ಯಮಂತ್ರಿಗೆ ಫೋನ್ ಕೊಟ್ಟಾಗ ಸಿದ್ದರಾಮಯ್ಯನವರಿಗೆ "ನೋಡಿ ಪೊಲೀಸರು 'ಘುಂಢಿ' ಅಂತ ಪುಸ್ತಕ ಬರೆದಿರುವ ಯೋಗೇಶ್ ಮಾಸ್ಟರ್ ಎಂಬುವವರನ್ನು ಬಂಧಿಸಿದ್ದಾರೆ. ಬಿಜೆಪಿ ಸರ್ಕಾರ ಇದ್ದಾಗಲೂ ಇಂತಹ ಪ್ರಕ್ರಿಯೆ ನಡೆದಿರಲಿಲ್ಲ, ಅಂತಹದರಲ್ಲಿ ನಿಮ್ಮ ಸರ್ಕಾರದಲ್ಲಿ ಇಂತಹದ್ದು ನಡೆಯುತ್ತದೆ ಎಂದರೆ ನಂಬಲಿಕ್ಕಾಗುತ್ತಿಲ್ಲ" ಎಂದು ಹೇಳಿದೆ.





ಅಲ್ಲಿಯುತನಕ ಸಿದ್ದರಾಮಯ್ಯನವರು 'ಘುಂಢಿ' ಬಗ್ಗೆಯಾಗಲಿ, ಯೋಗೇಶ್ ಮಾಸ್ಟರ್ ಬಗ್ಗೆಯಾಗಲಿ ಕೇಳಿಯೇ ಇರಲಿಲ್ಲ. ಅವರು ಫೋನ್ ಅನ್ನು ವೆಂಕಟೇಶ್ ಅವರಿಗೆ ಹಿಂದಿರುಗಿಸುತ್ತಾ "ಅದ್ಯಾರು ಯೋಗೇಶ್ ಅನ್ನೋವರನ್ನು ಅರೆಸ್ಟ್ ಮಾಡಿದ್ದಾರಂತೆ" ಎಂದು ಪ್ರಶ್ನಿಸಿದ್ದು ನನಗೆ ಕೇಳಿಸಿತು.

ನನ್ನಂತೆಯೇ ಅವತ್ತು ಹಿರಿಯ ಸಾಹಿತಿಗಳಾದ ಯು.ಆರ್.ಅನಂತಮೂರ್ತಿ ಮತ್ತು ಇತರರೂ ಸಿದ್ದರಾಮಯ್ಯನವರಿಗೆ ಈ ಬಗ್ಗೆ ಫೋನ್ ಮಾಡಿದರಂತೆ. ಆದರೆ ಸಿದ್ದರಾಮಯ್ಯನವರು ಯಾವುದೇ ಆದೇಶ ಕೊಡುವ ಮುನ್ನವೇ ಪೊಲೀಸರು ಯೋಗೇಶ್ ಮಾಸ್ಟರ್ ಅವರನ್ನು ಬಂಧಿಸಿಯಾಗಿತ್ತು. ಅಂದರೆ ವಿಷಯ ಅವರ ಕೈಯನ್ನೂ ಮೀರಿಹೋಗಿತ್ತು.

ಪತ್ರಿಕೆ ಕೂಡ ಮುದ್ರಣಕ್ಕೆ ಹೋಗಬೇಕಿದ್ದರಿಂದ 'ಘುಂಢಿ' ಕಾದಂಬರಿಯ ಬಗ್ಗೆ ರಾಮಚಂದ್ರನ್ ಅವರು ಬರೆದಿದ್ದ ವಿಮರ್ಶೆಯ ಪುಟದಲ್ಲೇ ಯೋಗೇಶ್ ಅವರ ಬಂಧನವನ್ನು ಖಂಡಿಸಿ ಒಂದು ಪುಟ್ಟ ಬಾಕ್ಸ್‌ಅನ್ನು ಪ್ರಕಟಿಸಿದೆವು.

ಮಾರನೆ ದಿನ ಇನ್ನೊಂದು ಬಿಕ್ಕಟ್ಟು ಎದುರಾಯಿತು. ಯೋಗೇಶ್ ಮಾಸ್ಟರ್ ಅವರು ಸಂಪರ್ಕಿಸಿದ್ದ ಹಿರಿಯ ವಕೀಲರು ಅವತ್ತು ಬೆಂಗಳೂರಿನಲ್ಲೇ ಇರಲಿಲ್ಲವಾದ್ದರಿಂದ ಅವರ ಪರ ಜಾಮೀನು ಅರ್ಜಿ ಸಲ್ಲಿಸುವವರೇ ಇಲ್ಲದಂತಾಗಿತ್ತು. ಯೋಗೇಶ್ ಮಾಸ್ಟರ್ ನನ್ನ ಸಹಾಯವನ್ನು ಕೋರಿದರು. ನಾನು ನಮ್ಮ ಹಿರಿಯ ವಕೀಲರಾದ ಬಿ.ಟಿ.ವೆಂಕಟೇಶ್ ಅವರಿಗೆ ಫೋನ್ ಮಾಡಿದರೆ ಅವತ್ತು ಅವರೂ ಕೂಡ ದೆಹಲಿಯಲ್ಲಿದ್ದರು. ಕೊನೆಗೆ ಇನ್ನೊಬ್ಬ ಮಿತ್ರ ವಕೀಲ ಜಗದೀಶ್ ಅವರಿಗೆ ಫೋನ್ ಮಾಡಿ ಯೋಗೇಶ್ ಪರ ವಕಾಲತ್ತನ್ನು ವಹಿಸಿಕೊಳ್ಳಬೇಕೆಂದು ಕೋರಿದೆ. ಅದಕ್ಕೆ ಒಪ್ಪಿದ ಜಗದೀಶ್ ಅವರು ನ್ಯಾಯಾಲಯಕ್ಕೆ ಹಾಜರಾಗಿ ಯೋಗೀಶ್ ಅವರಿಗೆ ಜಾಮೀನು ಸಿಗುವಂತೆ ನೋಡಿಕೊಂಡರು.

ಅದೇ ದಿನ ಸಿದ್ದರಾಮಯ್ಯನವರೂ ಯೋಗೇಶರನ್ನು ಬಂಧಿಸಿದ್ದಕ್ಕೆ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು ಎಂದು ಗೊತ್ತಾಯಿತು. "ಈ ಪುಸ್ತಕದ ವಿರುದ್ಧ ದೂರು ಸಲ್ಲಿಸಿರುವವರು ಯಾರು, ಅವರ ಸುತ್ತ ಯಾರಿದ್ದಾರೆ ಎಂದೆಲ್ಲ ನೋಡದೆ ಅವರನ್ನು ಅರೆಸ್ಟ್ ಮಾಡಿದ್ದೀರಲ್ಲ? ಇದನ್ನು ಮಾಡುವ ಮುಂಚೆ ನನಗೆ ವಿಷಯ ತಿಳಿಸಬೇಕಿತ್ತು, ಈಗ ನಾನು ಎಷ್ಟು ಜನರಿಗೆ ಉತ್ತರ ಕೊಡಬೇಕಿದೆ" ಎಂದೆಲ್ಲ ಪೊಲೀಸ್ ಅಧಿಕಾರಿಗಳಿಗೆ ಬೈದರಂತೆ.

ಅದೇ ದಿನ ಸಂಜೆಯ ಹೊತ್ತಿಗೆ ಯೋಗೇಶ್ ಅವರಿಗೆ ಜಾಮೀನು ಸಿಕ್ಕಿತು. ಕೂಡಲೇ ಅವರು ನನಗೆ ಫೋನ್ ಮಾಡಿ ಥ್ಯಾಂಕ್ಸ್ ಹೇಳಿದರು. ಅವರ ದನಿಯಲ್ಲಿ ನಿಟ್ಟುಸಿರು ಇದ್ದರೂ ಎಲ್ಲೋ ಒಂದು ಕಡೆ ಅಳುಕು ಇದೆ ಎಂದು ನನಗನ್ನಿಸಿತು. ಯಾತಕ್ಕೂ ಸೋಮವಾರ ಭೇಟಿ ಆಗೋಣ ಎಂದು ನಿರ್ಧರಿಸಿದೆವು.

ಭಾನುವಾರ ಬೆಳಗ್ಗೆ ನನಗೆ ಯೋಗೇಶ್ ಅವರು ಫೋನ್ ಮಾಡಿ "ನನ್ನ ವಿರುದ್ಧ ದೂರು ಕೊಟ್ಟಿರುವವರ ವಕೀಲರು ಫೋನ್ ಮಾಡಿದ್ದರು. ಅವರು ಹೇಳಿದ್ದೇನೆಂದರೆ ಅವರು ವಿರೋಧಿಸುವ ಪದಗಳನ್ನು ಮತ್ತು ಭಾಗಗಳನ್ನು ಕಾದಂಬರಿಯಿಂದ ತೆಗೆದು ಹಾಕಿದರೆ ಅವರು ನನ್ನ ವಿರುದ್ಧದ ದೂರುಗಳನ್ನು ವಾಪಸ್ ಪಡೆಯುತ್ತಾರಂತೆ. ಏನು ಮಾಡಲಿ?" ಎಂದು ಕೇಳಿದರು.

ಅದಕ್ಕೆ ನಾನು "ನೀವು ಬರೆದಿರುವ ಕಾದಂಬರಿಯನ್ನು ನಾನು ಓದಿಲ್ಲ, ನಮ್ಮ ತಂಡದ ಬೆಂಬಲ ನಿಮ್ಮ ಕಾದಂಬರಿಯಲ್ಲಿ ಏನಿದೆ ಎಂಬುದಕ್ಕಲ್ಲ, ಬದಲಾಗಿ ಬರೆಯುವ ಹಕ್ಕು ನಿಮಗಿದೆ ಎಂಬ ಕಾರಣಕ್ಕೆ. ಯಾರು ಏನನ್ನಾದರೂ ಬರೆಯುವ ಮುನ್ನ ಯಾವ ದೊಣ್ಣೆ ನಾಯಕನ ಅನುಮತಿ ಪಡೆಯುವ ಅವಶ್ಯಕತೆ ಇಲ್ಲ, ಯಾಕೆಂದರೆ ಯಾವ ವಿಷಯದ ಬಗ್ಗೆಯೇ ಆಗಲಿ ಎಲ್ಲರ ಸಮ್ಮತಿ ಪಡೆಯುವುದು ಅಸಾಧ್ಯ. ದೇವರು ಇದ್ದಾನೆಯೇ, ಇಲ್ಲವೇ, ಇದ್ದರೆ ದೇವರು ಪುರುಷನೋ, ಮಹಿಳೆಯೋ, ಹೆಸರೇನು, ರೂಪ ಏನು ಎಂದೆಲ್ಲಾ ಜಿಜ್ಞಾಸೆ ಇವೆ. ಈ ದೇಶದಲ್ಲಿ ಮಹಾತ್ಮ ಗಾಂಧಿಯ ಬಗ್ಗೆಯೇ ಸಮ್ಮತ ಇರಲಿಲ್ಲ, ಅವರನ್ನು ಹಿಂದೂ ಕೋಮುವಾದಿಗಳು ಕೊಂದು ಹಾಕಿದರು. ಹೀಗಿರುವಾಗ ಸಾವಿರಾರು ಪದಗಳ ಕಾದಂಬರಿಯಲ್ಲಿ ಯಾವುದು ಇರಬೇಕು, ಇರಬಾರದು ಎಂದು ನಿರ್ಧರಿಸಬೇಕಿರುವುದು ಅದನ್ನು ಬರೆದ ನೀವೇ ಹೊರತು ಬೇರೆ ಯಾರೂ ಅಲ್ಲ. ಅದಕ್ಕೆಲ್ಲ ಒಪ್ಪಬೇಡಿ" ಅಂದೆ.

ಮುಂದುವರೆದು "ನೀವು ಹೆದರಬೇಡಿ. ನಿಮಗೆ ಗೊತ್ತಿರಲಿಕ್ಕಿಲ್ಲ, ಆದರೆ ನಿಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ನಿಲ್ಲಲು ನಮ್ಮ ರಾಜ್ಯದಲ್ಲಿ ಸಾವಿರಾರು ಜನ ಇದ್ದಾರೆ. ಪೊಲೀಸು, ಬಂಧನ, ಕೋರ್ಟ್ ಇದೆಲ್ಲ ನಿಮಗೆ ಹೊಸದಾಗಿರುವುದರಿಂದ ನಿಮ್ಮಲ್ಲಿ ಒಂದು ರೀತಿಯ ಗೊಂದಲ ಶುರುವಾಗಿರಬೇಕು. ಎಲ್ಲೋ, ಏನೋ ತಪ್ಪು ಮಾಡಿದ್ದೀನಿ ಎಂಬ ಸಂಶಯವೂ ನಿಮ್ಮನ್ನು ಕಾಡುತ್ತಿರಬಹುದು. ನಿಮ್ಮ ಕಾದಂಬರಿ ಕೆಟ್ಟದಾಗಿದ್ದರೆ ಜನ ಅದನ್ನು ತಿರಸ್ಕರಿಸುತ್ತಾರೆ, ಚೆನ್ನಾಗಿದ್ದರೆ ಓದುತ್ತಾರೆ, ಅಷ್ಟೇ. ನೀವು ಯಾವುದಕ್ಕೂ ಹೆದರಬೇಡಿ" ಎಂದೆಲ್ಲ ಅವರಲ್ಲಿ ಧೈರ್ಯ ತುಂಬಿದೆ.

"ಹಾಗೆಯೇ ಮಾಡುತ್ತೇನೆ. ಅವರು ಮತ್ತೆ ಫೋನ್ ಮಾಡಿದರೆ ನಾನು ಅವರ ಕರೆಯನ್ನು ಸ್ವೀಕರಿಸಲ್ಲ" ಎಂದರು ಯೋಗೇಶ್.


ಸೋಮವಾರ ಅವರು ನಮ್ಮ ಕಚೇರಿಗೆ ಬಂದಾಗ ಅವರ ಹಿನ್ನೆಲೆ, ಆಸಕ್ತಿ ಕೆಲಸ ಇತ್ಯಾದಿಗಳ ಬಗ್ಗೆ ಚರ್ಚಿಸಿದೆವು. ನಮ್ಮನ್ನೆಲ್ಲ ಮಾತನಾಡಿಸಿದ ನಂತರ ಅವರಲ್ಲಿ ಇನ್ನಷ್ಟು ಧೈರ್ಯ ಮೂಡಿತು. ಯೋಗೇಶ್ ಮಾಸ್ಟರ್ ಅವರ ಪರಿಚಯ ಇಲ್ಲದಿದ್ದರೂ ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ಗಿರೀಶ್ ಕಾರ್ನಾಡ್, ಎ.ಕೆ.ಸುಬ್ಬಯ್ಯ, ಚಂದ್ರಶೇಖರ ಪಾಟೀಲ್, ಸಿ.ಎಸ್.ದ್ವಾರಕನಾಥ್, ಕೆ.ಎಲ್.ಅಶೋಕ್, ಲಲಿತಾ ನಾಯಕ್ ಅಲ್ಲದೆ ಇನ್ನೂ ಹಲವಾರು ಹಿರಿಯರು, ಪ್ರಮುಖರು ಸೇರಿದ್ದನ್ನು ನೋಡಿ ಯೋಗೇಶ್ ಪುಳಕಿತರಾದರು.




ಸಭೆಯಿಂದ ಹೊರಗೆ ಬಂದಾಗ "ಭಾನುವಾರ ಬೆಳಗ್ಗೆ ನಿಮ್ಮ ಜೊತೆ ಮಾತನಾಡುವವರೆಗೂ ನನ್ನೊಳಗೆ ಗೊಂದಲ ಇತ್ತು, ಅವರೊಂದಿಗೆ ಕಾಂಪ್ರಮೈಸ್ ಮಾಡಿಕೊಂಡುಬಿಡೋಣ ಅನ್ನಿಸುತ್ತಿತ್ತು. ನಿಮ್ಮಿಂದಾಗಿ ನನ್ನಲ್ಲಿ ವಿಶ್ವಾಸ ಮೂಡಿತು. ಇವತ್ತು ಇವರೆಲ್ಲ ನನ್ನ ಪರ ದನಿಗೂಡಿಸಿದ್ದು ನನಗೆ ನೆಮ್ಮದಿ ಮತ್ತು ಧೈರ್ಯವನ್ನು ನೀಡಿದೆ. ನಾನು ನಿಮ್ಮೆಲ್ಲರಿಗೂ ಧನ್ಯ" ಎಂದರು. ■

ಡಿಐಜಿ ವಂಜಾರ ರಾಜೀನಾಮೆ

ಕೈಕೊಟ್ಟ ಮೋದಿ ಬಾಯಿಬಿಟ್ಟ ವಂಜಾರ


ಮೋದಿ


ವಂಜಾ

ಫೇಕು ಮೋದಿಯ ಸರ್ಕಾರ ಮತ್ತೊಮ್ಮೆ ಇಕ್ಕಟ್ಟಿಗೆ ಸಿಲುಕಿದೆ. ಒಂದು ಕಾಲದಲ್ಲಿ ಈತನ ಕಟ್ಟಾಳು ಆಗಿದ್ದ ಡಿಐಜಿ ವಂಜಾರ ಮೋದಿ ಸರ್ಕಾರದ ವಿರುದ್ಧ ಹೊಸ ಬಾಂಬೊಂದನ್ನು ಸಿಡಿಸಿದ್ದಾನೆ. ಎನ್‌ಕೌಂಟರ್ ಸ್ಪೆಷಲಿಸ್ಟ್ ಎಂದೇ ಕುಖ್ಯಾತನಾಗಿದ್ದ ಡಿಐಜಿ ವಂಜಾರ ನಕಲಿ ಎನ್‌ಕೌಂಟರ್ ಕೇಸುಗಳಲ್ಲಿ ಸಿಲುಕಿಕೊಂಡು ಕಳೆದ ಆರು ವರ್ಷಗಳಿಂದಲೂ ಜೈಲಿನಲ್ಲಿರುವ ಈತ 10 ಪುಟಗಳ ರಾಜೀನಾಮೆ ಪತ್ರವನ್ನು ಬರೆದು ಅದರಲ್ಲಿ ಮೋದಿ ಸರ್ಕಾರದ ವಿಶ್ವಾಸದ್ರೋಹವನ್ನು ತರಾಟೆಗೆ ತೆಗೆದುಕೊಂಡಿದ್ದಾನೆ. ಆ ಪತ್ರದ ಮುಖ್ಯಾಂಶಗಳನ್ನು ನೋಡಿ.

"ಗೋದ್ರಾ ಘಟನೆಯ ನಂತರ ಜಿಹಾದಿ ಚಟುವಟಿಕೆಯನ್ನು ನಿಯಂತ್ರಿಸುವ ಸಲುವಾಗಿ ಸರ್ಕಾರ ಅಳವಡಿಸಿಕೊಂಡ ಪ್ರಜ್ಞಾಪೂರ್ವಕ ಕ್ರಮಗಳ ಭಾಗವಾಗಿಯೇ ಈ ಎನ್‌ಕೌಂಟರ್‌ಗಳು ನಡೆದಿವೆ, ಇದರಲ್ಲಿ ಮಾಜಿ ಗೃಹಸಚಿವ ಅಮಿತ್ ಷಾ ಪ್ರಮುಖ ವ್ಯೂಹ ರಚನಕಾರ..

"ಗೃಹಮಂತ್ರಿ ಅಮಿತ್‌ಶಾ ಬಂಧಿತನಾದ ಕೂಡಲೆ ಸಕ್ರಿಯವಾದ ಈ ಸರ್ಕಾರ ಆತನ ಪರವಾಗಿ ದೇಶದ ಹೆಸರಾಂತ ಹಾಗೂ ದುಬಾರಿ ವಕೀಲರಾಗಿರುವ ರಾಮ್‌ಜೇಠ್ಮಲಾನಿಯಂಥವರನ್ನು ನೇಮಿಸಲಾಯ್ತು. ಕೆಳಹಂತದ ಕೋರ್ಟ್‌ಗಳಿಂದ ಹಿಡಿದು ಎಲ್ಲಾ ಕಡೆಯೂ ಜೇಠ್‌ಮಲಾನಿಯವರೇ ವಕಾಲತ್ತು ವಹಿಸುವಂತೆ ಏರ್ಪಾಟು ಮಾಡಲಾಯ್ತು, ಜೊತೆಗೆ ನಾನಾರೀತಿಯ ರಾಜಕೀಯ ಒತ್ತಡಗಳನ್ನೂ ಬಳಸಲಾಯ್ತು. ಹೀಗೆ ಕೇವಲ ಮೂರೇ ತಿಂಗಳಲ್ಲಿ ಅಮಿತ್‌ಶಾನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಸಿಕೊಂಡಿರುವ ಈ ಸರ್ಕಾರ ಆರು ವರ್ಷಗಳಿಂದಲೂ ಜೈಲಿನಲ್ಲೇ ಕೊಳೆಯುತ್ತಿರುವ ಪೊಲೀಸ್ ಅಧಿಕಾರಿಗಳ ಬಗ್ಗೆ ಕನಿಷ್ಠ ಕಾಳಜಿಯನ್ನೂ ತೋರುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ; ಮಾತ್ರವಲ್ಲ ತಮ್ಮನ್ನು ತಾವು ಬಚಾವು ಮಾಡಿಕೊಳ್ಳುವ ಸಲುವಾಗಿ ಪೊಲೀಸ್ ಅಧಿಕಾರಿಗಳು ಜೈಲಿನಲ್ಲೇ ಉಳಿಯುವಂತೆ ಮಾಡುವ ಷಡ್ಯಂತ್ರ ಇದರಲ್ಲಿ ಎದ್ದು ಕಾಣುತ್ತಿದೆ. .. ..

"ಬ್ರಿಟಿಷರ ಒಡೆದು ಆಳುವ ನೀತಿಯನ್ನು ಜಾರಿ ಮಾಡುವುದರ ಜೊತೆಗೆ ಪೊಲೀಸರನ್ನು ಬಳಸಿ ಬಿಸಾಡುವ ವಸ್ತುವಂತೆ ಕಾಣುತ್ತಿದ್ದಾರೆ. ಪೊಲೀಸರು ಮತ್ತು ರಾಜಕಾರಣಿಗಳು ಒಂದೇ ದೋಣಿಯ ನಾವಿಕರಿದ್ದಂತೆ. ಪರಸ್ಪರ ಸಹಕಾರ ಮತ್ತು ರಕ್ಷಣೆಯಲ್ಲೇ ಇಬ್ಬರಿಗೂ ಒಳಿತು ಎಂಬುದನ್ನು ಮರೆಯಬಾರದು. ನಮಗೆ ಈ ರೀತಿಯಲ್ಲಿ ಬೆನ್ನಹಿಂದೆ ಚೂರಿಹಾಕಿದ ಸರ್ಕಾರವನ್ನು ರಕ್ಷಿಸುವ ಹೊಣೆ ಏಕಮುಖವಾಗಿ ನಮ್ಮ ಮೇಲಿದೆಯೆಂದು ಯಾರೂ ಭಾವಿಸಬೇಕಾಗಿಲ್ಲ.

"ಇಂದಿನ ಸರ್ಕಾರದ ಆಯಕಟ್ಟಿನ ಸ್ಥಾನದಲ್ಲಿರುವ ಮಂದಿಯಿಂದ ನನಗೆ ಪ್ರತಿದಿನ ಹತ್ತಾರು ಫೋನ್‌ಗಳು ಬರುತ್ತಿದ್ದವು. ಅವರೆಲ್ಲರ ರಕ್ಷಣೆಗೂ ನಾನು ಬೇಕಿತ್ತು. ಈಗ ಕಳೆದ ಆರು ವರ್ಷಗಳಿಂದಲೂ ಜೈಲಿನಲ್ಲಿ ಕೊಳೆಯುತ್ತಿರುವ ನಮ್ಮ ಯೋಗಕ್ಷೇಮ ವಿಚಾರಿಸುವವರೂ ಇಲ್ಲದಂತಾಗಿದೆ....

"ಈ ಹಿಂದೆ ಗುಜರಾತ್ ಸರ್ಕಾರದ ಅಸ್ತಿತ್ವದ ಪ್ರಶ್ನೆ ಎದುರಾದ ಎಲ್ಲ ಸಂದರ್ಭಗಳಲ್ಲಿ ನಾನು ಮತ್ತು ಇತರೆ ಅಧಿಕಾರಿಗಳು ನಮ್ಮ ಶಕ್ತಿಮೀರಿ ಪ್ರಯತ್ನಿಸಿ ಈ ಸರ್ಕಾರವನ್ನು ಉಳಿಸಿದ್ದೇವೆ. ಆದರೆ ಇಂದು ನಮ್ಮ ನಂಬಿಕೆಗೆ ಇವರು ದ್ರೋಹ ಬಗೆದಿದ್ದಾರೆ....

"ಸಿಖ್‌ಧರ್ಮದ ಸ್ಥಾಪಕ ಗುರುಗೋವಿಂದ್‌ಸಿಂಗ್ ಬೋಧಿಸಿರುವ ಪ್ರಕಾರ ನ್ಯಾಯ ಪಡೆದುಕೊಳ್ಳಲು ಇರುವ ಎಲ್ಲಾ ದಾರಿಗಳು, ಬಾಗಿಲುಗಳು ಮುಚ್ಚಿದ ನಂತರ ಖಡ್ಗ ಹಿಡಿಯುವುದೇ ಧರ್ಮವೆನಿಸಿಕೊಳ್ಳುತ್ತದೆ....

"ನರೇಂದ್ರ ಮೋದಿಯನ್ನು ದೇವರೆಂದೇ ನಂಬಿಕೊಂಡಿದ್ದ ನಮಗೆ ವಿಶ್ವಾಸದ್ರೋಹ ಮಾಡಿದ್ದಾರೆ, ತಮ್ಮ ರಾಜಕೀಯ ಲಾಭಕ್ಕಾಗಿ ನಮ್ಮನ್ನು ಬಳಸಿಕೊಂಡು, ಈಗ ನಮ್ಮನ್ನು ಕೈಬಿಟ್ಟಿದ್ದಾರೆ..

"ನಮ್ಮನ್ನು ಅರೆಸ್ಟ್ ಮಾಡಿರುವ ಸಿಬಿಐ ಮತ್ತು ಗುಜರಾತ್ ಇಂಟೆಲಿಜೆನ್ಸ್ ಬ್ಯೂರೊದವರು ಸರ್ಕಾರದ ನೀತಿ ನಿರೂಪಕರಾಗಿದ್ದ ಮಂತ್ರಿಮಾನ್ಯರನ್ನೂ ಅರೆಸ್ಟ್ ಮಾಡಬೇಕು. ನಾವು ಕೇವಲ ಸರ್ಕಾರದ ಫೀಲ್ಡ್ ಆಫೀಸರ್‌ಗಳಾಗಿದ್ದು, ಸರ್ಕಾರದ ಪ್ರಜ್ಞಾಪೂರ್ವಕ ತೀರ್ಮಾನಗಳನ್ನು ಜಾರಿ ಮಾಡಿರುವುದಷ್ಟೆ ನಮ್ಮ ಕೆಲಸ... ಈ ಸರ್ಕಾರದ ತೀರ್ಮಾನಗಳಿಂದಾಗಿ 32 ಪೊಲೀಸ್ ಅಧಿಕಾರಿಗಳು ಜೈಲು ಸೇರುವಂತಾಯಿತು.... ನಮ್ಮನ್ನು ಶಿಕ್ಷಿಸುವುದಾದರೆ ಇದೇ ಕಾರಣಕ್ಕಾಗಿ ಈಗಿನ ಗುಜರಾತ್ ಸರ್ಕಾರ ಗಾಂಧಿನಗರದಲ್ಲಿ ಕೂರುವ ಬದಲು ಮುಂಬೈನಲ್ಲಿರುವ ತಲೋಜಾ ಸೆಂಟ್ರಲ್ ಜೈಲಿನಲ್ಲಿ ಅಥವ ಅಹಮದಾಬಾದ್‌ನ ಸಬರಮತಿ ಸೆಂಟ್ರಲ್‌ಜೈಲ್‌ನಲ್ಲಿರುವುದೇ ಸೂಕ್ತ ಎಂಬ ದೃಢ ಅಭಿಪ್ರಾಯ ನನ್ನದು ...'

ಈ ಮಾತುಗಳನ್ನು ಆಡುತ್ತಿರುವವರು ಕಾಂಗ್ರೆಸ್‌ನವರೋ ಅಥವ ಪ್ರಗತಿಪರರೋ ಅಲ್ಲ; ಸ್ವತಃ ನರೇಂದ್ರ ಮೋದಿ ಹಾಗೂ ಗೃಹ ಮಂತ್ರಿ ಅಮಿತ್ ಶಾರ ಪರಮಾಪ್ತನಾಗಿದ್ದ ಪೊಲೀಸ್ ಉನ್ನತಾಧಿಕಾರಿ ಡಿಐಜಿ ವಂಜಾರ ವ್ಯಕ್ತಪಡಿಸಿರುವ ಅಭಿಪ್ರಾಯಗಳಿವು.

1987ರ ಐಪಿಎಸ್ ಕೇಡರ್ ಆಗಿರುವ ವಂಜಾರ ಸದ್ಯ ಅಮಾನತುಗೊಂಡು 6 ವರ್ಷಗಳಿಂದ ಸಬರ್‌ಮತಿ ಜೈಲಿನಲ್ಲಿದ್ದಾನೆ. ಆತನ ಅಧಿಕಾರಾವಧಿಯಲ್ಲಿ ಮೋದಿ ಸರ್ಕಾರದೊಂದಿಗೆ ಕೈಜೋಡಿಸಿ ಮಾಡಿದ ಅಕ್ರಮಗಳಿಗೆ, ಕೊಲೆ ಸುಲಿಗೆಗಳಿಗೆ ಲೆಕ್ಕವೇ ಇಲ್ಲ, ಮಾಡಿದ ಎನ್‌ಕೌಂಟರ್‌ಗಳಿಗೆ ಲೆಕ್ಕವೇ ಇಲ್ಲ; ಈತನಿಂದ ಹತರಾದವರಿಗೆ ಮೋದಿಯನ್ನು ಕೊಲ್ಲಲು ಸಂಚು ಮಾಡಿದ್ದ ಆರೋಪ ಹೊರಿಸಲಾಗಿತ್ತು.

2004ರಲ್ಲಿ ಇಶ್ರತ್ ಜಹಾನ್ ಎಂಬ 19 ವರ್ಷದ ವಿದ್ಯಾರ್ಥಿನಿ ಮತ್ತು ಇತರ ಮೂವರು ವಿದ್ಯಾರ್ಥಿಗಳನ್ನು ಅಹಮದಾಬಾದ್‌ನ ಹೊರವಲಯದಲ್ಲಿ ಪೊಲೀಸರು ಗುಂಡಿಟ್ಟು ಕೊಂದುಹಾಕಿದ್ದರು. ಪೊಲೀಸರ ಕತೆಯ ಪ್ರಕಾರ ಇವರೆಲ್ಲಾ ಲಷ್ಕರ್-ಇ-ತೊಯ್ಬಾ ಗುಂಪಿನ ಟೆರ್ರರಿಸ್ಟುಗಳು!

2005ರಲ್ಲಿ ವಂಜಾರ ಭಯೋತ್ಪಾದನಾ ನಿಗ್ರಹ ದಳದ ಮುಖ್ಯಸ್ಥನಾಗಿದ್ದ ಸೊಹ್ರಾಬುದ್ದೀನ್ ಶೇಕ್ ಎಂಬ ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಯನ್ನು ಮತ್ತು ಆತನ ಪತ್ನಿಯನ್ನು ಒಂದು ಬಸ್ಸಿನಿಂದ ಇಳಿಸಿಕೊಂಡು ಕರೆದೊಯ್ದು ಎಟಿಎಸ್ ಪೊಲೀಸರು ಅಹಮದಾಬಾದ್ ಬಳಿಯ ಒಂದು ಫಾರ್ಮ್‌ಹೌಸ್‌ನಲ್ಲಿ ಕೂಡಿಹಾಕಿದ್ದರು. ಕೆಲದಿನಗಳ ನಂತರ ಸೊಹ್ರಾಬುದ್ದೀನ್‌ನನ್ನು ಹೆದ್ದಾರಿಯ ಬದಿಯಲ್ಲಿ ನಕಲಿ ಎನ್‌ಕೌಂಟರ್‌ನಲ್ಲಿ ಕೊಲ್ಲಲಾಯಿತು. ಆತನ ಪತ್ನಿ ಕೌಸರ್ ಬಾನೋ ನಿಗೂಢವಾಗಿ ನಾಪತ್ತೆಯಾದಳು. ಸೊಹ್ರಾಬುದ್ದೀನ್ ಹತ್ಯೆಯ ನಂತರ ವಂಜಾರ ಮಾಮೂಲಿನಂತೆ ಪತ್ರಿಕಾಗೋಷ್ಠಿ ಕರೆದು ಸೊಹ್ರಾಬುದ್ದೀನ್ ಲಷ್ಕರ್ ಭಯೋತ್ಪಾದಕನೆಂತಲೂ, ಆತ ಮೋದಿಯನ್ನು ಕೊಲೆ ಮಾಡುವ ಸಂಚು ರೂಪಿಸಿದ್ದನೆಂದೂ ಬೊಗಳಿದ. ದೇಶಾದ್ಯಂತ ಮಾಧ್ಯಮಗಳು ಈ ಸುದ್ದಿಯನ್ನು ವರ್ಣರಂಜಿತವಾಗಿ ಬಿಂಬಿಸಿದವು.

ಸೊಹ್ರಾಬುದ್ದೀನ್‌ನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದು, ಅದಕ್ಕೆ ಸಾಕ್ಷಿಯಾಗಿದ್ದ ಆತನ ಪತ್ನಿಯನ್ನೂ ಕೊಂದು ಹಾಕಿರುವ ಮೋದಿಯ ಖಾಕಿ ಗ್ಯಾಂಗ್ ಸಾಕ್ಷ್ಯನಾಶ ಮಾಡುವ ಸಲುವಾಗಿ ಆಕೆಯ ದೇಹವನ್ನು ಸುಟ್ಟುಹಾಕಿದ್ದಾರೆಂಬ ಸತ್ಯವನ್ನು ದೈನಿಕ ಭಾಸ್ಕರ್ ಎಂಬ ಗುಜರಾತಿ ಪತ್ರಿಕೆಯಲ್ಲಿ ವರದಿಗಾರ ಸಾಕ್ಷಗಳ ಸಮೇತ ಪ್ರಕಟಿಸಿದ. ಅಲ್ಲಿಗೆ ಈ ಘಟನೆ ನಡೆದು ಒಂದು ವರ್ಷ ಕಳೆದುಹೋಗಿತ್ತು. ಹೀಗೆ ಪ್ರಕರಣ ಹೊಸ ತಿರುವು ಪಡೆದುಕೊಂಡು ಕೋರ್ಟ್‌ಗಳು ಇದನ್ನು ಗಂಭೀರವಾಗಿ ಪರಿಗಣಿಸಲು ಕಾರಣವಾಯಿತು.

2006ರ ಡಿಸೆಂಬರ್ 13ರಂದು ಗುಜರಾತ್ ಸಿಐಡಿ ಅಧಿಕಾರಿ ವಿ.ಎಲ್. ಸೋಲಂಕಿ ಸೊಹ್ರಾಬುದ್ದೀನ್ ಎನ್‌ಕೌಂಟರ್‌ಗೆ ಪ್ರತ್ಯಕ್ಷ ಸಾಕ್ಷಿಯಾಗಿದ್ದ ತುಳ[...] ಪ್ರಜಾಪತಿಯ ಹೇಳಿಕೆ ಪಡೆಯಲು ಅ[...] ನೀಡಬೇಕೆಂದು ಕೋರಿದ್ದರು. ಆದರೆ ಅ[...] ನಿರಾಕರಿಸಲಾಗಿತ್ತು. ಈ ಕೊಲೆಯ ಸಂ[...] ಒಂದುವಾರದ ಅವಧಿಯಲ್ಲಿ ಗೃಹಮಂತ್ರಿ ಅಮಿ[...] ಡಿಐಜಿ ವಂಜಾರಾ, ಎಸ್‌ಪಿ ವಿಪುಲ್‌ಕುಮಾರ್, ರಾಜಕುಮಾರ್ ಪಾಂಡ್ಯನ್ ಮತ್ತು ರಾಜಸ್ಥಾನದ ಪ[...] ಅಧಿಕಾರಿ ದಿನೇಶ್ ಎಂಎನ್‌ರ ನಡುವೆ ನಡೆದ ಟೆಲಿ[...] ಸಂಭಾಷಣೆ ಈ ಪೂರ್ವನಿಯೋಜಿತ [...] ಸಾಕ್ಷಿಯಾಗುಳಿದಿದೆ. ಪ್ರಜಾಪತಿ 2006ರಲ್ಲಿ ಬ[...] ಜಿಲ್ಲೆಯಲ್ಲಿ ಎನ್‌ಕೌಂಟರ್ ಹೆಸರಿನಲ್ಲಿ ಕೊಲ್ಲಲ[...] ಕೊಲೆಗೆ ಕೆಲವೇ ದಿನಗಳ ಮೊದಲು ವಂಜ[...] ನಕಲಿ ಎನ್‌ಕೌಂಟರ್ ನಡೆದ ಪ್ರದೇಶಕ್ಕೆ ವರ್ಗಾವ[...] ಬಂದಿದ್ದ. ತನ್ನನ್ನು ನಕಲಿ ಎನ್‌ಕೌಂಟರ್‌ನಲ್ಲಿ [...] ಸಂಚು ನಡೆದಿರುವುದರಿಂದ ತನಗೆ ರಕ್ಷಣೆ ನೀಡ[...]


ಇಶ್ರತ್ ಜಹಾನ್ ಜೊತೆ ನಕಲಿ ಎನ್‌ಕೌಂಟರ್‌ಗೆ ಬಲಿಯಾದವರು


ಇಶ್ರತ್ ಜಹಾನ್

ಪ್ರಜಾಪತಿ ಕೆಲವು ದಿನಗಳ ಮೊದಲೇ ಉದ[...] ಕೋರ್ಟ್‌ಗೆ ಅಹವಾಲು ಸಲ್ಲಿಸಿದ್ದ ಎಂಬು[...] ಗಮನಾರ್ಹ.

ನಕಲಿ ಎನ್‌ಕೌಂಟರ್‌ನಲ್ಲಿ ಸತ್ತವರ ಬ[...] ಹೈಕೋರ್ಟ್ ಮೆಟ್ಟಿಲೇರಿದರು. ಹಲವಾರು [...] ಹಕ್ಕು ಸಂಘಸಂಸ್ಥೆಗಳು ಸಹಾಯಕ್ಕೆ ನಿಂತವು. ಮೇಲ[...] ಅನೇಕ ಅನುಮಾನಗಳಿಗೆ ಎಡೆಮಾಡಿಕೊಟ್ಟಿದ್ದ [...] ಗುಜರಾತ್ ಹೈಕೋರ್ಟ್ ಗಂಭೀರವಾಗಿ ಪರಿಗಣ[...] ತನಿಖಾದಳ ನೇಮಿಸಿತು. ಆ ನಾಲ್ವರು ವಿದ[...] ಎನ್‌ಕೌಂಟರ್‌ನಲ್ಲಿ ಸಾಯುವ ಕೆಲದಿನಗಳ [...] ಪೊಲೀಸ್ ಕಸ್ಟಡಿಯಲ್ಲಿದ್ದರು ಎಂಬ ಆಘಾತಕ[...] ವಿಶೇಷ ತನಿಖಾ ದಳ ನೀಡಿದ ವರದಿಯಿಂದ ಬಂ[...] ನಂತರ ಹೈಕೋರ್ಟ್ ಈ ಕೇಸನ್ನು ಸಿಬಿಐ[...] ಆದೇಶ ಹೊರಡಿಸಿತು. ಸಿಬಿಐ ಚಾಜ[...] ಸಲ್ಲಿಸುವವರೆಗೂ ಈ ಪ್ರಕರಣದ ಖುದ್ದು ಮೇ[...] ನಡೆಸಿತು. ಈ ನತದೃಷ್ಟ ವಿದ್ಯಾರ್ಥಿಗಳು [...] ವಿಶ್ವವಿದ್ಯಾಲ[...] ವಿದ್ಯಾರ್ಥಿಗಳಾಗಿದ್ದರು ಎ[...] ಇಲ್ಲಿ ಉಲ್ಲೇಖಿಸಲೇಬೇಕು.

2007ರ [...] ಐಪಿ[...] ಗುಜರಾತ್‌ನ ಸಿಐಡಿ [...] ವಂಜಾರ ಮತ್ತು ಇನ್ನಿಬ್ಬರು [...] ಅಧಿಕಾರಿಗಳನ್ನು ಸೊಹ್ರಾ[...] ನಕಲಿ ಎನ್‌ಕೌಂಟರ್ [...] ಬಂಧಿಸಿದರು. ಈತನ [...] ನಂತರ ಇವರು ನಡೆಸಿದ್ದ [...] ನಕಲಿ ಎನ್‌ಕೌಂಟರ್ [...] ಬೆಳಕಿಗೆ ಬಂದವು.

ಹೀಗೆ ಜಿ.ಎಲ್.[...]

ಬಾಡಿಗೆ ಹಂತಕರಾದ ಗುಜರಾತ್ ಪೊಲೀಸರು!


ಸೊಹ್ರಾಬುದ್ದೀನ್‌ನ ಎನ್‌ಕೌಂಟರ್‌ಗೂ ಪಕ್ಕದ ರಾಜಾಸ್ಥಾನದ ಮಾರ್ಬಲ್ ವ್ಯಾಪಾರದ ಲಾಬಿಗೂ ನೇರವಾದ ಸಂಬಂಧವಿರುವುದು ಬಯಲಿಗೆ ಬಂದಿದೆ. ಇಲ್ಲಿನ ಮಾರ್ಬಲ್ ಉದ್ಯಮಿಗಳಿಂದ ಹಫ್ತಾ ವಸೂಲಿ ಮಾಡಲು ಇದೇ ಸೊಹ್ರಾಬುದ್ದೀನ್ ಪೊಲೀಸ್ ಉನ್ನತಾಧಿಕಾರಿ ಅಭಯ್ ಚೂಡಸ ಏಜೆಂಟ್ ಆಗಿ ಕೆಲಸ ಮಾಡುತ್ತಿದ್ದ. ಅವರಿಬ್ಬರ ಮಧ್ಯೆ ಭಿನ್ನಾಭಿಪ್ರಾಯವೇರ್ಪಟ್ಟು ಈತನನ್ನು ಮುಗಿಸಿಬಿಡಲು ನಿರ್ಧರಿಸಿದ ಅಭಯ್ ಗುಜರಾತ್‌ನ ಗೃಹಮಂತ್ರಿಯಾಗಿದ್ದ ತನ್ನ ಆಪ್ತ ಮಿತ್ರ ಅಮಿತ್ ಶಾನ ಸಹಾಯ ಕೋರಿದ.

ಇದು ಬರೋಬ್ಬರಿ 10 ಕೋಟಿಗಳ ಡೀಲ್ ಆಗಿತ್ತು,

ನಕಲಿ ಎನ್‌ಕೌಂಟರ್ ಮಾಡಿಸಿ ಮುಚ್ಚಿ ಹಾಕುವುದರಲ್ಲಿ ನಿಪುಣನಾಗಿದ್ದ ಅಮಿತ್ ಶಾ ತನ್ನ ನೆಚ್ಚಿನ ಪೊಲೀಸ್ ಅಧಿಕಾರಿ ಡಿಐಜಿ ವಂಜಾರ ಅಂಡ್ ಟೀಮ್‌ಗೆ ಈ ಡೀಲ್ ವಹಿಸಿಕೊಟ್ಟ. ಈ ಡೀಲ್‌ನಲ್ಲಿ ರಾಜಾಸ್ಥಾನ್ ಬಿಜೆಪಿಯ ನಾಯಕರಾದ ಓಂ ಮಾಥುರ್ ಮತ್ತು ಗುಲಾಬ್‌ಚಂದ್ ಕಟಾರಿಯ ಹಾಗೂ ರಾಜಸ್ಥಾನದ ಪೊಲೀಸ್ ಅಧಿಕಾರಿ ದಿನೇಶ್ ಎಂ.ಎನ್ ಸಕ್ರಿಯವಾಗಿ ಪಾಲ್ಗೊಂಡರು.

ಹೀಗೆ ಖಾಕಿಗಳನ್ನೇ ಬಳಸಿ ರಚಿಸಲಾದ ಹಂತಕ ಪಡೆ ಸೊಹ್ರಾಬುದ್ದೀನ್ ಎಂಬ ಕ್ರಿಮಿನಲ್‌ನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದುಹಾಕಿ ತಮ್ಮ ಪಾಲನ್ನು ಜೇಬಿಗಿಳಿಸಿಕೊಂಡರು; ಲಷ್ಕರ್-ಇ-ತೊಯ್ಬಾ ಕತೆ ಹೆಣೆದು ಪತ್ರಿಕೆಗಳಿಗೆ ಪೋಸು ನೀಡಿದರು.

ಆದರೆ ಈ ಖಾಕಿ ಕ್ರಿಮಿನಲ್ ಕೂಟದ ಅದೃಷ್ಟ ನೆಟ್ಟಗಿರಲಿಲ್ಲ. ಈಗ ಮೇಲಿನ ಎಲ್ಲಾ ಅಂಶಗಳು ಸಿಬಿಐ ದಾಖಲಿಸಿಕೊಂಡಿರುವ ಸಾಕ್ಷಿಗಳ ಹೇಳಿಕೆಯ ಫೈಲಿನಲ್ಲಿ ಭದ್ರವಾಗಿ ಕುಳಿತಿವೆ. ಪರಿಣಾಮವಾಗಿ ಒಬ್ಬೊಬ್ಬರೇ ಜೈಲು ಸೇರುತ್ತಿದ್ದಾರೆ.



ಂಜು ಚೌಧರಿ ಎಂಬ ನಾಲ್ವರು ಅಧಿಕಾರಿಗಳು ಜೈಲು ಸೇರಿದರು. ಾಡೆ ಎಂಬ ಮತ್ತೊಬ್ಬ ಅಧಿಕಾರಿ ಸುಮಾರು ಮೂರು ತಿಂಗಳ ಲೆಮರೆಸಿಕೊಂಡು ಅಡ್ಡಾಡಿದ ನಂತರ ಈಗ ಜೈಲು ಸೇರಿದ್ದಾನೆ. ಜಾರಾ ಮತ್ತು ಎನ್.ಕೆ ಅಮಿನ್ ಮೊದಲಾದವರು ಸೊಹ್ರಾಬುದ್ದೀನ್ ಈಗಾಗಲೇ ಕಳೆದ 6 ವರ್ಷಗಳಿಂದ ಜೈಲುವಾಸ ಅನುಭವಿಸುತ್ತಿದ್ದಾರೆ. ಕೇಸನ್ನು ಹಳ್ಳಹಿಡಿಸಲು ಮೋದಿ ಸರ್ಕಾರ ನಾನಾ ಪ್ರಯತ್ನ ನಡೆಸಿ ಗಿದೆ. ಗುಜರಾತ್ ಸರ್ಕಾರದ ಅಡಿಯಲ್ಲಿರುವ ವಿಶೇಷ ತನಿಖಾ ಧಿಕಾರಿಯಾಗಿರುವ ಸತೀಶ್ ವರ್ಮ ಅವರನ್ನು ಮುಂದುವರೆಸಬಾರದು ುಜರಾತ್ ಸರ್ಕಾರ ಹೈಕೋರ್ಟ್‌ನಲ್ಲಿ ವಾದಿಸಿ, ನ್ಯಾಯಾಧೀಶರಿಂದ ಗೆ ಒಳಗಾಗಿತ್ತು. ಆ ಸಂದರ್ಭದಲ್ಲಿ ನ್ಯಾಯಾಧೀಶರು "ನಿಮ್ಮ ಕಾನೂನು ಪಾಲಿಸುವ ಬದಲು ಪೊಳ್ಳು ಎನ್‌ಕೌಂಟರ್‌ನ ಗಳನ್ನು ರಕ್ಷಿಸಲು ಬದ್ಧವಾಗಿದೆಯೇ?" ಎಂದು ಪ್ರಶ್ನಿಸಿದ್ದರು.


ಾಪತಿ ನಕಲಿ ಎನ್‌ಕೌಂಟರ್ ಕೇಸಿನ ಬಗ್ಗೆ ಕೋರ್ಟಿನಲ್ಲಿ ದಾವೆ ಪ್ರಜಾಪತಿಯ ಅಣ್ಣ ಮತ್ತು ಆತನ ತಾಯಿಗೆ 20 ಲಕ್ಷಗಳ ಒಡ್ಡಿ ಈ ಕೇಸಿನಲ್ಲಿ ಪ್ರತಿಕೂಲ ಸಾಕ್ಷಿಗಳಾಗುವಂತೆ ಮಾಡಲು ಹಿರಿಯ ನಾಯಕರಾದ ಪ್ರಕಾಶ್ ಜಾವಡೇಕರ್, ಭೂಪೇಂದ್ರ ಮುಂತಾದವರು ನಡೆಸಿದ ಷಡ್ಯಂತ್ರವನ್ನು ಪುಷ್ಪ ಶರ್ಮ ಎಂಬ ಸ್ಟಿಂಗ್ ಆಪರೇಷನ್ ಮೂಲಕ ಬಹಿರಂಗಗೊಳಿಸಿದ್ದಾರೆ.

ಅಧಿಕಾರದ ಮದದಲ್ಲಿ ಮೆರೆಯುತ್ತಿದ್ದ ವಂಜಾರ ಜೈಲಿನ ಒಳಗೆ ಕೈದಿಯಂತೆ ಸುಮ್ಮನೆ ಕೂರಲಿಲ್ಲ. ಹೇಗೂ ಕೊಲೆ, ಸುಲಿಗೆ ಳಿಸಿದ ಹಡಬಿಟ್ಟಿ ಗಂಟು ಇದೆಯಲ್ಲಾ? ವಿಶೇಷ ಪ್ರಭಾವ ಮತ್ತು ಸಿ ವಿವಿಐಪಿ ಸವಲತ್ತುಗಳನ್ನು ಪಡೆದುಕೊಂಡಿದ್ದ. ಮಾಡಬಾರದ್ದೆಲ್ಲಾ ಪಾಪಪ್ರಜ್ಞೆಯಿಂದಲೋ? ಅಥವಾ ಕೋಮುವಾದಿ ಪ್ರಭುತ್ವವನ್ನು ದೋ? ಅಥವ ತನ್ನ ಪಾರಮ್ಯವನ್ನು ಮೆರೆಯುವ ತೆವಲಿನಿಂದಲೋ ವಂಜಾರನೇ ಬಲ್ಲ. ಅಂತೂ ಜೈಲು ಅಧಿಕಾರಿಗಳ ಕುಮ್ಮಕ್ಕಿನೊಂದಿಗೆ ಒಂದು ದೇವಸ್ಥಾನವನ್ನು ಕಟ್ಟಲು ಶುರು ಮಾಡಿದ.

ಮೇಲಧಿಕಾರಿಯಾಗಿದ್ದ ವಂಜಾರನ ಕ್ರಿಮಿನಲ್ ಆದೇಶಗಳಿಂದಾಗಿಯೇ ಈ ಗತಿ ಬಂದಿದೆಯೆಂಬ ಸಿಟ್ಟು ಎಟಿಎಸ್ ಎಸ್‌ಪಿ ರಾಜಕುಮಾರ್ ಗಿತ್ತು. ಹೀಗಾಗಿ ಕಾನೂನುಬಾಹಿರವಾಗಿ ಜೈಲಿನೊಳಗೆ ದೇವಸ್ಥಾನ ತ್ತಿರುವುದನ್ನು ನಿಲ್ಲಿಸಬೇಕೆಂದು ಆಗ್ರಹಿಸಿದ. ಈ ಬಗ್ಗೆ ಜೈಲು ಗಳಿಗೆ 18 ಪುಟಗಳ ಪತ್ರ ಬರೆದ. ಮಾಹಿತಿ ಹಕ್ಕಿನಡಿ ಅರ್ಜಿ ದಾವುದರ ಬಗ್ಗೆಯೂ ಜೈಲು ಅಧಿಕಾರಿಗಳು ಜಪ್ಪೆನ್ನದೆ ಹೋದಾಗ ೋರ್ಟಿಗೆ ದೂರು ನೀಡಿದ.

ಸ್ಥಿತಿ ವಿಕೋಪಕ್ಕೆ ತಿರುಗಿ ಪಾಂಡ್ಯನ್ ಹಾಗೂ ವಂಜಾರ ನಡುವೆ ರ್ಷ ಆಗಸ್ಟ್‌ನಲ್ಲಿ ಸಬರಮತಿ ಜೈಲಿನಲ್ಲೇ ಹೊಡೆದಾಟ ನಡೆದಿತ್ತು. ಲೆ ವಿನಾಕಾರಣ ಹಲ್ಲೆ ಮಾಡಿದ ವಂಜಾರನ ಮೇಲೆ ಕ್ರಮ ಳ್ಳುವಂತೆ ಪಾಂಡ್ಯನ್ ಕೋರ್ಟ್‌ಗೆ ಮೊರೆ ಹೋಗಿದ್ದಾನೆ. ಆದರೆ ಧಿಕಾರಿಗಳು ಮಾತ್ರ ಸಹಜವಾಗಿಯೇ ವಂಜಾರನ ಪರ ವಕಾಲತ್ತು ರೆ. ಸದ್ಯ ಪಾಂಡ್ಯನ್‌ನನ್ನು ಬೇರೆ ಸೆಲ್‌ಗೆ ವರ್ಗಾಯಿಸಲಾಗಿದೆ. ನಡೆದದ್ದು 2012ರ ಜುಲೈ-ಆಗಸ್ಟ್‌ನಲ್ಲಿ.

08ರ ಏಪ್ರಿಲ್‌ನಲ್ಲೂ ಇಂಥದೇ ಪ್ರಕರಣವೊಂದು ಸಬರ್‌ಮತಿ ಜೈಲಿನಿಂದ ವರದಿಯಾಗಿತ್ತು. ಇಬ್ಬರು ಕೈದಿಗಳು ಕ್ರಿಕೆಟ್ ಬ್ಯಾಟ್‌ಗಳನ್ನು ಸ್ಪರ ಹೊಡೆದಾಡಿಕೊಂಡಿದ್ದರು. ಆ ಕೈದಿಗಳು ಬೇರೆ ಯಾರೋಅಲ್ಲ; ಜಾರ ಮತ್ತು ಅಂದಿನ ಡಿವೈಎಸ್‌ಪಿ ಎನ್.ಕೆ.ಅಮಿನ್. ಪ್ರತ್ಯಕ್ಷದರ್ಶಿ ಪ್ರಕಾರ 'ತಮ್ಮ ಇಂದಿನ ದುಸ್ಥಿತಿಗೆ ವಂಜಾರನೇ ಕಾರಣ' ಎಂದು ನಿಂದಿಸಿದ್ದರಿಂದ ಅವರಿಬ್ಬರ ನಡುವೆ ಜಗಳ ಶುರುವಾಗಿತ್ತು.


ಸೊಹ್ರಾಬುದ್ದೀನ್ & ಕೌಸರ್‌ಬಾನು

ಂತರ ಅಮಿನ್ ಈ ಕೇಸಿನ ಅಪ್ರೂವರ್ ಆಗಿ ಬದಲಾಗಿದ್ದಾನೆ. ರಕ್ಷಿಪಾಸು ವಂಜಾರನ ವಿರುದ್ಧ ದಿನೇದಿನೇ ಸಾಕ್ಷ್ಯಾಧಾರಗಳು ಗ್ಗುತ್ತಿವೆ; ಹೊಸಹೊಸ ಪ್ರಕರಣಗಳು ಬಯಲಿಗೆ ಬರುತ್ತಿವೆ. ಇದೇ ಬಂಧಿತನಾಗಿದ್ದ ಮೋದಿಯ ಪರಮಾಪ್ತ ರಾಜಕೀಯ ಮಿತ್ರ ಹಾಗೂ ೃಹಮಂತ್ರಿ ಅಮಿತ್‌ಶಾನನ್ನು ಜಾಮೀನಿನ ಮೇಲೆ ಹೊರತರುವಲ್ಲಿ ು ಕೇಸನಿಕೂಟ ಹೇಗೋ ಯಶಸ್ವಿಯಾಗಿದೆ. ಮತ್ತೊಂದು ಕಡೆ ಪ್ರಧಾನಮಂತ್ರಿ ಅಭ್ಯರ್ಥಿಯೆಂದು ಬಿಂಬಿತವಾಗುತ್ತಿರುವ ಮೋದಿ ಕೊಲೆಗಡುಕರ ಕೇಸಿನಲ್ಲಿ ತಾನು ಬಚಾವಾದರೆ ಸಾಕೆಂಬ ಯಲ್ಲಿದ್ದಾನೆ.

ೇ ಅದರೂ ತನ್ನನ್ನು ರಕ್ಷಿಸುತ್ತಾನೆಂದು ಅತಿಯಾಗಿ ನೆಚ್ಚಿಕೊಂಡಿದ್ದ ಮೋದಿ ಕೈಕೊಟ್ಟಿರುವುದು ವಂಜಾರನಿಗೆ ಈಗ ಖಾತ್ರಿಯಾಗಿ ೆ. ಮರಣದಂಡನೆ ಅಥವ ಜೀವವಾಸವಿಧೀ ಜೈಲಿನಲ್ಲಿ ಕಾಗಬಹುದೆಂಬ ಭೀತಿಯಿಂದ ಆತ ತತ್ತರಿಸಿಹೋಗಿದ್ದಾನೆ. ಬಹುಶಃ ಜೀವಮಾನದಲ್ಲಿ ಪ್ರಪ್ರಥಮ ಬಾರಿಗೆ ಕಾನೂನು ತನಗಿಂತಲೂ, ಂತಲೂ ದೊಡ್ಡದು ಎಂಬ ಅರಿವಾಗಿರಬೇಕು. ಮೋದಿಯ ಸರ್ಕಾರ ಅಮಿತ್‌ಶಾನ ವಿರುದ್ಧ ಆತ ಬರೆದ 10 ಪುಟಗಳ ಪತ್ರವನ್ನು ಹಿನ್ನೆಲೆಯ ಹಿನ್ನೆಲೆಯಲ್ಲಿ ನಾವು ಅರ್ಥಮಾಡಿಕೊಳ್ಳಬೇಕು. ಕಾರದ ಮದದಲ್ಲಿ ಮೆರೆಯುತ್ತಿರುವ ಎಲ್ಲಾ ಖಾಕಿ ಕ್ರಿಮಿನಲ್‌ಗಳಿಗೆ ು ಉತ್ತಮ ಪಾಠವಾಗಲಿ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಅಮೃತಮಹಲ್ ಭೂಮಿಗಾಗಿ ರೈತರ ಹೋರಾಟ

ಅಂದು ಚಳ್ಳಕೆರೆಯಲ್ಲಿ ಸರಿಸುಮಾರು ಐದು ಸಾವಿರ ಜನರು ಸುತ್ತಮುತ್ತಲ ಹಳ್ಳಿಗಳಿಂದ ಪಾದಯಾತ್ರೆಯ ಮೂಲಕ ಬಂದಿದ್ದರು. ಅವರೆಲ್ಲರ ಕೂಗು ಒಂದೇ 'ನಮ್ಮ ಭೂಮಿ ನಮಗೆ ಬಿಡಿ, ನಮ್ಮ ನೆಲದ ಹಕ್ಕು ನಮ್ಮದು' ಎನ್ನುವುದಾಗಿತ್ತು. ದೊಡ್ಡ ಉಳ್ಳಾರ್ತಿಯಿಂದ ಚಳ್ಳಕೆರೆವರೆಗೆ ಕಾಲುನಡಿಗೆಯಲ್ಲಿ ಪಶುಪಾಲಕರು, ರೈತರು ಬಂದರು. ಅವರೆಲ್ಲರ ಧ್ವನಿ ಇಲ್ಲಿ ಒಂದಾಗಿತ್ತು. ಎಲ್ಲರ ಮುಖದಲ್ಲಿ ಭೂಮಿ ಕಳೆದುಕೊಳ್ಳುವ ಆತಂಕವಿತ್ತು. ಅವರ ಹೋರಾಟದ ಕೂಗಿನಲ್ಲಿ ಈ ನೆಲವನ್ನು ಬಿಡೆವು ಎನ್ನುವ ದೃಢ ವಿಶ್ವಾಸವಿದ್ದಂತಿತ್ತು.

ಇದು ಸೆಪ್ಟಂಬರ್ 3 ರಂದು ಚಳ್ಳಕೆರೆಯಲ್ಲಿ ಕಂಡ ದೃಶ್ಯ. ಚಳ್ಳಕೆರೆ ಭಾಗದ ಕುದಾಪುರ, ದೊಡ್ಡ ಉಳ್ಳಾರ್ತಿ, ನೇರ್ಲಗುಂಟೆ, ರಾಮದುರ್ಗ, ಸೆನಗಾನಹಳ್ಳಿ ಒಳಗೊಂಡಂತೆ ಸುಮಾರು ಮುವತ್ತು ಹಳ್ಳಿಗಳ ರೈತರು ಒಟ್ಟಾಗಿದ್ದರು.





ಈ ಭಾಗದಲ್ಲಿ ಹೆಚ್ಚಾಗಿ ಬೇಡರು, ಗೊಲ್ಲರು, ಕುರುಬರು, ಅರ್ಜುನ ಜೋಗಿಗಳು ಮುಂತಾದ ಬುಡಕಟ್ಟು ಸಮುದಾಯಗಳು ನೆಲೆಸಿವೆ. ಇವರ ಪ್ರಧಾನ ಉದ್ಯೋಗ ಪಶುಪಾಲನೆ. ಕುರಿಸಾಕಣೆಯನ್ನು ಆಧರಿಸಿದ ಕಂಬಳಿ ನೇಯ್ಗೆ ಈ ಭಾಗದ ಎಂಬತ್ತು ಹಳ್ಳಿಗಳ ಸುಮಾರು ಇಪ್ಪತ್ತು ಸಾವಿರ ಕುಟುಂಬಗಳ ಆರ್ಥಿಕ ಮೂಲವಾಗಿದೆ. ಈ ಎಲ್ಲಾ ಯೋಜನೆಗಳು ಆರಂಭವಾದದ್ದೇ ಆದರೆ ಸಹಜವಾಗಿ ಈ ಜನರು ಪಶುಪಾಲನೆ ಬಿಟ್ಟು ನಗರಗಳತ್ತ ವಲಸೆ ಹೋಗಬೇಕಾಗುತ್ತದೆ. ಇಂತಹ ಅಪಾಯಗಳು ಈ ಭಾಗದ ಜನರಲ್ಲಿ ಭಯ ಆತಂಕವನ್ನು ಹುಟ್ಟಿಸಿದೆ, ಈ ಆತಂಕ ಭೂಮಿಯನ್ನು ಕೊಡುವುದಿಲ್ಲ ಎನ್ನುವ ಹೋರಾಟಕ್ಕೆ ಕಾರಣವಾಗಿದೆ.

ಜಿಲ್ಲಾ ಅಮೃತಮಹಲ್ ಕಾವಲು ಹೋರಾಟ ಸಮಿತಿಯ ಮುಂದಾಳತ್ವದಲ್ಲಿ ಅಖಿಲ ಭಾರತ ಕಿಸಾನ್ ಸಭಾ, ಸ್ತ್ರೀಶಕ್ತಿ ಸಂಘಟನೆಗಳು, ಅಲೆಮಾರಿ ಬುಡಕಟ್ಟು ಸಂಘ, ಕರ್ನಾಟಕ ಬಂಜಾರ ಜನಜಾಗೃತಿ ಸಮಿತಿ, ದಲಿತ ಸಂಘಟನೆಗಳು, ವಾಲ್ಮೀಕಿ ಸಂಘಟನೆಗಳು, ಕುರುಬ ಸಮುದಾಯದ ಸಂಘಟನೆಗಳು ಈ ಹೋರಾಟದಲ್ಲಿ ಏಕೀಕರಣಗೊಂಡಿದ್ದವು. ಹೀಗಾಗಿ ರೈತ ಸಮುದಾಯದ ದೊಡ್ಡ ಶಕ್ತಿಯೊಂದು ತಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಗಟ್ಟಿ ಧ್ವನಿಯನ್ನು ಮೊಳಗಿಸಿದ್ದರು.

ಚಳ್ಳಕೆರೆ ಭಾಗದ 10 ಸಾವಿರ ಎಕರೆ ಭೂಮಿಯನ್ನು ಸರಕಾರ ಬಾಬಾ ಅಣುವಿದ್ಯುತ್ ಕೇಂದ್ರ, ಡಿ.ಆರ್.ಡಿ.ಓ, ಇಸ್ರೋ ಮುಂತಾದ ಸಂಸ್ಥೆಗಳಿಗೆ ನೀಡಿದೆ. ಈ ಭಾಗದಲ್ಲಿ ಆಯಾ ಸಂಸ್ಥೆಗಳು ಭೂಮಿಯನ್ನು ಆಕ್ರಮಿಸಿಕೊಂಡು ಸುತ್ತುಗೋಡೆಯನ್ನು ಕಟ್ಟಿಕೊಳ್ಳುವ ತಯಾರಿಯಲ್ಲಿವೆ. ಈ ಸಂಸ್ಥೆಗಳು ಆರಂಭವಾದಲ್ಲಿ ಈ ಭಾಗದ ಜನರು ತಮ್ಮ ನೆಲದಲ್ಲಿ ತಾವೇ ಅನಾಥರಾಗುವ ಸಂಭವವಿದೆ.

ಈ ಹೋರಾಟದ ಧ್ವನಿ ಭೂಮಿಯನ್ನು ಮರಳಿ ಪಡೆಯುವುದಾಗಿತ್ತು. ಅಂತೆಯೇ ಸರಕಾರಕ್ಕೆ ತಪ್ಪು ಮಾಹಿತಿ ನೀಡಿದ ಅಂದಿನ ಜಿಲ್ಲಾಧಿಕಾರಿ ಆಮ್ಲಾನ್ ಆದಿತ್ಯ ಬಿಸ್ವಾಸ್ ಇವರನ್ನು ಅಮಾನತ್ತುಗೊಳಿಸುವ, ಇದಕ್ಕೆ ನೆರವಾದ ಅಂದಿನ ಲೋಕಸಭಾ ಸದಸ್ಯರಾದ ಜನಾರ್ದನ ಸ್ವಾಮಿ ಅವರ ಬಗ್ಗೆ ಕ್ರಮ ಕೈಗೊಳ್ಳುವ ಬೇಡಿಕೆ ಇಟ್ಟಿದ್ದರು. ಅಂತೆಯೇ ವಾಯುಮಾಲಿನ್ಯ ಇಲಾಖೆ ಈ ಸಂಸ್ಥೆಗಳ ಆರಂಭಕ್ಕೆ ಪರವಾನಗಿ ನೀಡದಿರುವ ಬಗ್ಗೆಯೂ ಒತ್ತಾಯಿಸಿದ್ದಾರೆ. ಭೂಮಿಯನ್ನು ಮರಳಿಸದಿದ್ದರೆ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿಯೂ ಹೇಳಿದ್ದಾರೆ. ನಾನು ಈ ಭಾಗದ ಹಳ್ಳಿಗಳಲ್ಲಿ ಓಡಾಡಿ ಜನರನ್ನು ಮಾತನಾಡಿಸಿದ್ದೇನೆ. ಬಹುಪಾಲು ಜನರಲ್ಲಿ ಭೂಮಿ ಕೊಟ್ಟ ಸರಕಾರದ ಬಗ್ಗೆ ವಿರೋಧವಿದೆ. ಅಂತೆಯೇ ಹೋರಾಟ ಮಾಡಿ ಭೂಮಿ ಉಳಿಸಿಕೊಳ್ಳುವ ಬಗ್ಗೆ ಜನರಲ್ಲಿ ವಿಶ್ವಾಸ ಗಟ್ಟಿಯಾಗುತ್ತಿದೆ. ಈ ಜನರೊಟ್ಟಿಗೆ ನಾಡಿನ ಪ್ರಗತಿಪರರು, ಪರಿಸರವಾದಿಗಳು, ಚಳವಳಿಗಾರರು, ಬುದ್ಧಿಜೀವಿಗಳು, ಚಿಂತಕರು ತಮ್ಮ ಬೆಂಬಲವನ್ನು ಸೂಚಿಸಿ ಇವರ ಧ್ವನಿಯನ್ನು ಮತ್ತಷ್ಟು ದೊಡ್ಡದು ಮಾಡಬೇಕಿದೆ.

• ಅರುಣ್ ಜೋಳದಕೂಡ್ಲಿಗಿ

ಫೇಕು ಮೋದಿ ಕಾರ್ನರ್

ಸುಮಾರು ಒಂದು ದಶಕದ ಹಿಂದೆ, ನರೇಂದ್ರ ಮೋದಿ ಕೇವಲ ಆರೆಸ್ಸೆಸ್‌ನ ಸಾಮಾನ್ಯ ಪ್ರಚಾರಕ ಆಗಿದ್ದಾಗ ಮತ್ತು ಬಿಜೆಪಿಯಲ್ಲಿ ಆತ ಏನೂ ಆಗಿರದಿದ್ದಾಗ ಆತನನ್ನು ಸಂದರ್ಶಿಸುವ ಅವಕಾಶ ನನಗೆ ಸಿಕ್ಕಿತ್ತು. ಸರ್ವಾಧಿಕಾರಿಯೊಬ್ಬನ ವ್ಯಕ್ತಿತ್ವ ಕುರಿತಂತೆ ಮನೋವೈದ್ಯರು, ಮನಶಾಸ್ತ್ರಜ್ಞರು ಮತ್ತು ಮನೋವಿಶ್ಲೇಷಕರು ಹಲವಾರು ವರ್ಷಗಳ ಕಾಲ ಅಧ್ಯಯನ ಮಾಡಿ ನಿಗದಿಪಡಿಸಿರುವ ಮಾನದಂಡಕ್ಕೆ ಮೋದಿಯ ವ್ಯಕ್ತಿತ್ವ ಎಲ್ಲ ರೀತಿಯಲ್ಲೂ ಹೋಲುತ್ತಿತ್ತು. ಅತಿರೇಕದ ಗಡುಸು, ಭಾವುಕತೆಯ ಕೊರತೆ, ಅಹಂ, ಹಿಂಸೆಯ ಬಗೆ ವಿಲಕ್ಷಣ ಆಸಕ್ತಿ ಮೋದಿಯಲ್ಲಿ ತುಂಬಿತುಳುಕುತ್ತಿತ್ತು. ಆತ ಭಾರತದ ವಿರುದ್ಧ ಬ್ರಹ್ಮಾಂಡದ ಪಿತೂರಿ ಇದೆ ಎಂದು ನನಗೆ ವಿವರಿಸಿದ. ಆತ ಈ ಕಾಲ್ಪನಿಕ ಪಿತೂರಿಯಲ್ಲಿ ಎಲ್ಲ ಮುಸಲ್ಮಾನರು ಶಂಕಿತ ದೇಶದ್ರೋಹಿಗಳಾಗಿದ್ದರು ಅಥವಾ ಭವಿಷ್ಯದ ಭಯೋತ್ಪಾದಕರಾಗಿದ್ದರು. ಆ ಸಂದರ್ಶನ ಮುಗಿದು ನಾನು ಹೊರಬಿದ್ದಾಗ ತತ್ತರಿಸಿದ್ದ. ಅವತ್ತು ನನ್ನೊಂದಿಗಿದ್ದ ಯಾಗ್ನಿ ಅವರಿಗೆ ನಾನು ಹೀಗೆಂದು ಹೇಳಿದೆ: "ನನ್ನ ಜೀವನದಲ್ಲೇ ಪ್ರಥಮ ಬಾರಿಗೆ ಕರಾರುವಾಕ್ಕಾಗಿ ಓರ್ವ ಫ್ಯಾಸಿಟ್ ಆದ, ಭವಿಷ್ಯದಲ್ಲಿ ಕೊಲೆಗಡುಕನಾಗುವ, ಪ್ರಾಯಶಃ ಹಲವಾರು ಜನರನ್ನು ಕೊಂದು ಹಾಕುವ ವ್ಯಕ್ತಿಯನ್ನು ಇವತ್ತು ಕಣ್ಣಾರೆ ನೋಡಿದೆ."

- ಸಮಾಜ ಶಾಸ್ತ್ರಜ್ಞ ಅಶೀಶ್ ನಂದಿ

"ನರೇಂದ್ರ ಮೋದಿ ಅನಾಗರಿಕ ಜಂತು"

- ಸಮಾಜ ಶಾಸ್ತ್ರಜ್ಞ ಶಿವ್ ವಿಶ್ವನಾಥನ್

"ನರೇಂದ್ರ ಮೋದಿಯನ್ನು ಮನೋವೈದ್ಯರಿಗೆ ತೋರಿಸುವ ಅಗತ್ಯವಿದೆ."

- ಜೆಡಿಯು ನಾಯಕ ಶಿವಾನಂದ ತಿವಾರಿ

"ಮೋದಿ ಇಂಗ್ಲೆಂಡಿಗೆ ಕಾಲಿಟ್ಟರೆ ಆತ ಹೆಚ್ಚಿನ ಬಟ್ಟೆಗಳನ್ನು ಹೊತ್ತುಕೊಂಡು ಬಂದರೆ ವಾಸಿ. ಯಾಕೆಂದರೆ ಆತನ ಮೇಲೆ ಅಸಂಖ್ಯಾತ ಟೊಮ್ಯಾಟೋಗಳು ಮತ್ತು ಮೊಟ್ಟೆಗಳು ಹಾರಿ ಬೀಳಲಿವೆ."


- ಬ್ರಿಟನ್ನಿನ ಸಂಸದ ಜಾರ್ಜ್ ಗಾಲೊವೆ


ಇತ್ತೀಚೆಗೆ ಬರೋಡಾದಲ್ಲಿರುವ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯಕ್ಕೆ ನಡೆದ ಚುನಾವಣೆಯಲ್ಲಿ ಸಂಘಪರಿವಾರದ ವಿದ್ಯಾರ್ಥಿ ಸಂಘಟನೆಯಾದ ಅಖಿಲ ಭಾರತ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಹೀನಾಯವಾಗಿ ಸೋತಿತು. ಕಳೆದ ಹತ್ತು ವರ್ಷಗಳಿಂದ ಎಬಿವಿಪಿ ಗೆಲ್ಲುತ್ತಾ ಬಂದಿದ್ದರೂ ಈ ಬಾರಿ ವಿರೋಧ ಪಕ್ಷ ಗೆದ್ದಿದೆ. ಚುನಾವಣೆಗೂ ಮುನ್ನ ಬಿಜೆಪಿಯು ವಿಶ್ವವಿದ್ಯಾಲಯದ ಎಲ್ಲಾ ಕಡೆ ನರೇಂದ್ರ ಮೋದಿಯ ಪೋಸ್ಟರ್‌ಗಳನ್ನು ಅಂಟಿಸುವ ಮೂಲಕ ಮೋದಿ 'ಯುವಕರ ಆಶಾಕಿರಣ' ಎಂದು ತೋರಿಸಲು ಯತ್ನಿಸಿತ್ತು, ಅಷ್ಟೇ ಅಲ್ಲ, ಫೇಸ್‌ಬುಕ್‌ನಲ್ಲಿ "ಬದಲಾವಣೆಗೆ ಯುವಜನತೆ" ಎಂಬ ಅಕೌಂಟನ್ನೂ ತೆರೆಯುವ ಮೂಲಕ ವಿಶ್ವವಿದ್ಯಾಲಯದ ಯುವ ಮತದಾರರನ್ನು ಆಕರ್ಷಿಸಲು ಪ್ರಯತ್ನಿಸಿತ್ತು. ಆದರೆ ಫಲಿತಾಂಶ ಹೊರಬಿದ್ದ ಕೂಡಲೇ ವಿವಿಯ ಆವರಣದಲ್ಲಿದ್ದ ಪೋಸ್ಟರ್‌ಗಳನ್ನು ಕಿತ್ತುಹಾಕಲಾರಂಭಿಸಿದರು. ಮೋದಿಯನ್ನು ಯುವಕರ ಆಶಾಕಿರಣ ಎಂಬುದು ಟೊಳ್ಳು ಎಂದು ಈ ಚುನಾವಣೆಯ ಫಲಿತಾಂಶ ಸಾಬೀತುಪಡಿಸಿತ್ತು.

ಮೋದಿಯ ಕೋಮುವಾದಿ ರಾಜಕಾರಣವನ್ನು ಯುವಕರು ಖಡಾಖಂಡಿತವಾಗಿ ತಿರಸ್ಕರಿಸಿದ್ದು ಇದೇ ಮೊದಲನೆ ಬಾರಿ ಅಲ್ಲ. ಕೆಲವು ತಿಂಗಳುಗಳ ಹಿಂದೆ ಗುಜರಾತ್ ವಿಶ್ವವಿದ್ಯಾಲಯದ ಸೆನೆಟ್‌ಗೆ ನಡೆದ ಚುನಾವಣೆಯಲ್ಲೂ ಎಬಿವಿಪಿ ಸೋತಿತ್ತು.

- ಸುಭಾಷ್ ಘಾಟಾಡೆ, ಸಾಮಾಜಿಕ ಕಾರ್ಯಕರ್ತ

ಹುಬ್ಬಳ್ಳಿ: ಆಟದ ಮೈದಾನದಲ್ಲಿ ಶೆಟ್ಟರ್-ಜೋಶಿಯ ಮಸಾಜ್ ಸೆಂಟರ್







ಮಾಜಿ ಸಿ.ಎಂ.ಜಗದೀಶ ಶೆಟ್ಟರ್, ಬಿ.ಜೆ.ಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ ಮೊದಲಾದ ಚೆಡ್ಡಿಗಳ ಭೂತೀಟೆಗೆ ಅಜಮಾಸು ನೂರು ವರ್ಷಗಳಷ್ಟು ಇತಿಹಾಸವಿರುವ ಜಿಮ್‌ಖಾನ ಆಟದ ಮೈದಾನ ಬಲಿಯಾಗುತ್ತಿದೆ. ಕ್ಲಬ್‌ನ ಹೆಸರಲ್ಲಿ ಜಿಮ್‌ಖಾನ ಅಂಗಳದಲ್ಲಿ ಜೂಜು ಅಡ್ಡೆ ಮಸಾಜ್ ಸೆಂಟರ್‌ಗಳಂತಹ ಅನೈತಿಕ ದಂಧೆ ಶುರು ಮಾಡಲು ಹೊರಟಿರುವುದು ಹುಬ್ಬಳ್ಳಿಯ ದುರಾದೃಷ್ಟವೇ ಸರಿ.

ಹುಬ್ಬಳ್ಳಿಯ ಪ್ರತಿಷ್ಠಿತ ದೇಶಪಾಂಡೆ ನಗರದಲ್ಲಿನ ಎಂಟು ಎಕರೆ ನಾಲ್ಕು ಗುಂಟೆ ವಿಶಾಲವಾದ ಮೈದಾನ ಹೊಂದಿರುವ ಜಿಮ್‌ಖಾನಾ ಮೈದಾನ ಲಕ್ಷಾಂತರ ಕ್ರೀಡಾಪಟುಗಳ ಭವಿಷ್ಯಕ್ಕೆ ಬೆಳಕು ನೀಡಿದೆ. ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ ಸುನೀಲ್ ಜೋಷಿ, ಅವಿನಾಶ್ ವೈದ್ಯರಂತಹ ಕ್ರೀಡಾಪಟುಗಳನ್ನು ದೇಶಕ್ಕೆ ನೀಡಿದ ಕೀರ್ತಿ ಈ ಮೈದಾನಕ್ಕಿದೆ. ಈ ಭಾಗದ ಶಾಲಾಕಾಲೇಜು ಸೇರಿದಂತೆ ಅನೇಕ ಸರ್ಕಾರಿ ಇಲಾಖೆಗಳ ನೌಕರರ ಕ್ರೀಡಾಕೂಟಗಳು ಇಲ್ಲಿ ನಡೆಯುತ್ತಾ ಬಂದಿವೆ. ಅಷ್ಟೇ ಅಲ್ಲ, ಜೀವನದ ಜಂಜಾಟದಿಂದ ಹೊರಬರಲು ನಿತ್ಯ ಸಾವಿರಾರು ಜನ ಈ ಮೈದಾನದಲ್ಲಿ ವಾಕಿಂಗ್, ವ್ಯಾಯಾಮ ಮಾಡಿ ನೆಮ್ಮದಿ ಕಂಡುಕೊಳ್ಳುತ್ತಾರೆ.

ಆದರೆ, ಈಗ ಇದ್ಯಾವುದೂ ಇಲ್ಲಿ ನಡೆಯುತ್ತಿಲ್ಲ. ಮೈದಾನದ ಸುತ್ತಲೂ 12 ಅಡಿ ಎತ್ತರದ ಕಾಂಪೌಂಡ್ ಎದ್ದುನಿಂತಿದೆ. ಮುಕ್ತವಾಗಿದ್ದ ಪ್ರವೇಶ ದ್ವಾರಕ್ಕೆ ಗೇಟ್ ಪ್ರತ್ಯಕ್ಷವಾಗಿದೆ. ಅದರ ಮುಂದೊಬ್ಬ ಸೆಕ್ಯುರಿಟಿ ಗಾರ್ಡ್ ಕೂಡಾ ಪ್ರತಿಷ್ಠಾಪಿತನಾಗಿದ್ದಾನೆ. ಸಾರ್ವಜನಿಕರು ಒಳಹೋಗದಂತೆ ತಡೆಯುವುದೇ ಅವನ ಕಾಯಕ. 140 ಕೋಟಿ ಮೌಲ್ಯದ ಆಸ್ತಿಗೆ ಮಾಲೀಕನಂತೆ ಇಷ್ಟೆಲ್ಲಾ ಬಂದೋಬಸ್ತ್ ಮಾಡಿಸಿ ಜಮೀನನ್ನು ಕಬಳಿಸುವ ಹುನ್ನಾರ ನಡೆಸಿರೋದು ಮಾಜಿ ಸಿಎಂ ಶೆಟ್ಟರ್. ಜಿಮ್‌ಖಾನಾ ಮೈದಾನದ ಬೈಲಾವನ್ನೇ ತಿದ್ದುಪಡಿ ಮಾಡಿರುವ ಶೆಟ್ಟರ್ ಅದಕ್ಕೆ ರಿಕ್ರಿಯೇಷನ್ ಕ್ಲಬ್ ಎಂದು ಹೆಸರಿಟ್ಟು ತಾನೇ ಗೌರವಾಧ್ಯಕ್ಷನಾಗಿ ಉದ್ಭವಿಸಿದ್ದಾರೆ. ಜೊತೆಗೆ ಸಂಸದ ಪ್ರಹ್ಲಾದ ಜೋಷಿ, ಆತನ ತಮ್ಮ ಗೋವಿಂದ ಜೋಷಿ, ಅನಂತ್‌ಕುಮಾರನ ಸಹೋದರ ನಂದಕುಮಾರ, ಜಗದೀಶ ಶೆಟ್ಟರ್ ಸಹೋದರ ಪ್ರದೀಪ ಶೆಟ್ಟರ್, ಮಾಜಿ ಮೇಯರ್ ವೀರಣ್ಣ ಸೌದಿ, ಜಗದೀಶ ಶೆಟ್ಟರ್‌ರ ಹೋಟೆಲ್ ಉದ್ಯಮದ ಪಾರ್ಟನರ್ ಅನಂತ ರೆಸಿಡೆನ್ಸಿಯ ರಮೇಶ್ ಶೆಟ್ಟಿ- ಹೀಗೆ ಸುಮಾರು ನಾಲ್ಕು ನೂರು ಶ್ರೀಮಂತರು ಈ ಹೈಟೆಕ್ ಅಡ್ಡೆ ಉರ್ಫ್ ಕ್ಲಬ್‌ನ ವಾರಸುದಾರರು.

ಮೈದಾನದ ಹಿಂದಿನ ಇತಿಹಾಸ

ಕರ್ನಾಟಕ ಜಿಮ್‌ಖಾನ ಅಸೋಸಿಯೇಶನ್ ಜನ್ಮತಾಳಿದ್ದು 1915ರಲ್ಲಿ, ಆಗಿನ ಬ್ರಿಟಿಷ್ ಆಡಳಿತದ ಮುಂಬೈ ಸರ್ಕಾರ ಹುಬ್ಬಳ್ಳಿಯ ನಾಗಶೆಟ್ಟಿಕೊಪ್ಪ (ಈಗಿನ ದೇಶಪಾಂಡೆ ನಗರ) ಗ್ರಾಮದ ಸರ್ವೆ ಸಂ. 63, ಸಿ.ಟಿ.ಎಸ್. ಸಂ. 2912 ರಲ್ಲಿ ಏಳು ಎಕರೆ ಹದಿನಾಲ್ಕು ಗುಂಟೆ ಜಮೀನನ್ನು ಮೈದಾನ ನಿರ್ಮಿಸಲು ಮಂಜೂರು ಮಾಡಿತ್ತು, ಅಲ್ಲಿ ಕ್ರಿಕೆಟ್, ಟೆನ್ನಿಸ್ ಹಾಗೂ ಫುಟ್‌ಬಾಲ್‌ಗಳಂತಹ ಕ್ರೀಡಾ ಚಟುವಟಿಕೆಗಳನ್ನು ನಡೆಸಬೇಕೆ ವಿನಾಃ ಯಾವುದೇ ಟ್ರಸ್ಟ್ ಅಥವಾ ವ್ಯಕ್ತಿಗಳಿಗೆ ಪರಭಾರೆ ಮಾಡಬಾರದೆಂಬ ಸ್ಪಷ್ಟವಾದ ಶರತ್ತುಗಳು ಆ ಮಂಜೂರು ಆದೇಶದಲ್ಲಿದ್ದವು. ಮೈದಾನದ ಒಂದು ಭಾಗದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಸವಾಯಿ ಗಂಧರ್ವ ಹಾಲ್ ನಿರ್ಮಿಸಿ ಅದಕ್ಕೆ ಸ್ವಲ್ಪ ಜಾಗವನ್ನು ಬಿಟ್ಟುಕೊಡಲಾಗಿದೆ. ಉಳಿದ ಜಾಗದಲ್ಲಿ ಇಲ್ಲಿಯವರೆಗೂ ಸುಸೂತ್ರವಾಗಿ ಕ್ರೀಡಾ ಚಟುವಟಿಕೆಗಳು ನಡೆದುಬಂದಿದ್ದವು.

ಮೈದಾನದ ಮೇಲೆ ಶೆಟ್ಟರ್ ಕಣ್ಣು

ಜಗದೀಶ್‌ಶೆಟ್ಟರ್‌ರ ವಕ್ರದೃಷ್ಟಿ ಜಿಮ್‌ಖಾನ ಮೈದಾನದ ಮೇಲೆ ಮೊದಲ ಬಾರಿಗೆ ರಾವಿಕೊಂಡದ್ದು 2009ರಲ್ಲಿ, ಪಕ್ಕಾ ವ್ಯಾಪಾರೀ ಬುದ್ಧಿಯ ಶೆಟ್ಟರ್ ನಗರ ಮಧ್ಯಭಾಗದಲ್ಲಿರುವ ಮೈದಾನವನ್ನು ವ್ಯಾಪಾರದ ಕೇಂದ್ರವನ್ನಾಗಿಸಲು ಸಂಚು ರೂಪಿಸಿದರು. ಹಾಗಾಗಿ 5.09.2009ರಂದು ಆಗಿನ ಧಾರವಾಡ ಜಿಲ್ಲಾಧಿಕಾರಿ ದರ್ಪಣ ಜೈನ್‌ಗೆ ಅರ್ಜಿ ಗೀಚಿದ ಶೆಟ್ಟರ್ ಮೈದಾನದಲ್ಲಿ ಧನಿಕರಿಗೆ ಅನುಕೂಲವಾಗುವಂತ ಕ್ಲಬ್ ನಿರ್ಮಿಸಲು ಅವಕಾಶ ಕೊಡಬೇಕೆಂದು ಮನವಿ ಮಾಡಿದರು. ಶೆಟ್ಟರ್‌ರ ರಾಜಕೀಯ ಪ್ರಭಾವ ಮತ್ತು ಬೆನ್ನಹಿಂದಿದ್ದ ದುಡ್ಡಿನ ಕುಳಗಳಿಂದಾಗಿ ಒಂದೇ ತಿಂಗಳಲ್ಲಿ ಡಿ.ಸಿ ಸಾಹೇಬರು ಅನುಮತಿಯನ್ನೂ ನೀಡಿದ್ದರು.

ಬ್ರಿಟಿಷ್ ಆಡಳಿತದ ಮುಂಬೈ ಸರ್ಕಾರ ವಿಧಿಸಿದ್ದ ಮೂಲ ಬೈಲಾವನ್ನೇ ತಿದ್ದುಪಡಿ ಮಾಡಿಸಿದರು. ನೌಕರಿ ಬಚಾವ್ ಮಾಡಿಕೊಳ್ಳುವ ಸಲುವಾಗಿ ಚೆಡ್ಡಿ ಸರ್ಕಾರದ ಒತ್ತಾಯಕ್ಕೆ ಮಣಿದ ಡಿ.ಸಿ ದರ್ಪಣ ಜೈನ್ ಈ ದಗಲಬಾಜಿಗಳು ಹೇಳಿದ್ದಕ್ಕೆಲ್ಲಾ ತಲೆಯಾಡಿಸಿ ಸಹಿ ಹಾಕಿದ್ದರು. ಹೀಗೆ ತಿರುಚಲಾದ ಆದೇಶದಲ್ಲಿ ಮೊದಲಿನ ಆಟಗಳ ಜೊತೆಗೆ ಲಾನ್‌ಟೆನಿಸ್, ಬ್ಯಾಡ್‌ಮಿಂಟನ್, ಸ್ವಾಷ್, ಬಿಲಿಯರ್ಡ್ಸ್, ಟೇಬಲ್ ಟೆನಿಸ್, ಈಜು, ಜಿಮ್, ಸ್ಪಾ ಮತ್ತು ಮನೋರಂಜನಾ ಕ್ಲಬ್ ನಡೆಸಲೂ ಅನುಮತಿ ನೀಡಬಹುದೆಂದು ಬರೆದುಕೊಳ್ಳಲಾಗಿತ್ತು.

ರೂಪಾಯಿಯಿಂದ ಲಕ್ಷಕ್ಕೇರಿದ ಫೀ....

ಈ ಚೆಡ್ಡಿ ಕಳ್ಳರು ಮೈದಾನದ ಮೇಲೆ ಕಣ್ಣು ಹಾಕುವ ಮೊದಲು ಜಿಮ್‌ಖಾನಾ ಕೆ.ಜಿ.ಎ. ಸದಸ್ಯತ್ವ ಶುಲ್ಕ ಇದ್ದದ್ದು ಕೇವಲ 15 ರೂ. ಮಾತ್ರ. ಯಾವಾಗ ಮಾಜಿ ಸಿ.ಎಂ. ಜಗದೀಶ ಶೆಟ್ಟರ್ ಗೌರವಾಧ್ಯಕ್ಷರಾಗಿ ಕ್ಲಬ್ ರೂಪಿಸಿಕೊಂಡು ಇಲ್ಲಿಗೆ ಕಾಲಿಟ್ಟರೋ ಆಗ ಇದ್ದಕ್ಕಿದ್ದಂತೆ ಸದಸ್ಯತ್ವದ ರೇಟು ನಾಲ್ಕು ಲಕ್ಷಕ್ಕೆ ನೆಗೆದು ಬಿದ್ದು, ಬಡವರು ಮತ್ತು ಮಧ್ಯಮ ವರ್ಗದವರು ಮೈದಾನದ ಒಳಗೆ ಕಾಲಿಡಬಾರದೆಂಬ ಶೆಟ್ಟರ್ ಸಂಚು ಬಯಲಾಗಿದ್ದೇ ಆಗ. ತನ್ನ ಖಾಸಾ ಚೇಲಾ ಡಾ.ಸುಭಾಷ್ ಜೋಷಿಯನ್ನು ಅಧ್ಯಕ್ಷನನ್ನಾಗಿ, ಸುನೀಲ ಕೊಠಾರೆ ಎಂಬ ಮತ್ತೊಬ್ಬನನ್ನು ಕಾರ್ಯದರ್ಶಿಯಾಗಿ ನೇಮಿಸಿದ ಶೆಟ್ಟರ್ ತನ್ನ ತಮ್ಮ ಪ್ರದೀಪ ಶೆಟ್ಟರ್, ಜೋಷಿಯ ತಮ್ಮ ಗೋವಿಂದ ಮತ್ತು ಅನಂತ್‌ಕುಮಾರನ ತಮ್ಮ ನಂದಕುಮಾರ ಮೊದಲಾದವರನ್ನು ಉಸ್ತುವಾರಿಕೆಗೆ ನೇಮಿಸಿದರು. ಕೋಟಿಗೆ ಬಾಳುವ ಹೈಟೆಕ್ ಕುಳಗಳನ್ನು ಹೆಕ್ಕಿ ತೆಗೆದು ಅವರಿಂದ ತಲಾ ನಾಲ್ಕು ಲಕ್ಷದಂತೆ ಚಂದಾ ವಸೂಲಿ ಮಾಡಿ ಅವರನ್ನು ತಮ್ಮ ಗುಂಪಿಗೆ ಸೇರಿಸಿಕೊಂಡಿದ್ದಾರೆ. ವಿಚಿತ್ರವೆಂದರೆ, ಮಾಜಿ ಮ[...] ಬಸವರಾಜ ಹೊರಟ್ಟಿಯ ಪುತ್ರ ವಸಂತ ಹೊರಟ್ಟಿ, ಕಾಂ[...] ಮುಖಂಡ ರಾಜಾ ದೇಸಾಯಿಯಂತಹವರು ಈ ಟೀ[...] ಮೆಂಬರ್‌ಗಳಾಗಿರೋದು.

ಶೆಟ್ಟರ್ ವಿರುದ್ಧ ಆಂದೋಲನ ಜ[...]


ಸಾರ್ವಜನಿಕರಿಗೆ ಮುಕ್ತವಾಗಿದ್ದ ಜಿಮ್‌ಖಾನ ಮೈ[...] ದಿಢೀರ್ ಅಂತ ಖಾಸಗಿ ಸ್ವತ್ತಿನಂತಾಗಿ ಪೆವಿಲಿಯ[...] ಬಾರ್, ಇಸ್ಪೀಟ್ ಅಡ್ಡ, ಮಸಾಜ್ ಸೆಂಟರ್ ಹಾ[...] ಹೈಟೆಕ್ ಲಾಡ್ಜ್‌ಗಳ ಕಾಮಗಾರಿಗೆ ಮೂಕಸಾಕ್ಷಿಯ[...] ನಿಲ್ಲುತ್ತಿದ್ದಂತೆಯೇ ಪ್ರಜ್ಞಾವಂತ ಜನ ಆಡಳಿತಮಂಡಳಿ[...] ವಿರುದ್ಧ ತಿರುಗಿಬಿದ್ದಿದ್ದರು. ಪಬ್ಲಿಕ್ ಪ್ರೈವೇ[...] ಪಾರ್ಟಿಸಿಪೇಷನ್ ಆಧಾರದ ಮೇಲೆ ಸಾರ್ವಜನಿಕ[...] ಯಾವುದೇ ಪ್ರಕಟಣೆಗಳನ್ನು ನೀಡದೆ, ಏಕಪಕ್ಷೀಯ[...] ಜಿಲ್ಲಾ ಆಡಳಿತದ ಮೂಲಕ ಮೈದಾನದ ಜಾಗ[...] ಲಪಟಾಯಿಸಲು ಶೆಟ್ಟರ್, ಜೋಷಿ ಮೊದಲಾದ ಚೆ[...] ಟೀಮು ಹೊರಟಿರೋದು ಒಂದೊಂದಾಗಿ ಹೊರಬೀ[...] ಆರಂಭಿಸಿದ್ದವು. ಆಗ ಹುಬ್ಬಳ್ಳಿಯ ಹಿರಿಯ [...] ನಾಡೋಜ ಪಾಟೀಲ ಪುಟ್ಟಪ್ಪ ಹಾಗೂ ಸಿ.ಬಿ.ಎಲ್ [...] ನೇತೃತ್ವದಲ್ಲಿ ಸ್ಪೋರ್ಟ್ಸ್ ಗ್ರೌಂಡ್ ಬಚಾವೋ ಸ[...] ರಚನೆಯಾಗಿ ಹೋರಾಟ ಶುರುವಾಯಿತು. ಗಂಗೂಬ[...] ಹಾನಗಲ್ ಮೊಮ್ಮಗ ಮನೋಜ ಹಾನಗಲ್, ವೆಂಕ[...] ಸವದತ್ತಿ, ವಿನಾಯಕ ಶಿರಾಳಕರ್, ಹೂವಪ್ಪ ದಾಯಿಗ[...] ಅನಿತಾ ಗುಂಜಾಳ, ಮಾಜಿ ಸಂಸದ ಆಯ್.ಜಿ. [...] ಪುತ್ರ ಶಾಕೀರ್ ಸನದಿ, ಅಮೃತ ಇಜಾರಿ, [...] ಮಿರ್ಜಿಗಳಂತಹ ನೂರಾರು ಹೋರಾಟಗಾರರು ಮೈದ[...] ಹೊರಗೇ ಟೆಂಟ್ ಹಾಕಿ ಪ್ರತಿಭಟನೆಗೆ ಕೂತರು. ಕ್ರಮ[...] ಈ ಹೋರಾಟಕ್ಕೆ ಉಜ್ವಲ್ ಗುಂಡಮಿ ನೇತ[...] ಯುನೈಟೆಡ್ ಸ್ಪೋರ್ಟ್ಸ್ ಅಂಡ್ ಕಲ್ಚರಲ್ ಕ್ಲಬ್, [...] ದಲಿತ ಸಂಘಟನೆಗಳು, ರಕ್ಷಣಾ ವೇದಿಕೆ, ದೇಶಪ[...] ನಗರ, ಬೈಲಪ್ಪನವರ ನಗರ, ಕುಂಭಕೋ[...] ಪ್ಲಾಟ್‌ನಿವಾಸಿಗಳು ಸೇರಿದಂತೆ ಅವಳಿ ನಗರದ 75[...] ಹೆಚ್ಚು ಸಂಘಟನೆಗಳು ಸಕ್ರಿಯವಾಗಿ ಕಾಲಿರಿಸಿದವು. [...] ಪ್ರತಿಭಟನೆಕಾರರು ಮಾಜಿ ಸಿ.ಎಂ. ಜಗದೀಶ [...] ಹಾಗೂ ಸಂಸದ ಪ್ರಹ್ಲಾದ ಜೋಷಿ ಮನೆ ಮ[...] ಧರಣಿ ನಡೆಸಿ ಅವರ ಮುಖಕ್ಕೂ ಕ್ಯಾಕರಿಸಿ ಬಂದಿ[...] ಅಂತೂ ಚೆಡ್ಡಿ ಕುತಂತ್ರ ವಿರುದ್ಧದ ಈ ಹೋರಾಟ ಬ[...] ಆಂದೋಲನವಾಗೇ ರೂಪ ತಳೆಯುತ್ತಿದೆ.


ಭಯಬಿದ್ದು ಕೇವಿಯಟ್ ಹಾಕಿದ[...]

ಜನರ ಈ ಆಕ್ರೋಶ ಶೆಟ್ಟರ್ ಟೀಮಿಗೆ ಇನ್ನಿಲ್ಲ[...] ತಳಮಳ ತಂದಿಟ್ಟಿದೆ. ಸದ್ಯದರಲ್ಲೇ ಎದುರಾಗಲಿ[...] ಲೋಕಸಭಾ ಚುನಾವಣೆಗೆ ಇದು ಹಿ[...] ಉಂಟುಮಾಡಬಹುದೆಂಬ ಲೆಕ್ಕಾಚಾರಕ್ಕಿಳಿದ ಚೆ[...] ಜನರ ಕೆಂಗಣ್ಣಿನಿಂದ ಪಾರಾಗಲು ಹೈಕೋರ್ಟ್[...] ಕೇವಿಯಟ್ ದಾಖಲಿಸಿದ್ದಾರೆ. ಬೀಸೋ ದೊಣ್ಣೆ[...] ತಪ್ಪಿಸಿಕೊಂಡು ನಿಟ್ಟುಸಿರು ಬಿಡುತ್ತಲೇ [...] ಆಂದೋಲನದಲ್ಲಿ ಪಾಲ್ಗೊಂಡಿರುವ ಒಬ್ಬೊಬ್ಬ[...] ಒಂದೊಂದು ರೀತಿಯ ಕಿರಿಕ್ಕು ನೀಡಿ ತಣ್ಣಗಾ[...] ತಂತ್ರ ಹೆಣೆಯುತ್ತಿದ್ದಾರೆ. ಮುಂಚೂಣಿಯಲ್ಲಿರುವ ಪಾ[...] ಪುಟ್ಟಪ್ಪ ಅವರಿಂದ ಹಿಡಿದು, ಸಣ್ಣಪುಟ್ಟ ಕ್ರೀಡಾಪಟುಗ[...] ಅನಾಮಿಕರಿಂದ ಬೆದರಿಕೆ ಹಾಕಿಸುತ್ತಿದ್ದಾರೆ. ಸದಾ [...] ಮನೆ ಗೇಟು ಕಾಯುವ ಎ.ಸಿ.ಪಿ. ಬಡಿಗೇರ್ [...] ಸೂತ್ರಧಾರಿ.

ಕಳೆದೊಂದು ತಿಂಗಳಿಂದ ನಡೆಯುತ್ತಿರುವ ಚೆ[...] ವಿರುದ್ಧ ಈ ಹೋರಾಟಕ್ಕೆ ಜಿಲ್ಲಾ ಉಸ್ತುವಾರಿ [...] ಸಂತೋಷ್ ಲಾಡ್ ಎಂಟ್ರಿ ಅವಶ್ಯವಾಗಿದೆ. ಜನರ ಒತ್ತ[...] ಮಣಿದು ಸರ್ಕಾರದಿಂದ ನ್ಯಾಯ ಕೊಡಿಸುವುದಾಗಿ [...] ಸ್ಟೈಲಿನ ಡೈಲಾಗ್ ಹೊಡೆದಿರುವ ಲಾಡ್ ಸಾಹೇ[...] ಕೂಡಲೇ ಕಾರ್ಯಪ್ರವೃತ್ತರಾಗದಿದ್ದರೆ ಜಿಮ್[...] ಮೈದಾನವನ್ನು ಹರಿದು ಮುಕ್ಕಲು ಶೆಟ್ಟರ್ ಅಂಡ್ [...] ಟೀಂ ಹೇಸುವುದಿಲ್ಲ.


● ಹುರಳಿಕುಪ್ಪಿ ವಿನ[...]


ಜನರ ಆಕ್ರೋಶಕ್ಕೆ ಬೆದರಿ ತನ್ನ ಮನೆಗೆ ಪೊಲೀಸ್ ರಕ್ಷಣೆ ಪಡೆದಿರುವ ಜೋಶಿ


ಸಾರ್ವಜನಿಕರಿಗೆ ಬಂದ್ ಆಗಿರುವ ಜಿಮ್‌ಖಾನ

ಚೆಡ್ಡಿಗಳ ಹುನ್ನಾರ

ತಮ್ಮ ವಿರುದ್ಧ ಭುಗಿಲೆದ್ದಿರುವ ಜನಾಂದೋಲನಕ್ಕೆ ಚೆಡ್ಡಿಗಳು ರಾಜಕೀಯ ಲೇಪಿಸಿ ಹೋರಾಟದ ದಿಕ್ಕು ತಪ್ಪಿಸುವ ಹುನ್ನಾರದಲ್ಲಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೆಟ್ಟರ್ ವಿರುದ್ಧ ಸ್ಪರ್ಧಿಸಿದ್ದ ಡಾ. ಮಹೇಶ್ ನಲವಾಡ ಅವರೂ ಈ ಹೋರಾಟದಲ್ಲಿ ಸಕ್ರಿಯರಾಗಿದ್ದಾರೆ. ಇದನ್ನೇ ನೆಪ ಮಾಡಿಕೊಂಡ ಶೆಟ್ಟರ್ ಗ್ಯಾಂಗ್ ಚುನಾವಣೆಯಲ್ಲಿ ಸೋತ ಸೇಡನ್ನು ಈ ಮೂಲಕ ತೀರಿಸಿಕೊಳ್ಳಲು ನಲವಾಡ 'ಶೆಟ್ಟರ್ ವಿರುದ್ಧ ಅಪಪ್ರಚಾರ ಮಾಡುತ್ತಿದ್ದಾರೆ' ಎಂಬ ಪುಕಾರೆಬ್ಬಿಸಿದೆ. ಅಲ್ಲದೆ ಲೋಕಸಭಾ ಚುನಾವಣೆಯ ಲಾಭಕ್ಕೋಸ್ಕರ ಮೈದಾನದ ವಿಷಯ ಕೆದಕಲಾಗುತ್ತಿದೆ ಎಂದು ಬಿ.ಜೆ.ಪಿ.ಗರು ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಪಕ್ಷಾತೀತವಾಗಿ ನಡೆಯುವ ಜನಪರ ಹೋರಾಟಕ್ಕೆ ರಾಜಕೀಯ ಬಣ್ಣ ಬಳಿಯುವ ಕಾಯಕ ಬಿಜೆಪಿಗರಿಗೆ ಹೊಸದೇನೂ ಅಲ್ಲ. ಆದರೂ ಇದಕ್ಕೆ ಚುನಾವಣೆಯಲ್ಲಿ ಭಾರೀ ಬೆಲೆ ತೆರಬೇಕಾಗುತ್ತದೆನ್ನುವುದು ಮಾತ್ರ ಸತ್ಯ.



ಕೋರಮಂಗಲದ ವಿಶ್ರಾಮಿ ಕಚೇರಿ




ಬಾಣಸವಾಡಿ ಕಚೇರಿ ಮುಂದೆ ನೌಕರರ ಪ್ರತಿಭಟನೆ



ಮುಚ್ಚಿದ ಬಾಣಸವಾಡಿ ಕಚೇರಿ ಮುಂದೆ 'ಭರತ್ ಸಂಧಾನ'

ಸರ್ಕಾರಿ ಪಶುವೈದ್ಯನ ಆನ್‌ಲೈನ್ ದೋಖಾ!



ವಂಚಕ ಗೋಪಾಲ್

...ತ ವೃತ್ತಿಯಲ್ಲಿ ಸರ್ಕಾರಿ ಪಶುವೈದ್ಯ. ನೆಲಮಂಗಲದ ...ಒಂದರ ದನದ ಆಸ್ಪತ್ರೆಯಲ್ಲಿ ಈಗಲೂ ಕೆಲಸ ಮಾಡಿ ...ತಿದ್ದಾನೆ. ನೋಡಲು ಬಲು ಮೆತ್ತನೆಯ ಆಸಾಮಿ. ...ಇಂಟರ್‌ನೆಟ್ ವಂಚನೆಯಲ್ಲಿ ಎತ್ತಿದ ಕೈ. ದಿಸ್ಕೋಥೆಕ್ ...ನಂತಿರುವ ತನ್ನ ಅಣ್ಣನ ಮಗನೊಟ್ಟಿಗೆ ಸೇರಿ ...ಗಸ್ ಆನ್‌ಲೈನ್ ಕಂಪನಿಗಳನ್ನು ಸೃಷ್ಟಿಸಿ ಸಾಫ್ಟ್‌ವೇರ್ ...ಪ್‌ಮೆಂಟ್, ಇ-ಶಾಪಿಂಗ್, ಅಡ್ವಟೈಸಿಂಗ್, ...ರ್ನೆಟ್ ಮಾರ್ಕೆಟಿಂಗ್ ಹೆಸರಲ್ಲಿ ನೂರಾರು ಕೋಟಿಗೆ ... ತೀಡೋದು, ನೌಕರರಿಗೆ ಸಂಬಳ ಕೊಡೋದೆ ...ಮಿಸೋದು, ಆಫೀಸ್ ಕಟ್ಟಡ ಬಾಡಿಗೆ ನೀಡದೆ ...ಸಾಗೋದೆ ಇವನ ಕಾಯಂ ಕಾಯಕ.

...ಅಪ್ಪ ಕಳ್ಳ-ಮಗ ಮಳ್ಳನಂತಿರುವ ಈ ಖತರ್ನಾಕ್ ...ಡಿಗೆ ಚಿಕ್ಕಪ್ಪ ರಾಮಯ್ಯ ರೇಣು ಗೋಪಾಲ್‌ನೇ ...ಆರ್.ಗೋಪಾಲ್) ಅಧಿಪತಿ, ಅಣ್ಣನ ಮಗ ಭರತ್ ...ಾರ್‌ನೇ ದಳಪತಿ. ಎಂ-ಕಾಂಪಾಸ್, ಮ್ಯಾಸ್ನಾಪ್, ಒನ್ ...-ಎಂ ಡಾಟ್ ಕಾಮ್ ಹೀಗೆ ಚಿತ್ರವಿಚಿತ್ರ ಹೆಸರಿನ ...ವೇರ್ ಮತ್ತು ಜಾಹಿರಾತು ಕಂಪನಿಗಳನ್ನು ತೆರೆಯುವ ...ಿ ನೂರಾರು ಜನ ನೌಕರರನ್ನು ದುಬಾರಿ ಸಂಬಳದ ...ೂಡ್ಡಿ ನೇಮಿಸಿಕೊಳ್ಳುತ್ತಾರೆ. ಈ ಕಂಪನಿಗಳಿಗೆ ಇವರಿ ...ಡೈರೆಕ್ಟರ್‌ಗಳು. ಹೀಗೆ ತೆರೆಯುವ ಅವರ ಅಂಗಡಿಗಳು ...ೋದು ಆರು ತಿಂಗಳು ಮಾತ್ರ. ಅಷ್ಟರಲ್ಲೇ ಬೇಕಾದಷ್ಟು ...ಯಿ ಮಾಡಿಕೊಂಡು, ಕೆಲಸಗಾರರಿಗೂ ಸಂಬಳ ...ದೆ ಪರಾರಿಯಾಗಿ ಬಿಡುತ್ತಾರೆ. ಸ್ವಲ್ಪ ದಿನದ ನಂತರ ...ಒಂದು ಫ್ರೆಶ್ ಕಂಪನಿಗೆ ನಾಮಕರಣ ಮಾಡಿ ಹೊಸ ...ನೆಗೆ ಸಜ್ಜಾಗುತ್ತಾರೆ. ತಾವು ನೇಮಿಸಿಕೊಳ್ಳುವ ನೌಕರರಿಗೆ ...ವೇರ್ ಡೆವಲಪರ್, ಮಾರ್ಕೆಟಿಂಗ್ ಮ್ಯಾನೇಜರ್, ...ಂಟ್ಸ್ ಮ್ಯಾನೇಜರ್, ಕ್ರಿಯೇಟಿವ್ ಹೆಡ್ ಹೀಗೆ ...ೈ ಡೆಸಿಗ್ನೇಷನ್‌ಗಳನ್ನೂ ನೀಡುತ್ತಾರೆ. ಹಾಗೆ ಸೇರಿಸಿ ...ವ ನೌಕರರಿಗೆ ಇವರು ತಮ್ಮದು ಆನ್‌ಲೈನ್ ...ರಾಜು ಆಧಾರಿತ ಕಂಪನಿ, ಒಂದೆರಡು ತಿಂಗಳಲ್ಲಿ ...ತ್ಯಂತರ ಟರ್ನ್‌ಓವರ್‌ಗೆ ಬಂದು ತಲುಪುತ್ತೆ ನೀವೆಲ್ಲಾ ...ಟೆಡ್ ಆಗಿ ಕೆಲಸ ಮಾಡಬೇಕು ಅಂತ ಬ್ರೈನ್‌ವಾಶ್ ...ಿ ಎಲ್ಲರ ಕೈಗೂ ಒಂದೊಂದು ಲ್ಯಾಪ್‌ಟಾಪ್ ಕೊಟ್ಟು ...ರಿಗೆ ಗದುಮುತ್ತಾರೆ. ಮಿಂಟ್ರಾ.ಕಾಮ್, ಫ್ಲಿಪ್‌ಕಾರ್ಟ್, ...ೀ.ಕಾಮ್, ಫ್ರೀಜಾರ್ಗ್ ಮೊದಲಾದ ಕಂಪನಿಗಳು ...ಲೈನ್ ಶಾಪಿಂಗ್‌ನಲ್ಲಿ ಹೆಸರು, ದುಡ್ಡು ಮಾಡಿರೋದನ್ನು ... ಕಂಡ ಎಜುಕೇಟೆಡ್ ಬಡಪಾಯಿಗಳು ಅವರ ...ನ್ನು ನಂಬಿ ಕುತ್ತಿಗೆಗೆ ಟೈ ಬಿಗಿದು ವ್ಯಾಪಾರಕ್ಕೆ ...ವಾಗಿ ಬಿಡುತ್ತಾರೆ.

...ೀಗೆ ಆವಾದಕ್ಕೆ ಇಳಿದವರು ಮಾಡಬೇಕಾದ್ದು ಇಷ್ಟೇ: ...ೈ ದೊಡ್ಡ ಕಂಪನಿ, ವ್ಯಾಪಾರೀ ಸಂಸ್ಥೆ ಅಂಗಡಿ, ...ಟೆಲ್‌ಗಳಿಗೆ ಹೋಗಿ 'ನಿಮ್ಮ ಉತ್ಪನ್ನಗಳಿಗೆ ನಾವು ...ೈನ್ ಜಾಹಿರಾತು ನೀಡಿ, ಗ್ರಾಹಕರ ಮನವೊಲಿಸಿ ...ಲ್ಲಿಗೆ ಕಳುಹಿಸಿ ಕೊಡ್ತೀವಿ, ನಿಮ್ಮ ವ್ಯಾಪಾರ ...ಾಗುವಂತೆ ಪ್ರಚಾರ ಮಾಡ್ತೀವಿ. ನೀವು ನಮ್ಮ ...ಯ ಮೆಂಬರ್‌ಶಿಪ್ ಖರೀದಿಸಿ' ಅಂತ ದಂಬಾಲು ...ಬೇಕು. ತಾವು ಹೊತ್ತೊಯ್ದ ಲ್ಯಾಪ್‌ಟಾಪ್ ಆನ್ ...ಿ, ಅದರಲ್ಲಿ ತಮ್ಮ ಕಂಪನಿಯ ಡೆಮೋ ಶೋಗಳನ್ನು ... ಮಾಡಿ ಸಿನಿಮಾಗೂ ಹೀಗೆ ಕಲರ್‌ಫುಲ್ ಸ್ಕ್ರೀನ್...

ಕೊಡ್ತೀವಿ ಅಂತ ಮನವೊಲಿಸಬೇಕು. ಅಷ್ಟಕ್ಕೂ ವಾರ್ಷಿಕ ಮೆಂಬರ್‌ಶಿಪ್‌ನ ಚಂದಾ ಎಷ್ಟು ಗೊತ್ತೆ? ಬರೋಬ್ಬರಿ 25,000 ರೂಪಾಯಿ! ಅವರೇನಾದರು ಒಪ್ಪಿದರೆ ಸ್ಥಳದಲ್ಲೇ 'ಗಣಪತಿ ಫಂಡ್ ಕಲೆಕ್ಷನ್'ನಂತಹ ರಸೀದಿ ಪುಸ್ತಕವೊಂದರಲ್ಲಿ ಬಿಲ್ ಬರೆದುಕೊಟ್ಟು ಹಣ ತಂದು ಚಿಕ್ಕಪ್ಪ-ಮಗನ ಅಕೌಂಟಿಗೆ ಹಾಕಬೇಕು. ಈ ಕಂಪನಿಯ ಓನರ್ ಯಾರು? ಅವರ ಮುಖ ಹೇಗಿದೆ? ಹಿನ್ನೆಲೆ ಎಂತದ್ದು? ಕಡೇ ಪಕ್ಷ ಬಿಲ್‌ನಲ್ಲಿ ತಿಳಿಸಲಾಗಿರೋ ಕಚೇರಿ ವಿಳಾಸ ಅಸಲಿಯೋ, ನಕಲಿಯೋ? ಎಂಬ ಯಾವುದೂ ಬಯಲಾಗದೆ ಹಣ ಇವರ ಖಜಾನೆ ಸೇರಿ ಬಿಡುತ್ತೆ. ನೌಕರರನ್ನು ಹುರಿದುಂಬಿಸಿ ಕಲೆಕ್ಷನ್ ಹಿಗ್ಗಿಸಿಕೊಳ್ಳೋ ದೃಷ್ಟಿಯಿಂದ ಮೊದಲ ಒಂದೆರಡು ತಿಂಗಳು ಕರೆಕ್ಟಾಗಿ ಸಂಬಳ ನೀಡುವ ಕಂಪನಿ ಮೂರನೇ ತಿಂಗಳಿನಿಂದ ತನ್ನ ವರಾತ ಆರಂಭಿಸುತ್ತದೆ. ಸ್ವಲ್ಪ ಸಮಸ್ಯೆ ಇದೆ, ಇದೊಂದು ತಿಂಗಳು ತಡೆದುಕೊಳ್ಳಿ. ಮುಂದಿನ ತಿಂಗಳು ಎರಡೂ ಸ್ಯಾಲರಿಯನ್ನು ಒಟ್ಟಿಗೇ ಕೊಟ್ಟು ಬಿಡ್ತೀವಿ ಅನ್ನೋ ರಾಗ ಹಾಡುತ್ತಾರೆ. ಇದೇ ರೀತಿ ಮತ್ತೊಂದೆರಡು ತಿಂಗಳು ತಳ್ಳುವ ವೇಳೆಗೆ ಭರ್ಜರಿ ಕಲೆಕ್ಷನ್ ಬಂದು ಸೇರಿರುತ್ತೆ. ಹೇಳದೆಕೇಳದೆ ಕಂಪನಿಯನ್ನೇ ಶಟ್-ಡೌನ್ ಮಾಡಿ ನಾಪತ್ತೆಯಾಗಿ ಬಿಡುತ್ತಾರೆ. ಮೆಂಬರ್‌ಶಿಪ್ ಪಡೆದ ಗ್ರಾಹಕರಿಗೆ ಕಾಂಟ್ಯಾಕ್ಟ್ ಅಂತ ಇರೋದು ರಸೀದಿ ಹರಿದ ಸಿಬ್ಬಂದಿ ಮಾತ್ರ. ಹಾಗಾಗಿ ಅವರು ನೌಕರರಿಗೆ ಧಮಕಿ ಹಾಕಲು ಶುರು ಮಾಡುತ್ತಾರೆ.

ಇತ್ತ ಸಂಬಳವೂ ಇಲ್ಲದೆ, ಅತ್ತ ಗ್ರಾಹಕರ ಉಪಟಳವೂ ತಾಳದೆ ಮೊಬೈಲ್ ಸಿಮ್ ಬದಲಿಸಿಕೊಂಡು ಸಿಲಿಕಾನ್ ಸಿಟಿಯಲ್ಲಿ ಅಬೇಸ್ ಆಗಿ ಹೊಸ ಕೆಲಸ ತಲಾಶ್ ಮಾಡುವುದೇ ಅವರಿಗೆ ಉಳಿಯುವ ದಾರಿ. ಹಠಕ್ಕೆ ಬಿದ್ದು ಸಂಬಳ ತೆಗೆದುಕೊಳ್ಳಲು ವಂಚಕ ಚಿಕ್ಕಪ್ಪ-ಮಗನ ಜೋಡಿಯ ಮನೆವರೆಗೂ ಯಾರಾದರು ಹೋದರೆ ರೌಡಿಗಳನ್ನು ಛೂಬಿಟ್ಟು ಧಮಕಿ ಹಾಕಿಸಿ ಹಲ್ಲೆ ಮಾಡಿ ಮೆತ್ತಗಾಗಿಸಿ ಬಿಡುತ್ತಾರೆ. ಹೇಗೂ ಇಂತಹ ಆನ್‌ಲೈನ್ ಕೆಲಸಕ್ಕೆ ಸೇರುವವರಲ್ಲಿ ಬಹುಪಾಲು ಉತ್ತರ ಭಾರತದ 'ಸಾರ್ಥಿ'ಗಳೇ ಆಗಿರುತ್ತಾರೆ. ಲೋಕಲ್ ಗೂಂಡಾಗಿರಿ ಒಮ್ಮೆ ನೋಡಿದರೆ ಸಾಕು ಸಂಬಳವೂ ಬೇಡ, ಸಹವಾಸವೂ ಬೇಡ ಅಂತ ಗಪ್‌ಚುಪ್ ಆಗಿಬಿಡುತ್ತಾರೆ. ಇದೇ ಇವರ ಬಂಡವಾಳ.

ಕಚೇರಿ ಬಾಡಿಗೆಯೇ ೧೧ ಲಕ್ಷ!

ಅಸಲಿಗೆ ಇಂತಹ 'ಸಾಫ್ಟ್' ವಂಚನೆಯ ಜಾಲವನ್ನು ಹುಟ್ಟುಹಾಕಿದ್ದು ನಿತಿನ್ ನಾಯ್ಡು ಅಲಿಯಾಸ್ ಹೇಮಂತ್ ಕುಮಾರ್ ಎನ್ನುವ ನುಣ್ಣನೆಯ ಆಸಾಮಿ. ಜೊತೆಗೆ ಆರ್.ಆರ್. ಗೋಪಾಲ್ ಮತ್ತು ಭರತ್ ಕುಮಾರ್ ಪಾಲುದಾರರಾಗಿದ್ದರು. ಇವರು 2007ರಲ್ಲಿ ಮೊದಲು ಆರಂಭಿಸಿದ್ದು ಬಾಣಸವಾಡಿಯ ಎಚ್.ಎಂ.ಆರ್ ಬಿಲ್ಡಿಂಗ್‌ನ ಚಿಕ್ಕ ಮಳಿಗೆಯಲ್ಲಿ. ಆರಂಭದ ಬ್ಯಾಚ್‌ನಿಂದ ಅಷ್ಟೊಂದಾಗಿ ವರ್ಕ್‌ಔಟ್ ಆಗಲಿಲ್ಲ. ಕಳೆದ ವರ್ಷ ಎಂ-ಕಾಂಪಾಸ್ ಆ್ಯಡ್ ಪ್ರೈವೇಟ್ ಲಿಮಿಟೆಡ್ ಹೆಸರಿನ ಹೊಸ ಕಂಪನಿ ಶುರು ಮಾಡಿದರು. ಆಗ ಸುಮಾರು 35 ಜನ ಕೆಲಸಗಾರರನ್ನು ದುಬಾರಿ ಸಂಬಳಕ್ಕೆ ಗುತ್ತಿಗೆ ಹಿಡಿದು ಬಜಾರಿಗೆ ಬಿಟ್ಟಿದ್ದರು. ಆಗ ಸರಿಯಾದ ಗಂಟನ್ನೇ ಕಂಡರು. ಯಥಾಪ್ರಕಾರ ಆರು ತಿಂಗಳಿಗೆ ಆ ಕಂಪನಿಯನ್ನು ಮುಚ್ಚಿ ಕೆಲಸಗಾರರಿಗೆ ಮೂರ್ನಾಲ್ಕು ತಿಂಗಳ ಸಂಬಳ ಕೊಡದೆ ನಾಪತ್ತೆಯಾಗಿದ್ದರು. ಸ್ವಲ್ಪ ದಿನ ಅಲೆದಾಡಿದ ಅವರು ಬೇರೆ ಕೆಲಸ ಹುಡುಕಿಕೊಂಡು ಸಂಬಳಕ್ಕೆ ಪೀಡಿಸುವುದನ್ನೇ ಮರೆತ ನಂತರ ಅದೇ ಕಚೇರಿಯಲ್ಲಿ ಜನವರಿ 2013ರಲ್ಲಿ ಮ್ಯಾಸ್ನಾಪ್ ಆ್ಯಡ್ ಪ್ರೈವೇಟ್ ಲಿಮಿಟೆಡ್ ಎಂಬ ಮತ್ತೊಂದು ಹೊಸ ಕಂಪನಿ ತೆರೆದಿದ್ದರು.

ಈ ಹಿಂದಿನ ಪ್ರಯೋಗದಲ್ಲಿ ಭರ್ಜರಿ ಗಂಟು ಬಾಚಿದ್ದ ಖದೀಮರು ಈ ಸಲ ಮತ್ತಷ್ಟು ಲಪಟಾಯಿಸಲು ದುಬಾರಿ ಬದಲಾವಣೆಗಳನ್ನೇ ಮಾಡಿಕೊಂಡಿದ್ದರು. ಬಾಣಸವಾಡಿಯಲ್ಲಿದ್ದ ಕಚೇರಿಯನ್ನು ದಿಢೀರಾಗಿ ಕಾಸ್ಟ್ಲಿ ದುನಿಯಾ ಕೋರಮಂಗಲದ 'ಸಾಲಾಪುರಿಯಾ ಅಸೆಂಟ್' ಬಿಲ್ಡಿಂಗ್‌ಗೆ ವರ್ಗಾಯಿಸಿಕೊಂಡಿದ್ದರು. ಈ ನಡುವೆ ಮೂಲ ಕಸುಬಸ್ಥ ಹೇಮಂತ್‌ಗೂ ಚಿಕ್ಕಪ್ಪ-ಮಗನ ಜೋಡಿಗೂ ಒಂಚೂರು ತಾಳಮೇಳ ತಪ್ಪಿದ್ದರಿಂದ ಆತನನ್ನು ಇವರಿಬ್ಬರೂ ಹೊರಗಟ್ಟಿದ್ದರು. ಈಗ ಇಡೀ ವ್ಯವಹಾರ ಇವರಿಬ್ಬರ ಕೈಗೆ ಬಂದಿತ್ತು. ಅಂದಹಾಗೆ, ಹೊಸ ಕಚೇರಿಗೆ ಅವರು ಕಟ್ಟುತ್ತಿದ್ದ ಬಾಡಿಗೆಯಾದರು ಎಷ್ಟು ಗೊತ್ತೆ ಬರೋಬ್ಬರಿ 11,67,983 ರೂ. ಇತರೆ ಮೇಂಟೆನೆನ್ಸ್ ಎಲ್ಲಾ ಸೇರಿದರೆ ಹದಿನಾಲ್ಕು ಲಕ್ಷವನ್ನೂ ಮೀರುತ್ತಿತ್ತು. ಕಚೇರಿ ಬಾಡಿಗೇ ಇಷ್ಟು ಖರ್ಚು ಮಾಡುತ್ತಿದ್ದರೆಂದರೆ ಅವರ Income ಅದೆಷ್ಟಿರಬೇಡ.

ಕೋರಮಂಗಲಕ್ಕೆ ಶಿಫ್ಟ್ ಆಗುತ್ತಿದ್ದಂತೆಯೇ ಆರ್.ಆರ್.ಗೋಪಾಲ್ ಮತ್ತು ಭರತ್ ಕುಮಾರ್ ಜೋಡಿ ಅನಾಮತ್ತು 170 ಸಿಬ್ಬಂದಿಗಳನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಅವರೆಲ್ಲಾ ಸ್ಪಷ್ಟವಾಗಿ ಇಂಗ್ಲಿಷ್ ಉದುರಿಸಬಲ್ಲ ಎಂ.ಬಿ.ಎ, ಎಂ.ಕಾಂ, ಬಿ.ಇ ಗ್ರ್ಯಾಜುಯೇಟ್‌ಗಳು. ಪ್ರತಿಯೊಬ್ಬನಿಗೂ ಕನಿಷ್ಠವೆಂದರೂ 20-25 ಸಾವಿರ ಸಂಬಳದ ಭರವಸೆ ನೀಡಿದ್ದರು. ಮ್ಯಾಸ್ನಾಪ್ ಕಂಪನಿಯಲ್ಲಿ 'ಒನ್‌ಸ್ಟಾಪ್-ಎಂ.ಕಾಮ್' ಎನ್ನುವ ವೆಬ್‌ಸೈಟ್ ಮೂಲಕ ಆನ್‌ಲೈನ್ ಶಾಪಿಂಗ್, ಜಾಹಿರಾತು ಪ್ರೊಮೊ ಬಿತ್ತರಿಸಲಾಗುವುದು ಎಂದು ಅವರನ್ನೆಲ್ಲಾ ನಂಬಿಸಲಾಗಿತ್ತು. ಕೋರಮಂಗಲದ ಗ್ಲಾಸಿ ಬಿಲ್ಡಿಂಗು, ಒಬ್ಬೊಬ್ಬರ ಕೈಗೂ ಲ್ಯಾಪ್‌ಟಾಪು, ಕಣ್ಣುಕುಕ್ಕುವ ಆಫೀಸ್ ಇಂಟೀರಿಯರ್ ಡಿಸೈನಿಂಗೂ ಇವನ್ನು ನೋಡಿದ ಯಾರೇ ಆಗಲಿ ಅನುಮಾನಿಸುವಂತೆಯೇ ಇರಲಿಲ್ಲ. ಇದೇ ಉತ್ಸಾಹದಲ್ಲಿ ನೌಕರರೆನಿಸಿಕೊಂಡ ಭಾವೀ ವಂಚಿತರು ಗ್ರಾಹಕರ ಬೇಟೆಗಿಳಿದಿದ್ದರು. ಈ ಸಲವಂತೂ ಆರ್.ಆರ್.ಗೋಲ್ಡ್ ಪ್ಯಾಲೇಸ್, ಶಾಂತಿಸಾಗರ್ ಹೋಟೆಲ್, ಕಾಮತ್, ಕೊನಾರ್ಕ್ ವೆಜ್, ಸ್ಪೋರ್ಟ್ಸ್ ಪ್ಲಾನೆಟ್, ಸ್ಪೋರ್ಟ್ಸ್ ಮಾಲ್ ಮೊದಲಾದ ಪ್ರತಿಷ್ಠಿತ ಸಂಸ್ಥೆಗಳೆ ಈ ಬೋಗಸ್ ಸಂಸ್ಥೆಯ ಮೆಂಬರ್‌ಶಿಪ್ ಪಡೆದುಕೊಂಡಿದ್ದವೆಂದ ಮೇಲೆ ಒಟ್ಟಾರೆ ಆದಾಯ ಭರಪೂರವಾಗಿತ್ತೆನ್ನುವುದನ್ನು ಬಿಡಿಸಿ ಹೇಳಬೇಕಿಲ್ಲ ಅಲ್ಲವೆ.


ಪೊಲೀಸರಿಂದಲೂ ಪರಿಹಾರ ಇಲ್ಲ

ತಮ್ಮ ಒನ್‌ಸ್ಟಾಪ್ ವೆಬ್‌ಸೈಟ್‌ನ ಮೂಲಕ ಪ್ರಚಾರ ಕೊಡ್ತೀವಿ, ವ್ಯಾಪಾರ ವೃದ್ಧಿಸ್ತೀವಿ ಅಂತ ದುಡ್ಡು ಕೀಳಿಸಿದ್ದರಾದರು ಆ ವೆಬ್‌ಸೈಟ್ ಲಾಂಚ್ ಆಗುವುದಕ್ಕೆ ಮುನ್ನವೇ ಮ್ಯಾಸ್ನಾಪ್ ಕಂಪನಿಯನ್ನು ಮುಚ್ಚಿ ಚಿಕ್ಕಪ್ಪ-ಮಗ ವಂಚಕ ಜೋಡಿ ನಾಪತ್ತೆಯಾಗಿದೆ. ಒಬ್ಬರಲ್ಲ, ಇಬ್ಬರಲ್ಲ ಬರೋಬ್ಬರಿ 170 ಜನರಿಗೆ ಕಳೆದ ಮೂರು ತಿಂಗಳಿನಿಂದ ಸಂಬಳವನ್ನೇ ನೀಡಿರಲಿಲ್ಲ. ಏನಿಲ್ಲವೆಂದರೂ 35 ರಿಂದ 40 ಲಕ್ಷ ಹಣ ಸಂಬಳ ರೂಪದಲ್ಲಿ ಬರಬೇಕಾಗಿತ್ತು. ಆರ್.ಆರ್.ಗೋಪಾಲ್‌ಗೆ ಅವರೆಲ್ಲ ಫೋನಾಯಿಸಿ ಪೀಡಿಸಿದಾಗ ಕಳೆದ ಜುಲೈ 23 ರಂದು ಕೋರಮಂಗಲದ ಕ್ಲೋಸ್ಡ್ ಕಚೇರಿಯ ಆವರಣಕ್ಕೆ ಬಂದು ಆಗಸ್ಟ್ 23ರ ಒಳಗೆ ಪ್ರತಿಯೊಬ್ಬರಿಗೂ ಸಂಬಳ ಸೆಟ್ಲ್ ಮಾಡುವುದಾಗಿ ಮುಚ್ಚಳಿಕೆ ಬರೆದುಕೊಟ್ಟಿದ್ದ. ಗಡುವಿನ ದಿನದವರೆಗೆ ಕಾದು ಅವನಿಗೆ ಫೋನಾಯಿಸಿದರೆ ಅದು ಸ್ವಿಚ್ ಆಫ್! ಅದೇಗೋ ಮತ್ತೊಂದು ನಂಬರ್ ಪತ್ತೆ ಹಚ್ಚಿದ ಸಿಬ್ಬಂದಿಗಳು ಗೋಪಾಲ್‌ನನ್ನು ಸಂಪರ್ಕಿಸಿದಾಗ ತಾನು ಊರಲ್ಲಿ ಇಲ್ಲ ಅಂತ ಸಬೂಬು ನುಡಿದಿದ್ದ. ಆತನ ಮನೆ ವಿಳಾಸ ತಿಳಿದಿದ್ದ ಕೆಲವರು ಮನೆ ಬಳಿಯೇ ಬರುವುದಾಗಿ ಹೇಳಿದಾಗ 'ನಿಮಗೆ ಸಂಬಳವನ್ನೇ ಕೊಡುವುದಿಲ್ಲ ಏನು ಮಾಡ್ಕೊಳ್ತೀರಿ ಮಾಡ್ಕೋ ಹೋಗಿ' ಅಂತ ಫೋನನ್ನೇ ಕಟ್ ಮಾಡಿದ್ದ.

ಮೋಸ ಮಾಡಲೆಂದೇ ಇಷ್ಟೆಲ್ಲಾ ಸಂಚು ರೂಪಿಸಿರುವುದು ತಿಳಿಯುತ್ತಿದ್ದಂತೆಯೇ ಅವರೆಲ್ಲಾ ರಾಮಮೂರ್ತಿ ನಗರದ ಠಾಣೆಗೆ ಹೋಗಿ ವಂಚನೆ ಆರೋಪದ ದೂರನ್ನೂ ನೀಡಿದ್ದರು. ಅಲ್ಲಿನ ಪೊಲೀಸರು ಅವರಿಬ್ಬರನ್ನೂ ಕರೆಯಿಸಿ ಸಂಬಳ ಕೊಡುವಂತೆ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿ ದೂರನ್ನು ಫೈಲಿಗೆ ಸೇರಿಸಿಕೊಂಡಿದ್ದರು. ಕೇಸ್ ರಿಜಿಸ್ಟರ್ ಆದ ಯಾವ ದಾಖಲೆಯನ್ನೂ ದೂರುದಾರರಿಗೆ ನೀಡಿರಲಿಲ್ಲ. ಸ್ವಲ್ಪ ದಿನದ ನಂತರ ಮತ್ತೆ ಹೋಗಿ ವಿಚಾರಿಸಿದಾಗ 'ಅವರು ಸಿಕ್ಕೇ ಇಲ್ಲ, ನಾವು ಪ್ರಯತ್ನ ಪಡ್ತಿದ್ದೇವೆ' ಅಂದ ಪೊಲೀಸರ ಮಾತುಗಳಲ್ಲಿ ನ್ಯಾಯ ಸಿಗುವ ಯಾವ ಭರವಸೆಗಳೂ ನೌಕರರಿಗೆ ಕಂಡುಬಂದಿರಲಿಲ್ಲ. ಹಾಗಾಗಿ ಅವರು ವಿಧಿ ಇಲ್ಲದೆ ಸಂಸ್ಥೆಯ ಮತ್ತೊಬ್ಬ ಡೈರೆಕ್ಟರ್ ಭರತ್ ಕುಮಾರ್‌ನ ಟಿ.ದಾಸರಹಳ್ಳಿಯ ಮನೆಗೆ ಹೋಗಲು ನಿರ್ಧರಿಸಿದ್ದರು. ಅವರೆಲ್ಲ ಭರತ್‌ನ ಮನೆಗೆ ವಿಚಾರಿಸಲು ಹೋದಾಗ ಅವನ ತಂದೆ (ಆರ್.ಆರ್.ಗೋಪಾಲ್‌ನ ಅಣ್ಣ) ಸದಾನಂದ ಮೂರ್ತಿ ಅಲ್ಲಿನ ಲೋಕಲ್ ರೌಡಿಗಳನ್ನು ಕರೆಸಿ ಧಮಕಿ ಹಾಕಿಸಿದ್ದ. ನೊಂದ ಆಕ್ರೋಶದಲ್ಲಿದ್ದ ಒಂದಿಬ್ಬರು ನಾರ್ಥಿಗಳು ಜೋರಾಗಿ ಮಾತನಾಡಿದ್ದರಿಂದ ಅವರ ಮೇಲೆ ಹಲ್ಲೆಯನ್ನೂ ನಡೆಸಿದ್ದರು.

ಸರಿಯಾಗಿ ಶೋಧಿಸಿದರೆ ಬೆಂಗಳೂರು ಒಂದರಲ್ಲೇ ಆನ್‌ಲೈನ್ ವಂಚನೆಯನ್ನೇ ಕಸುಬಾಗಿಸಿಕೊಂಡ 100ಕ್ಕೂ ಹೆಚ್ಚು ಬೋಗಸ್ ಕಂಪನಿಗಳು ಅಸ್ತಿತ್ವದಲ್ಲಿವೆ. ನೌಕರರು, ಗ್ರಾಹಕರನ್ನು ಯಾಮಾರಿಸುವುದೇ ಅವುಗಳ ಕಾಯಕ. ಇಂತವರ ವಿರುದ್ಧ ದೂರು ದಾಖಲಾದಾಗ ಪೊಲೀಸರು ಸೂಕ್ತ ಕ್ರಮಕೈಗೊಂಡರೆ ಅವುಗಳನ್ನು ತಡೆಗಟ್ಟಬಹುದು. ಇಲ್ಲವಾದಲ್ಲಿ ಇಂತವರು ಹೆಚ್ಚುತ್ತಲೇ ಹೋಗುತ್ತಾರೆ. ಅಂದಹಾಗೆ, ಇಷ್ಟೆಲ್ಲಾ ರಾದಿ ಮಾಡಿಕೊಂಡಾಗಿಯೂ ಸರ್ಕಾರಿ ಪಶುವೈದ್ಯ ಆರ್.ಆರ್.ಗೋಪಾಲ್ ಮತ್ತು ಅವನ ಅಣ್ಣನ ಮಗ ಪುಡಿ ರೌಡಿ ಭರತ್ ಕುಮಾರ್ ಹೊಸ ಹೆಸರಿನಲ್ಲಿ ಮತ್ತೊಂದು ಬೋಗಸ್ ಕಂಪನಿ ತೆರೆಯುವ ತಯಾರಿಯಲ್ಲಿದ್ದಾರಂತೆ.


• ವರದಿಗಾರ



ಖದೀಮ ಭರತ್ ಕುಮಾರ್

ಬಾಡಿಗೆಗೂ ನಾಮ, ಕಂಪ್ಯೂಟರ್‌ಗೂ ಸಾಲ

ಕೋರಮಂಗಲದಲ್ಲಿ ಕಚೇರಿ ನಡೆಯುತ್ತಿದ್ದ ಸಾಲಾಪುರಿಯಾ ಅಸೆಂಟ್ ಬಿಲ್ಡಿಂಗ್‌ಗೂ ಎರಡು ತಿಂಗಳಿಂದ ಬಾಡಿಗೆ ಕಟ್ಟದೆ ವಂಚಿಸಿದ್ದಾರೆ. ಕಟ್ಟಡ ನಿರ್ವಹಣಾ ಮಂಡಳಿ ಇದಕ್ಕೆ ಸಂಬಂಧಿಸಿದಂತೆ ಗೋಪಾಲ್ ಮತ್ತು ಭರತ್ ಇಬ್ಬರಿಗೂ ನೋಟಿಸ್ ಜಾರಿ ಮಾಡಿದೆ. ಅಂದಹಾಗೆ, ಪ್ರತಿಯೊಬ್ಬ ನೌಕರನಿಗೂ ಲ್ಯಾಪ್‌ಟಾಪ್ ನೀಡಿದ್ದರಲ್ಲ, ಅವ್ಯಾವು ಸಂಸ್ಥೆಯ ಸ್ವಂತ ಸ್ವತ್ತುಗಳಲ್ಲ. ಸುಮೋ ಟೆಕ್ನಾಲಜೀಸ್ ಎನ್ನುವ ಏಜೆನ್ಸಿಯಿಂದ 100 ಲ್ಯಾಪ್‌ಟಾಪ್‌ಗಳನ್ನು, ಐವತ್ತಕ್ಕೂ ಹೆಚ್ಚು ಡೆಸ್ಕ್‌ಟಾಪ್‌ಗಳನ್ನು ಬಾಡಿಗೆ ತಂದಿದ್ದರು! ಲ್ಯಾಪ್‌ಟಾಪ್‌ಗಳೆಲ್ಲ ನೌಕರರ ಬಳಿಯೇ ಇದ್ದವು. ಇವರು ಸಂಬಳ ಕೊಡದೆ ಸತಾಯಿಸಲು ಶುರುಮಾಡಿದಾಗ ಲ್ಯಾಪ್‌ಟಾಪ್‌ಗಳನ್ನೇ ಮುಟ್ಟುಗೋಲು ಹಾಕಿಕೊಳ್ಳಲು ನೌಕರರು ಆಲೋಚಿಸಿದ್ದುಂಟು. ಅದೇ ವೇಳೆಗೆ ಸುಮೋ ಟೆಕ್ನಾಲಜಿ ಸಂಸ್ಥೆಯೂ ತನ್ನ ಸರಕುಗಳ ಬಾಡಿಗೆ ಬರದ ಕಾರಣ ಲ್ಯಾಪ್‌ಟಾಪ್, ಕಂಪ್ಯೂಟರ್‌ಗಳನ್ನು ವಾಪಾಸ್ ಮಾಡಿ ಇಲ್ಲದೇ ಕೇಸ್ ಹಾಕ್ತೀವಿ ಅಂತ ಡೈರೆಕ್ಟರ್‌ದ್ವಯರಿಗೆ ನೋಟಿಸ್ ಕಳುಹಿಸಿತ್ತು. ಆಗ ಉಪಾಯ ಮಾಡಿದ ಚಿಕ್ಕಪ್ಪ-ಮಗ, ತನ್ನ ನೌಕರರನ್ನೆಲ್ಲಾ ಕರೆಸಿ 'ಮೂರು ತಿಂಗಳ ಸಂಬಳ ಒಟ್ಟಿಗೇ ಕೊಡಲಿಕ್ಕೆ ಕಷ್ಟವಾಗುತ್ತೆ, ಹಾಗಾಗಿ ಒಂದು ತಿಂಗಳ ಸಂಬಳವನ್ನು ಈಗಲೇ ಕೊಡ್ತೀವಿ, ನಿಮ್ಮಲ್ಲಿರುವ ಸಂಸ್ಥೆಯ ಲ್ಯಾಪ್‌ಟಾಪ್‌ಗಳನ್ನೆಲ್ಲ ವಾಪಾಸ್ ಮಾಡಿ, ಮುಂದಿನ ತಿಂಗಳ ವೇಳೆಗೆ ನಿಮ್ಮೆಲ್ಲ ಸಂಬಳವನ್ನು ಕ್ಲಿಯರ್ ಮಾಡ್ತೀವಿ' ಅಂತ ಟೋಪಿ ಹಚ್ಚಿ ಲ್ಯಾಪ್‌ಟಾಪ್ ಮರಳಿಸಿ, ಸುಮೋ ಸಂಸ್ಥೆಗೆ ಅವುಗಳನ್ನೆಲ್ಲ ವಾಪಾಸ್ ಮಾಡಿ ನಿಶ್ಚಿಂತರಾದ ವಂಚಕರು ಈಗ ಬಾಕಿ ಸಂಬಳ ಕೊಡದೆ ಹಳೇ ಚಾಳಿ ಶುರು ಮಾಡಿದ್ದಾರೆ. ಪಡೆದು ಒಂದು ತಿಂಗಳ ಸಂಬಳ ಕೊಟ್ಟು ಕಳುಹಿಸಿದ್ದರು.


ಪರಪ್ಪನ ಅಗ್ರಹಾರ ಜೈಲು-ಸೈಕೋ ಪರಾರಿಯಾದ ಗೋಡೆ

ಜೈಶಂಕರ್ ಪರಾರಿ
ಜೈಲು ವ್ಯವಸ್ಥೆಯೇ ಸೈಕೋ!

ಕರ್ನಾಟಕದ ಅಷ್ಟೂ ಬಂದೀಖಾನೆಗಳ ಪೈಕಿ ಭದ್ರಕೋಟೆಯಂತಿದ್ದ ಪರಪ್ಪನ ಅಗ್ರಹಾರ ಜೈಲನ್ನು ಯಃಕಶ್ಚಿತ್ ಸೈಕೋ ಒಬ್ಬ ಭೇದಿಸಿದ್ದಾನೆ.

ಹಾಗಂಥ ಮಿಕ್ಕ ಜೈಲುಗಳೆಲ್ಲಾ ಸುಭದ್ರ ಎಂದಾಗಲಿ, ಅಲ್ಲಿ ಸರ್ಪಗಾವಲಿನಂಥ ಭದ್ರತೆ ಇದೆಯೆಂದಾಗಲಿ, ಕರ್ನಾಟಕದ ಬಂಧೀಖಾನೆ ಇಲಾಖೆ ಅಹೋರಾತ್ರಿ ಇಂಥ ಕ್ರಿಮಿನಲ್‌ಗಳನ್ನು ಹಿಡಿದಿಟ್ಟು ಕ್ರಮ ವಹಿಸುತ್ತಿದೆ ಎಂದಾಗಲಿ ಅರ್ಥವೆ?

ಕಳೆದ ಕೆಲದಿನಗಳ ಘಟನೆಗಳೇ ಇದಕ್ಕೆ ಉತ್ತರದಂತಿವೆ. ಮೈಸೂರು ಜೈಲಲ್ಲಿ ಬೆತ್ತನಗೆರೆ ಶಂಕ್ರನ ಮೇಲೆ ಟಿಬೆಟ್ ಬಾಲಾಜಿ ಎಂಬ ಪುಡಿ ರೌಡಿಯೊಬ್ಬ ರಿವಾಲ್ವರ್‌ನಿಂದ ಗುಂಡು ಹಾರಿಸುತ್ತಾನೆ. ಬೆಳಗಾವಿಯ ಹಿಂಡಲಗಾ ಜೈಲಲ್ಲಿ ಬಿಲ್ಡರ್ ಸುಬ್ಬರಾಜು ಹಂತಕ ಬಚಖಾನನ ಮೇಲೆ ಅರಸಯ್ಯನ ಗ್ಯಾಂಗ್ ದಾಳಿ ನಡೆಸುತ್ತದೆ. ಪರಪ್ಪನ ಅಗ್ರಹಾರ ಜೈಲಲ್ಲೇ ವಿರೋಧಿ ಗ್ಯಾಂಗ್‌ಗಳ ಮಧ್ಯೆ ಮಾರಾಮಾರಿಯಾಗಿದೆ. ಗಾಂಜಾ, ಚರಸ್ ಮಾತ್ರವಲ್ಲದೆ ಡಜನ್ನುಗಟ್ಟಲೆ ಮೊಬೈಲು ಫೋನುಗಳು ವಿವಿಧ ಜೈಲುಗಳಲ್ಲಿ ಪತ್ತೆಯಾಗುತ್ತವೆ. ಜೈಲಧಿಕಾರಿಗಳ ಕಿರುಕುಳ ತಾಳಲಾರದೆ ಅಬ್ಬಾಯಿಯಂಥ ಜೈಲು ಅಧಿಕಾರಿಯೇ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

ಈಗ ಸೈಕೋ ಜೈಶಂಕರ್ ಪರಾರಿಯಾಗಿರುವುದು ಇಡೀ ಜೈಲು ವ್ಯವಸ್ಥೆಯ ಪ್ರತ್ಯೇಕ ಲೋಪದಂತೆ ಕಾಣಬಹುದು ನಿಜ, ಆದರೆ ಇದೇ ಮೊದಲಾ? ಅಥವಾ ಇಲ್ಲಿಗೆ ನಿಲ್ಲುತ್ತಾ?

ಸೈಕೋ ಜೈಶಂಕರ್‌ನನ್ನು ತೆಲಗಿ, ಶಿವಾಜಿನಗರದ ಡಾನ್ ತನ್ವೀರ್ ಥರದ ಅಪಾಯಕಾರಿ ಬಂಧಿಗಳನ್ನು ಕೂಡಿಟ್ಟಿದ್ದ ಆಸ್ಪತ್ರೆ ಬ್ಲಾಕಿನಲ್ಲಿ, ಅಲ್ಲಿಗೆ ಎಂಥಾ ಸರ್ಪಗಾವಲನ್ನು ಜೈಶಂಕರ್ ಭೇದಿಸಿದ್ದಾನೆಂಬುದು ಎಂಥವರಿಗೂ ಅರ್ಥವಾಗಬೇಕು. ಆದರೆ ಪರಪ್ಪನ ಅಗ್ರಹಾರ ಜೈಲು ನಿಜಕ್ಕೂ ಸರ್ಪಗಾವಲಿನಲ್ಲಿತ್ತೆ? ಆ ಮಟ್ಟದ ಭದ್ರತಾ ವ್ಯವಸ್ಥೆ ಮತ್ತು ಸುವ್ಯವಸ್ಥೆಯಿದ್ದರೆ ಸೈಕೋ ಜೈಶಂಕರ್ 30 ಅಡಿಯ ಗೋಡೆ ಹಾರಿ ಹೇಗೆ ಪರಾರಿಯಾಗಲು ಸಾಧ್ಯ?

ವಾಸ್ತವವೇನೆಂದರೆ ಪರಪ್ಪನ ಅಗ್ರಹಾರ ಕಾರಾಗೃಹವೆಂಬುದು ಕಾರಾಗೃಹವಾಗಿ ಇದ್ದಿದ್ದೇ ಕಮ್ಮಿ. ಇದು ಕೇವಲ ಪರಪ್ಪನ ಅಗ್ರಹಾರ ಜೈಲಿನ ಕತೆಯಷ್ಟೇ ಅಲ್ಲ, ಬೆಳಗಾವಿಯ ಹಿಂಡಲಗಾ, ಮೈಸೂರು, ಬಿಜಾಪುರ, ಬಳ್ಳಾರಿ, ಗುಲ್ಬರ್ಗಾ ಸೇರಿದಂತೆ ಕರ್ನಾಟಕದ ನೂರಾ ಇಪ್ಪತ್ತು ಜೈಲುಗಳ ಸದ್ಯದ ಪರಿಸ್ಥಿತಿಯನ್ನೊಮ್ಮೆ ಅವಲೋಕಿಸಿದ ಯಾರಿಗಾದರೂ ಕರ್ನಾಟಕದ ಜೈಲುಗಳ ದುರ್ಗತಿ ಅರ್ಥವಾಗಲೇಬೇಕು. ಗಗನ್‌ದೀಪ್ ಎಂಬ ಐಪಿಎಸ್ ಅಧಿಕಾರಿಯನ್ನು ಬಂದೀಖಾನೆ ಇಲಾಖೆಯ ಎಡಿಜಿಪಿಯನ್ನಾಗಿ ಹಿಂದಿದ್ದ ಬಿಜೆಪಿ ಸರ್ಕಾರ ನೇಮಿಸಿತ್ತು, ಗಗನ್‌ದೀಪ್ ಬಿಟ್ಟರೆ ಇಡೀ ಜೈಲು ವ್ಯವಸ್ಥೆಯ ಆಡಳಿತ, ನಿರ್ವಹಣೆ ಇತ್ಯಾದಿಗಳನ್ನು ನಿಭಾಯಿಸುವುದು ಡಿಐಜಿ ರಾಜಾ ಎಂಬಾತ. ಈತನನ್ನು ಬಿಟ್ಟರೆ ಮತ್ತೊಬ್ಬ ಡಿಐಜಿ ವಿಶ್ವನಾಥಯ್ಯ, ಸೇರಿದಂತೆ ಆಯಾ ಜೈಲುಗಳ ಸೂಪರಿಂಟೆಂಡೆಂಟ್‌ಗಳು, ಜೈಲರ್‌ಗಳು; ಹೀಗೆ ನೂರಕ್ಕೂ ಅಧಿಕ ಜೈಲುಗಳನ್ನು ಕಾಯಲೆಂದೇ ಬಂಧೀಖಾನೆ ಇಲಾಖೆಯಿದೆ. ಬಿಜೆಪಿ ಅಧಿಕಾರದಲ್ಲಿದ್ದಾಗ ಅದನ್ನು ಗೃಹಖಾತೆಯಿಂದ ಬೇರ್ಪಡಿಸಿ ಸಮಾಜ ಕಲ್ಯಾಣ ಮಂತ್ರಿ ನಾರಾಯಣ ಸ್ವಾಮಿಯವರ ಸುಪರ್ದಿಗೆ ವಹಿಸಲಾಗಿತ್ತು, ಈಗದು ಗೃಹ ಸಚಿವ ಜಾರ್ಜ್ ಅಧೀನಕ್ಕೊಳಪಟ್ಟಿದೆ.

ಕಾಂಗ್ರೆಸ್ ಸರ್ಕಾರಕ್ಕಾಗಲಿ, ಗೃಹಮಂತ್ರಿ ಜಾರ್ಜ್‌ಗಾಗಲಿ ಬಿಜೆಪಿ ಅಧಿಕಾರಾವಧಿಯಲ್ಲಿ ಕುಲಗೆಟ್ಟ ಜೈಲು ವ್ಯವಸ್ಥೆಯ ಬಗ್ಗೆ ಪರಿವೆಯಿದ್ದಿದ್ದರೆ ಸೈಕೋ ಜೈಶಂಕರ್ ಪರಾರಿಯಾಗುವುದು ಸಾಧ್ಯವೇ ಇರಲಿಲ್ಲ.


ಕಳೆದ 10 ವರ್ಷಗಳಿಂದ ಬಂದೀಖಾನೆ ಇಲಾಖೆಯ ಡಿಐಜಿಯಾಗಿರುವ ವಿ.ಎಸ್. ರಾಜಾನೇ ಸದ್ಯ ಪರಪ್ಪನ ಅಗ್ರಹಾರ ಜೈಲಿಗೂ ಡಿಐಜಿ. ಇದಲ್ಲದೆ ಎಡಿಜಿಪಿ ಗಗನ್‌ದೀಪ್ ಹೊರತಾಗಿ ಇಡೀ ಬಂದೀಖಾನೆ ಇಲಾಖೆಯ ವರ್ಗಾವರ್ಗಿ, ಜೈಲು ಕಟ್ಟಡಗಳ ಕಾಮಗಾರಿ, ಆಯಾ ಜೈಲುಗಳ ಖರೀದಿ, ಕೈದಿಗಳ ವರ್ಗಾವರ್ಗಿ, ಸಜಾ ಕೈದಿಗಳನ್ನು ವಾರ್ಷಿಕ ರಜೆ ಮೇಲೆ ಕಳಿಸುವ ಪೆರೋಲ್ ಇತ್ಯಾದಿ ಪ್ರತಿಯೊಂದನ್ನೂ ನಿರ್ಧರಿಸುವವನು ಡಿಐಜಿ ರಾಜಾ.

ಖತರ್‌ನಾಕ್ ರಾಜಾ

ಹಿಂದೆ ಮಾಲಾಪೂರ್, ಜಯರಾಮಯ್ಯ ಮುಂತಾದ ನಿಷ್ಠುರಿ ಅಧಿಕಾರಿಗಳಿದ್ದಾಗ ಜೈಲು ವ್ಯವಸ್ಥೆ ಇಷ್ಟೊಂದು ಎಕ್ಕುಟ್ಟಿರಲಿಲ್ಲ, ಈಗ ಹಾಗಲ್ಲ. ಕರ್ನಾಟಕದ ಯಾವುದೇ


ಎಡಿಜಿಪಿ ಗಗನ್‌ದೀಪ್


ಜೈಲು ಡಿಐಜಿ ರಾಜಾ


ಡಿಐಜಿ ವಿಶ್ವನಾಥಯ್ಯ

ಬಂದೀಖಾನೆಗೆ ಹೋಗಿ, ಏನೇ ಆಗಬೇಕೆಂದರೂ ಅದಕ್ಕೊಂದು ಐನೂರರಿಂದ ಸಾವಿರ ರೂಪಾಯಿ ಲಂಚ ಕಕ್ಕಲೇಬೇಕು. ಇದು ತಾಲ್ಲೂಕು ಮಟ್ಟದ ಸಣ್ಣಪುಟ್ಟ ಜೈಲುಗಳ ಪರಿಸ್ಥಿತಿ. ಜಿಲ್ಲಾ ಜೈಲುಗಳು ಮತ್ತು ರಾಜ್ಯಮಟ್ಟದ ಕೇಂದ್ರ ಕಾರಾಗೃಹಗಳದ್ದೇ ಬೇರೆ ರೇಟಿದೆ. ಸದ್ಯ ಪರಪ್ಪನ ಅಗ್ರಹಾರ ಜೈಲಿಗೆ ಮುಖ್ಯ ಅಧೀಕ್ಷಕ ಅಂದರೆ ಚೀಫ್ ಸೂಪರಿಂಟೆಂಡೆಂಟ್ (ಸಿಎಸ್) ಆಗಿರುವವನು ವೀರೇಂದ್ರ ಸಿಂಹ.

ಈತ ಜಾತಿಯಲ್ಲಿ ಬೇಡ ನಾಯಕ ಮತ್ತು ಬಳ್ಳಾರಿಯ ಗಣಿ ಖದೀಮ ಶ್ರೀರಾಮುಲುವಿನ ಪಕ್ಕಾ ಛೇಲಾ. ಈತನನ್ನೂ ಮೀರಿ ಪರಪ್ಪನ ಅಗ್ರಹಾರ ಜೈಲನ್ನೋ ಸಂಭಾಳಿಸಲೆಂದೇ ಡಿಐಜಿ ಹುದ್ದೆಯೊಂದಿದೆ. ಇದೇ ಹುದ್ದೆಯಲ್ಲಿದ್ದ ಅಬ್ಬಾಯಿ ಆತ್ಮಹತ್ಯೆ ಮಾಡಿಕೊಂಡ ಮೇಲೆ ಲಕ್ಷ್ಮೀನಾರಾಯಣ ಆ ಹುದ್ದೆಯಲ್ಲಿದ್ದು ಇತ್ತೀಚೆಗಷ್ಟೇ ನಿವೃತ್ತರಾಗಿದ್ದಾರೆ. ತದನಂತರ ಆ ಹುದ್ದೆಗೆ ವಿಶ್ವನಾಥಯ್ಯನವರನ್ನು ಸರ್ಕಾರ ವರ್ಗಾ ಮಾಡಿತ್ತು, ಆದರೆ ವಿಶ್ವನಾಥಯ್ಯ ಆ ಹುದ್ದೆಗೆ ಬರುವುದು ಜೈಲಿನ ಹಾಲಿ ಚೀಫ್ ಸೂಪರಿಂಟೆಂಡೆಂಟ್ ವೀರೇಂದ್ರ ಸಿಂಹನಿಗೂ ಇಷ್ಟವಿಲ್ಲ, ಡಿಐಜಿ ಅಡ್ಮಿನ್ ರಾಜಾನಿಗೂ ಇಷ್ಟವಿಲ್ಲ.

ವೀರೇಂದ್ರ ಸಿಂಹ ಸೇರಿದಂತೆ ಡಿಐಜಿ ರಾಜಾ ಮುಂತಾದವರೆಲ್ಲ ಜಾತಿಯಲ್ಲಿ ತಾವು ವಾಲ್ಮೀಕಿ-ಬೇಡರೆಂದು ಮಾಜಿ ಮಂತ್ರಿ ಶ್ರೀರಾಮುಲು, ಶಿವನಗೌಡ ನಾಯ್ಕ, ಬಾಲಚಂದ್ರ ಜಾರಕಿಹೊಳಿ ಮತ್ತು ಹಾಲಿ ಅಬಕಾರಿ ಮಂತ್ರಿ ಸತೀಶ್ ಜಾರಕಿಹೊಳಿಯವರ ಅನುಯಾಯಿಗಳೆಂದು ಹಾವಳಿಯಿಡುತ್ತಾರೆ. ಸಹಜವಾಗೇ ಜಾತಿವ್ಯಾಮೋಹದಿಂದ ಬಿಜೆಪಿ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಬಾಲಚಂದ್ರ ಜಾರಕಿಹೊಳಿ ಈ ಗುಂಪಿನ ಬೆಂಬಲಕ್ಕೆ ನಿಂತಿದ್ದಾರೆ. ಇದರ ಫಲವಾಗೇ ಪರಪ್ಪನ ಅಗ್ರಹಾರ ಜೈಲಿಗೆ ಡಿಐಜಿಯಾಗಬೇಕಿದ್ದ ವಿಶ್ವನಾಥಯ್ಯರನ್ನು ರದ್ದು ಮಾಡಿ ಅಲ್ಲಿಗೆ ರಾಜಾರನ್ನು ನೇಮಿಸಲಾಯ್ತು.

ಗಾಂಜಾ-ಇಸ್ಪೀಟು

ಹಾಗೇ ಕೇಂದ್ರ ಕಚೇರಿಯಲ್ಲಿದ್ದ ರಾಜಾರನ್ನು ಪರಪ್ಪನ ಅಗ್ರಹಾರ ಜೈಲಿನ ಡಿಐಜಿಯನ್ನಾಗಿ ಮಾಡಿದ ಮೇಲಾದರೂ ವಿಶ್ವನಾಥಯ್ಯಗೆ ಕೇಂದ್ರ ಕಚೇರಿಯ ಉಸ್ತುವಾರಿ ನೀಡಬೇಕಾಗಿತ್ತು, ಅಥವಾ ವಿಶ್ವನಾಥಯ್ಯ ಮೈಸೂರಿನಲ್ಲಿದ್ದ ಹುದ್ದೆಗೆ ರಾಜಾರನ್ನು ಹಾಕಬೇಕಿತ್ತು. ಹಾಗಾಗಲಿಲ್ಲ, ರಾಜಾರನ್ನು ಪರಪ್ಪನ ಅಗ್ರಹಾರ ಜೈಲಿನ ಡಿಐಜಿ ಮಾಡಿದ್ದೂ ಅಲ್ಲದೆ ಹೆಚ್ಚುವರಿಯಾಗಿ ಕೇಂದ್ರ ಕಚೇರಿಯ ಡಿಐಜಿ ಅಡ್ಮಿನ್ ಹುದ್ದೆಯನ್ನೂ ನೀಡಲಾಯಿತು. ಅಲ್ಲಿಗೆ ಡಿಐಜಿ ರಾಜಾ ಇಡೀ ಬಂದೀಖಾನೆ ಇಲಾಖೆಗೆ ಸರ್ವಾಧಿಕಾರಿಯಾದಂತಾಯ್ತು.

ಒಂದೆಡೆ ಪರಪ್ಪನ ಅಗ್ರಹಾರ ಜೈಲಿನ ಉಸ್ತುವಾರಿ, ಇನ್ನೊಂದೆಡೆ ಇಡೀ ಬಂದೀಖಾನೆ ಇಲಾಖೆಯ ವರ್ಗಾವರ್ಗಿ, ಖರೀದಿ, ಕಾಮಗಾರಿಗಳ ಹೊಣೆ; ಹೀಗೆ ಬಂದೀಖಾನೆ ಇಲಾಖೆಯಲ್ಲಿದ್ದ ನಿಷ್ಠಾವಂತರು, ದಕ್ಷರು, ಪ್ರಾಮಾಣಿಕರೆಲ್ಲರೂ ಮೂಲೆಗುಂಪಾದಂತಾಯ್ತು. ಎಡಿಜಿಪಿಯಾಗಿ ಬಂದ ಗಗನ್‌ದೀಪ್ ಹುಟ್ಟಾ ಹುಂಬ ಮತ್ತು ದರ್ಪಿಷ್ಠ. ಸದಾಕಾಲ ಯಾರಾದರೂ ತನ್ನನ್ನು ಹೊಗಳುತ್ತಿರಬೇಕು. ತನ್ನ ಕುಟುಂಬದ ಅನೇಕರು ಮಿಲಿಟರಿಯ ಹಿರಿಯ ಅಧಿಕಾರಿಗಳೆಂದೂ ತನ್ನ ತಾತ ಜೈಪುರದ ಮಹಾರಾಜನ ಅಸ್ಥಾನದಲ್ಲಿ ಇನ್ನೇನೋ ಆಗಿದ್ದನೆಂದೂ ಆಗಾಗ ಬಾಡಿಗೆಗೆ ತಂದ ಕುದುರೆಯೇರಿ ಬರುವ ವಿಚಿತ್ರ ಖಯಾಲಿ ಗಗನ್‌ದೀಪ್‌ಗಿದೆ.

ಇದನ್ನು ಚೆನ್ನಾಗಿ ಅರ್ಥಮಾಡಿಕೊಂಡ ರಾಜಾ ವಿನಾಕಾರಣ ಗಗನ್‌ದೀಪ್‌ರನ್ನು ಹೊಗಳಿ ಅಟ್ಟಕ್ಕೇರಿಸುತ್ತಾನೆ. ಯಾರ್‍ಯಾರನ್ನು ಯಾವ್ಯಾವ ಜೈಲಿನ ಆಯಕಟ್ಟಿನ ಹುದ್ದೆಗೆ ತರಬೇಕು, ಯಾರ್‍ಯಾರನ್ನು ಎಲ್ಲಿಂದೆಲ್ಲಿಗೆ ಎತ್ತಂಗಡಿ ಮಾಡಬೇಕು ಇತ್ಯಾದಿಗಳನ್ನೆಲ್ಲ ಈತನೇ ನಿರ್ಧರಿಸುತ್ತಾನೆ. ಈತನಿಗೆ ಬೆಂಬಲವಾಗಿ 2008 ರ ಬ್ಯಾಚಿನ ಕೆಲ ಖತರ್‌ನಾಕ್ ವಾರ್ಡರ್‌ಗಳಿದ್ದಾರೆ. ಈ ಹಿಂದೆ ಲಕ್ಷ್ಮೀನಾರಾಯಣ್ ಪರಪ್ಪನ ಅಗ್ರಹಾರ ಜೈಲಿನ ಮುಖ್ಯ ಸೂಪರಿಂಟೆಂಡೆಂಟ್ ಆಗಿದ್ದಾಗ ನಡೆಯುತ್ತಿದ್ದ ಅಕ್ರಮ ದಂಧೆಗಳಿಗೆ ಕಡಿವಾಣ ಹಾಕಿದ್ದರು.

ಆದರೆ ಪರಪ್ಪನ ಅಗ್ರಹಾರ ಜೈಲಿನ ಸಿಬ್ಬಂದಿಗಳ ಪೈಕಿ ಒಂದು ಗುಂಪು ಲಕ್ಷ್ಮೀನಾರಾಯಣ್ ವಿರುದ್ಧವೇ ತಿರುಗಿಬಿದ್ದು ಪ್ರತಿಭಟನೆಗಿಳಿಯಿತು. ಹಿರಿಯ ಅಧಿಕಾರಿ ಲಕ್ಷ್ಮೀನಾರಾಯಣ್ ತಮಗೆ ವಿಪರೀತ ಕಿರುಕುಳ ನೀಡುತ್ತಿದ್ದಾರೆಂದು ಪ್ರತಿಭಟನೆಗಿಳಿದ ಆ ಕೆಳದರ್ಜೆಯ ಅಧಿಕಾರಿಗಳನ್ನೆಲ್ಲ ಎತ್ತಿಕಟ್ಟಿದ್ದೇ ಡಿಐಜಿ ರಾಜಾ.

ವಾಲೇ ಶಂಕ್ರ

ಕಾರಣವಿಷ್ಟೆ-ಇವತ್ತು ಪರಪ್ಪನ ಅಗ್ರಹಾರ ಜೈಲಿನಲ್ಲಿ ದೊಡ್ಡಮಟ್ಟದ ಇಸ್ಪೀಟ್ ದಂಧೆಯಿದೆ. ಅಸಹ್ಯವೆನ್ನುವಷ್ಟು ಗಾಂಜಾ, ಚರಸ್‌ಗಳ ವಹಿವಾಟು ನಡೆಯುತ್ತದೆ. ಇದಲ್ಲದೆ ಕೈದಿಗಳ ಮಧ್ಯೆಯೇ ಮೀಟರ್ ಬಡ್ಡಿ ದಂಧೆ, ಲಿಕ್ಕರ್ ದಂಧೆ, ಸುಪಾರಿ ಇತ್ಯಾದಿ ಜಾಲಗಳಿವೆ. ಇಂಥ ಅನೇಕ ದಂಧೆಗಳ ಹಿಂದಿರುವುದೇ ಡಿಐಜಿ ರಾಜಾ.

ಪರಪ್ಪನ ಅಗ್ರಹಾರ ಜೈಲಲ್ಲಿ ದಿನದ ಯಾವ ಗಳಿಗೆಯಲ್ಲೇ ಯಾವ ಕೈದಿಗಾದರೂ ಗಾಂಜಾ, ಅಫೀಮು ಬೇಕೆಂದರೆ ಅದನ್ನು ಒದಗಿಸುವವರು ಸಜಾ ಕೈದಿಗಳಾದ ಶಾಂತಿನಗರದ ರಮೇಶ ಮತ್ತು ಆತನ ತಮ್ಮ ಛಲ. ಜೈಲಿನ ಗಾಂಜಾ ದೊರೆಗಳೆಂದೇ ಕುಖ್ಯಾತರಾದ ಇವರಿಬ್ಬರನ್ನೂ ಇದೇ ಜೈಲಿನ ಮಾದೇವನಾಯ್ಕ್ ಎಂಬ ಜೈಲರ್ ಪೋಷಿಸಿಕೊಂಡೇ ಬಂದಿದ್ದಾನೆ. ಈ ಜೈಲರ್ ಮಾದೇವನಾಯ್ಕ್‌ನಿಗೆ ಕೇಂದ್ರ ಕಚೇರಿಯ ಗಾಡ್‌ಫಾದರ್ ಬೇರೆ ಯಾರೂ ಅಲ್ಲ ಡಿಐಜಿ ರಾಜಾ.

ಇದೇರೀತಿ ಜೈಲಿನಲ್ಲಿ ಇಸ್ಪೀಟು ದಂಧೆ ನಡೆಸುವವನು ಸಜಾ ಕೈದಿ ವಾಲೇ ಶಂಕ್ರ. ಈತನಿಗೆ ನೇರವಾಗಿ ಡಿಐಜಿ ರಾಜಾ ಜೊತೆ ಲಿಂಕಿದೆ. ಜೈಲು ಬಂದಿಗಳ ಪೈಕಿ ಯಾರಿಗೆ ಸಾಲ ಬೇಕೆಂದರೂ ದಿನವೊಂದಕ್ಕೆ ಐದು ಪರ್ಸೆಂಟಿಗೆ ಬಡ್ಡಿಗೆ ಕೊಡುವವನು ಖತರ್‌ನಾಕ್ ಪಾತಕಿ ಆಟೋ ರಾಮ. ಈತನಿಗೆ ಜೈಲರ್ ಮಾಳಿ ಮತ್ತು ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ತಿಮ್ಮಯ್ಯನ ಕುಮ್ಮಕ್ಕಿದೆಯಂತೆ.

ಸದ್ಯ ಪರಪ್ಪನ ಅಗ್ರಹಾರ ಜೈಲಿನ ಸರ್ಚ್ ಜೈಲರ್


ಸೈಕೋ ಜೈಶಂಕರ್

ಮಾದೇವನಾಯ್ಕ್, ಜೈಲರ್‌ಗಳಾದ ಮಹಾಂತೇಶಪ್ಪ ಪ್ರ ಅಸಿಸ್ಟೆಂಟ್ ಸೂಪರಿಂಟೆಂಡೆಂಡ್ ತಿಮ್ಮಯ್ಯ ಮ ಇತ್ಯಾದಿಗಳೆಲ್ಲರೂ ಡಿಐಜಿ ರಾಜಾನ ಛೇಲಾಗಳೇ. ಕೆಲ ಸೇರಿದಾಗಿನಿಂದಲೂ ಪರಪ್ಪನ ಅಗ್ರಹಾರ ಜೈಲು ಬಿ ಕದಲದೆ ಪ್ರತಿನಿತ್ಯ ಕೈದಿಗಳ ಸಂದರ್ಶನಕ್ಕೆಂದು ಬರು ಸಂಬಂಧಿಕರಿಂದ ದುಡ್ಡು ಕೀಳುವುದನ್ನೇ ಕಾಯ ಮಾಡಿಕೊಂಡ ಮಾಳಿಯ ಪ್ರತಿನಿತ್ಯದ ಸಂದರ್ಶನ ಖಮಾಯಿಯೇ 3 -ರಿಂದ 5 ಸಾವಿರ. ತಿಂಗಳಿಗೆ ಇ ಲಕ್ಷದ ಮೇಲಿನ ಬಟ್ಟೀ ಕಾಸು. ಇದರಲ್ಲಿ ಡಿಐಜಿ ರಾಜಾ ಸಿಂಹಪಾಲು ಸಂದಾಯವಾಗುತ್ತದೆ.

ಅರಾಜಕ ಸ್ಥಿತಿ

ಪರಪ್ಪನ ಅಗ್ರಹಾರ ಜೈಲಿನಲ್ಲಿ ಏನೆಲ್ಲಾ ಅನ್ಯಾ ಅನಾಚಾರಗಳಿವೆಯೋ ಅವೆಲ್ಲಕ್ಕೂ ಪ್ರತ್ಯಕ್ಷ ಅಥ ಪರೋಕ್ಷವಾಗಿ ಡಿಐಜಿ ರಾಜಾನೇ ಕಾರಣಕರ್ತ ಮ ಗಾಡ್‌ಫಾದರ್. ಯಾರೇ ನಿಷ್ಠುರಿ ಸೂಪರಿಂಟೆಂಡೆಂ ಇಂಥ ಅಕ್ರಮ ದಂಧೆಗಳನ್ನು ತಡೆಯ ಹೊರಟರೆ ಒಂದೆ ಆತನ ಕೈಕೆಳಗಿನ ಸಿಬ್ಬಂದಿಯನ್ನೇ ಛೂಬಿಟ್ಟು ರಾ ಗಲಾಟೆ ಮಾಡಿಸುತ್ತಾನೆ ಅಥವಾ ತನಗೆ ಆ ಕಾಲದಿಂದ ವಿಧೇಯರಾದ ಸಜಾ ಕೈದಿಗಳನ್ನು ಎತ್ತಿಕಟ್ಟಿ ಮು ನಡೆಸುತ್ತಾನೆ. ಏಕೆಂದರೆ ಯಾರೇ ಸಜಾ ಕೈದಿಗೆ ವಾ ರಜೆ ಮೇಲೆ ಕಳುಹಿಸಬೇಕೋ ಬೇಡವೋ, ಎಷ್ಟು ಪೆರೋಲ್ ಮೇಲೆ ಬಿಡಬೇಕು ಇತ್ಯಾದಿಗಳನ ನಿರ್ಧರಿಸುವುದೇ ಡಿಐಜಿ ರಾಜಾ.

ಕೈದಿಗಳು ಸಹಜವಾಗೇ ಆತನಿಗೆ ನಿಯತ್ತಾಗಿರುತ ಹಾಗೊಮ್ಮೆ ಜೈಲು ಸೂಪರಿಂಟೆಂಡೆಂಟ್ ಇಂಥಾ ಜೈ ಗಾಂಜಾ ದಂಧೆಯ ಹಿಂದಿದ್ದಾನೆ, ಇಂಥಾ ವಾಡ ಇಸ್ಪೀಟು ನಡೆಸುತ್ತಾನೆಂದು ಹೆಡ್ಡಾಫೀಸಿಗೆ ದೂ ಕೊಟ್ಟನೆಂದರೆ ಕೊಟ್ಟ ದೂರಿಗೆ ನಯಾಪೈಸೆ ಕಿಮ್ಮತ್ತಿಲ್ಲದಂತೆ ರಾಜಾ ಕೈಚಳಕ ಮೆರೆಯುತ್ತಾನೆ. ಜೈ ಸಿಬ್ಬಂದಿಗೆ ಮುಖ್ಯ ಅಧೀಕ್ಷಕ ವೀರೇಂದ್ರ ಸಿ ಮುಖ್ಯಸ್ಥನೋ ಅಥವಾ ಡಿಐಜಿ ರಾಜಾ ಮುಖ್ಯಸ್ಥ ಎಂಬುದೇ ಗೊಂದಲವಾಗಿ ಯಾರ ಮಾತನ್ನು ಕೇಳಬೆ ಯಾರ ಮಾತಿಗೆ ತಲೆ ಕೊಡಬಾರದು ಎಂಬ ಗೊಂದಲಮಯವಾಗಿದೆ. ಪ್ರತಿಯೊಬ್ಬರಿಗೂ ಎಲ್ಲೆಲ್ಲಿ ಲಂಚ ಹುಟ್ಟುತ್ತದೆಯೆಂಬ ದುರಾಶೆ.

ಸಂಜೆ 6 ಕ್ಕೆ ಜೈಲಿನ ಎಲ್ಲಾ ಬ್ಯಾರಕ್‌ಗಳನ್ನು ಲ ಮಾಡಬೇಕೆಂಬುದು ನಿಯಮವಾದರೂ ರಾತ್ರಿ ಗಂಟೆಯಾದರೂ ಲಾಕ್ ಮಾಡುವುದಿಲ್ಲ, ಏಕೆಂ ಕ್ರಿಮಿನಲ್‌ಗಳ ರಾತ್ರಿ ಪಾರ್ಟಿಗೆ ಅನುಕೂಲವಾಗಬ ಮತ್ತು ಇಸ್ಪೀಟ್ ಖಮಾಯಿಗೂ ಅವಕಾಶವಾಗಬೆ ಪರಿಸ್ಥಿತಿಯೇ ಹೀಗಿರುವಾಗ ಸೈಕೋ ಶಂಕರ್‌ನ ಮನೋವಿಕೃತರಿಗೂ ಪರಾರಿಯಾಗುವ ಐಡಿಯಾ ವ ತಾಕತ್ತು ಬರದಿರುತ್ತಾ?

ವಿಪರ್ಯಾಸವೆಂದರೆ ಘಟನೆಗೆ ಸಂಬಂಧವೇ ಇ ಸಿ.ಸಿ. ಮಠ್‌ರಂಥ ಮುಗ್ಧ ಜೈಲಧಿಕಾರಿಗಳನ್ನು ಸೈ ಶಂಕರ್ ಪರಾರಿಗೆ ಹೊಣೆ ಮಾಡಿ ಸರ್ಕಾರ ಅಮಾ ಮಾಡಿದೆ. ಅಮಾನತ್ತಾದ 11 ಮಂದಿಯ ಬಹುತೇಕರೆಲ್ಲ ಮುಗ್ಧರೆ. ಅತೀ ಮುಖ್ಯ ಅಮಾನತ್ತಾಗಬೇಕಿದ್ದವನು ಸರ್ಚ್ ಜೈಲರ್ ಮಾದೇವನಾ ಯಾರ ಬಳಿ ಮೊಬೈಲಿದ್ದರೂ ಅದನ್ನು ಪತ್ತೆ ವಶಪಡಿಸಿಕೊಳ್ಳುವ ಹೊಣೆಯಿದ್ದ ಮಾದೇವನಾಯ ಡಿಐಜಿ ರಾಜಾನ ಶ್ರೀರಕ್ಷೆ. ಎಲ್ಲಕ್ಕೂ ಮಿಗಿಲಾಗಿ ವ್ಯವಸ್ಥೆಯ ಕ್ಯಾನ್ಸರ್ ಗಡ್ಡೆಯಂತಿರುವ ಡಿಐಜಿ ರಾಜಾ ಅಮಾನತ್ತು ಮಾಡದೆ ಕಾಂಜಿಪಿಂಜಿ ಜೈಲರ್‌ಗಳನ್ನು ಏನು ಪ್ರಯೋಜನ?

ರೋಗದ ಗೆಡ್ಡೆಯನ್ನು ಕತ್ತರಿಸಿ ಎಸೆಯದೆ ಗಾ ಮುಲಾಮು ಹಚ್ಚಿ ಜೈಲು ಸುಧಾರಿಸುವುದುಂಟೆ?

ಡಿಐಜಿ ರಾಜಾನ ಕೈ ಆಪಾಟ ಉದ್ದವೆ?


● ರಾ

ೀ ಮೇಯರ್ ವೆಂಕಟೇಶ್‌ಮೂರ್ತಿ ನಿರ್ಗಮಿಸಿ ಲ್ಲಿ ಕಳ್ಳೆ ಸತ್ವರ ಆಗಮನವಾಗುತ್ತಿದ್ದಂತೆಯೇ ಯ ಅರಣ್ಯ ಘಟಕದಲ್ಲಿ ತೋಳಗಳು ರ್ಪ್ರಮ ಕೇಳಿಬರುತ್ತಿದೆ. ಬೆಂಗಳೂರನ್ನು ಗಾರ್ಡನ್ ಯೇ ಉಳಿಸಿಕೊಳ್ಳಲು ಪ್ರತಿವರ್ಷ ಲಕ್ಷ ಲಕ್ಷ ನೆಡುತ್ತಲೇ ಕೋಟಿ ಕೋಟಿ ಮೊತ್ತದ ಕಳ್ಳ ಕರ್ಮಕಾಂಡ ಸುದ್ದಿಯಾಗಿದ್ದು ಬಿಟ್ಟರೆ ನೆಟ್ಟ), ಹಾಕಿದ ಗಿಡಗಳಾಗಲಿ ಬರಕತ್ತಾಗಲೇ ಇಲ್ಲ.


ಇಂಥದ್ದೇ ಮತ್ತೊಂದು ಸುತ್ತಿನ ಹಗಲು ಮಾಸ್ಟರ್ ಪ್ಲಾನಿಗೆ ಕೈಯಿಟ್ಟಿದ್ದಾನೆ ಬಿಬಿಎಂಪಿ ಟಕದ ಡಿಸಿಎಫ್ ಅರ್ಥಾತ್ ಉಪ ಅರಣ್ಯ ಧಿಕಾರಿ ಚಂದ್ರಶೇಖರ್!

ಗಾರಿ, ಆರೋಗ್ಯ ರೆವಿನ್ಯೂ, ತೋಟಗಾರಿಕೆ ತರಹೇವಾರಿ ಬಿಬಿಎಂಪಿಯ ಇಲಾಖೆಗಳಿಗೆ ದರೆ ಅರಣ್ಯ ಘಟಕದ ರೀತಿ ನೀತಿಗಳೇ ಬೇರೆ. ಬ್ಬದಿಗೆ ಸಾಲುಮರಗಳನ್ನು ಬೆಳೆಸುವುದು, ಬಿದ್ದ ಕಡಿದು ರಸ್ತೆ ಸಂಚಾರ ಮುಕ್ತಗೊಳಿಸುವುದು, ು ಒತ್ತುವರಿಯಾಗದಂತೆ ಕಣ್ಣಿಡುವುದು ಇತ್ಯಾದಿ ಾರ್ಯವ್ಯಾಪ್ತಿ ಮತ್ತು ಉತ್ಪತ್ತಿಯ ಬಿಬಿಎಂಪಿ ಅರಣ್ಯ ಇನ್ನಿಲ್ಲದಂತೆ ಲೂಟಿ ಹೊಡೆಯುವ ಡಿಸಿಎಫ್ ಖರನ ಹುನ್ನಾರವೇನಾದರೂ ಕಾರ್ಯರೂಪಕ್ಕೆ ಅದು ಬರೋಬ್ಬರಿ 7 ಕೋಟಿ ರೂಪಾಯಿಗಳ ದರೋಡೆಯಾಗುತ್ತದೆ.

ಬರ್ 3ರಂದು ಡಿಸಿಎಫ್ ಚಂದ್ರಶೇಖರನ


ರ್ ಕಟ್ಟೆ ಸತ್ಯ

ಬಿಬಿಎಂಪಿ ಅರಣ್ಯಘಟಕ ಡಿಸಿಎಫ್ ಚಂದ್ರಶೇಖರನ ಹಗಲು ದರೋಡೆ



ಕಚೇರಿಯಿಂದ ಹೊರಬಿದ್ದ ವಿವಿಧ ಕಾಮಗಾರಿ ಟೆಂಡರ್‌ಗಳ ಪ್ರಕಟಣೆಯ ವಿವರಗಳೇ ನಡೆದ ದರೋಡೆಯ ವಾಸನೆ ಭರಿಸುತ್ತವೆ. ಮರಗಳ ವ್ಯವಸ್ಥಿತ ನಿರ್ವಹಣೆಗೆಂದು ಒಂದೂವರೆ ಕೋಟಿ, ನೆಟ್ಟ ಸಸಿಗಳನ್ನು ನಿರ್ವಹಿಸಲೆಂದು ಮತ್ತೆ ಒಂದೂವರೆ ಕೋಟಿ, ಸಸಿಗಳ ರಕ್ಷಣೆಗೆಂದು ಟ್ರೀ ಗಾರ್ಡ್‌ಗಳ ಸರಬರಾಜಿಗೆ ಒಂದು ಕೋಟಿ ಮತ್ತು ಬೆಂಗಳೂರಿನ ವಿವಿಧೆಡೆ ಹೊಸ ಸಸಿಗಳನ್ನು ನೆಡುವುದಕ್ಕೆಂದೇ ಈ ಮೂರುವರೆ ಕೋಟಿ ರೂಪಾಯಿಗಳ ಟೆಂಡರ್ ಹಂಗಾಮಾದ ಅಧಿಸೂಚನೆಯೇನೋ ಹೊರಬಿದ್ದಿದೆ. ಮೇಲುನೋಟಕ್ಕಿದು ಮಹಾನ್ ಪರಿಸರ ಪ್ರೇಮದಂತೆಯೇ ಕಾಣುತ್ತದೆ.

2013ರ ಅಕ್ಟೋಬರ್ 1 ರಿಂದ 2014ರ ಮಾರ್ಚ್ 31ರವರೆಗೆ ಒಟ್ಟು 182 ದಿನಗಳ ಅರಣ್ಯ ಇಲಾಖೆಯ ಸದರಿ ಟೆಂಡರ್ ಷರತ್ತುಗಳಿವೆಯಲ್ಲ; ಬಹುಶಃ ಅದೇ ಇಡೀ ಹಗಲು ದರೋಡೆಯನ್ನು ವಿವರಿಸುತ್ತದೆ. ಈತನಕ ಬಿಬಿಎಂಪಿಯಲ್ಲಿ ಕಂಡರಿಯದ, ಹಿಂದುಮುಂದೆಂದೂ ಸಾಧ್ಯವಿಲ್ಲದ ಟೆಂಡರ್ ಷರತ್ತುಗಳ ಪೈಕಿ ಚಿತ್ರವಿಚಿತ್ರವಾದ ಕೆಲ ಷರತ್ತುಗಳು ಹೀಗಿವೆ. ಆ ಪ್ರಕಾರ ಈ ವರ್ಷ ಯಾರೇ ಗುತ್ತಿಗೆದಾರನೊಬ್ಬ ಕನಿಷ್ಟ 20 ಲಕ್ಷದ ಟೆಂಡರ್‌ಗೆ ಅರ್ಜಿ ಹಾಕುತ್ತಾನೆಂದರೆ ಕಳೆದ ಐದು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷ ಆತ ಈ ಮೊತ್ತಕ್ಕಿಂತ ಹೆಚ್ಚು ಮೊತ್ತದ ಟೆಂಡರ್ ಪೂರೈಸಿರಬೇಕು. ಹಾಗೊಂದು ಪಕ್ಷ ಐವತ್ತು ಲಕ್ಷದ ಸಸಿ ನೆಡುವ ಟೆಂಡರಿಗೋ, 60 ಲಕ್ಷದ ಟ್ರೀ ಗಾರ್ಡ್ ಸರಬರಾಜು ಟೆಂಡರ್‌ಗೋ ಗುತ್ತಿಗೆದಾರನೊಬ್ಬ ಅರ್ಜಿ ಸಲ್ಲಿಸಬೇಕೆಂದರೆ ಕಳೆದ ಐದು ವರ್ಷಗಳಲ್ಲಿ ಯಾವುದಾದ್ದರೂ ಒಂದು ವರ್ಷ ಆತ 50 ಲಕ್ಷದ್ದೋ, 60 ಲಕ್ಷದ್ದೋ ಇನ್ನಾವುದಾದರೂ ಟೆಂಡರ್ ಪೂರೈಸಿರಲೇಬೇಕು.

ಇದಿಷ್ಟೇ ಅಲ್ಲ, ಗುತ್ತಿಗೆದಾರನೊಬ್ಬ ಎರಡು ಅಥವಾ ಮೂರು ಟೆಂಡರ್‌ಗಳಿಗೂ ಅರ್ಜಿ ಹಾಕಿದನೆಂದರೆ- ಇಲ್ಲೂ ಇದೇ ನಿಯಮ ಅನ್ವಯವಾಗುತ್ತದೆ. ಈ ಮೂರೂ ಟೆಂಡರ್‌ಗಳ ಒಟ್ಟು ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಟೆಂಡರನ್ನು ಆತ ಕಳೆದೈದು ವರ್ಷದಲ್ಲಿ ಯಾವುದಾದರೂ ಒಂದು ವರ್ಷ ಪೂರೈಸಿರಲೇಬೇಕು!

ಇದು ಕೊಂಚ ವಿಚಿತ್ರದ ಷರತ್ತುಗಳೇ ನಿಜ. ಈತನಕ ಬೇರೆ ಬೇರೆ ಇಲಾಖೆಗಳ ಟೆಂಡರ್ ಷರತ್ತುಗಳಲ್ಲಿ ಕಾಮಗಾರಿಗಳ ಗುಣಮಟ್ಟದ ಕುರಿತಂತೆ ಷರತ್ತುಗಳಿರುತ್ತಿದ್ದವು. ಗುತ್ತಿಗೆದಾರರ ಆರ್ಥಿಕ ಸಾಮರ್ಥ್ಯ, ಅದಕ್ಕೆ ತಕ್ಕಂತೆ ಮುಂಗಡ ಠೇವಣಿ, ಕೆಲಸಗಾರರ ಸುರಕ್ಷತೆ; ಇತ್ಯಾದಿಗಳ ಕುರಿತಂತೆ ಷರತ್ತುಗಳಿದ್ದರೆ ಅದನ್ನು ಕರ್ತವ್ಯ, ದಕ್ಷತೆ, ಪ್ರಾಮಾಣಿಕತೆ ಎನ್ನುವುದು ಸಹಜ ತಾನೆ?

ಆದರೆ ಡಿಸಿಎಫ್ ಚಂದ್ರಶೇಖರ್ ಗುತ್ತಿಗೆದಾರ ಯಾವ ಮೊತ್ತದ ಕಾಮಗಾರಿಗೆ ಅರ್ಜಿ ಹಾಕುತ್ತಾನೋ ಅದಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಯನ್ನು ಈ ಹಿಂದೆ ಮಾಡಿರಬೇಕೆಂದು ವಿಚಿತ್ರ ಷರತ್ತನ್ನು ವಿಧಿಸುತ್ತಿರುವುದೇಕೆ?

ಕಾಮಗಾರಿಯ ಗುಣಮಟ್ಟಕ್ಕಾಗಲಿ, ಗುತ್ತಿಗೆದಾರನ ಸಾಮರ್ಥ್ಯಕ್ಕಾಗಲಿ ಏನೇನೂ ಸಂಬಂಧವಿಲ್ಲದ ಇಂಥ ಷರತ್ತುಗಳ ಉದ್ದೇಶವೇನು ಗೊತ್ತೇ?


ಕಳೆದ ಐದು ವರ್ಷಗಳಲ್ಲಿ ಐವತ್ತು ಲಕ್ಷ ಅಥವಾ ಕೋಟಿ ಮೊತ್ತದಲ್ಲಿ ಈ ಹಿಂದೆ ಯಾರೆಲ್ಲ ಟೆಂಡರ್ ಪೂರೈಸಿದ್ದರೋ ಅವರುಗಳಷ್ಟೇ ಇಂಥ ಟೆಂಡರುಗಳಿಗೆ ಅರ್ಜಿ ಹಾಕಬೇಕು. ಈ ರೀತಿ 50 ಲಕ್ಷದಿಂದ ಕೋಟಿಯತನಕ ಟೆಂಡರ್ ಪೂರೈಸಿದ ಹಿನ್ನೆಲೆಯಿರುವುದು ಭೋಗೇಶ್, ಶೇಖರಪ್ಪ ಮತ್ತು ಶಿವಣ್ಣ ಎಂಬ ಮೂವರು ಖದೀಮ ಕಂಟ್ರಾಕ್ಟರ್‌ಗಳಿಗೆ ಮಾತ್ರ. ಸಸಿಯನ್ನೇ ನೆಡದೇ ಸಹಸ್ರಾರು ಸಸಿಗಳನ್ನು ನೆಟ್ಟಿದ್ದೇವೆಂದು ಕೋಟಿ ಲೆಕ್ಕದಲ್ಲಿ ಕಳ್ಳಬಿಲ್ಲು ಮಾಡಿಸಿ ದೋಚುವುದು, ಇಲ್ಲದ ಸಸಿಗಳಿಗೆ ನೀರು, ಗೊಬ್ಬರ ಹಾಕಿ ವರ್ಷಗಟ್ಟಲೆ ಪೋಷಿಸಿದ್ದೇವೆಂದು 'ಬಿಲ್ಲು ವಿದ್ಯೆ' ಮೆರೆಯುವುದರಲ್ಲಿ ನಿಪುಣರಾದ ಆಂಧ್ರಾ ಮೂಲದ ಈ ಕಳ್ಳ ಕಂಟ್ರಾಕ್ಟರುಗಳೇ ಆ ಕಾಲದಿಂದಲೂ ಬಿಬಿಎಂಪಿ ಅರಣ್ಯ ಘಟಕದ ಅನ್ನದಾತರು!

ಮಿಕ್ಕಂತೆ ಬಿಬಿಎಂಪಿ ಅರಣ್ಯ ಗುತ್ತಿಗೆದಾರರು ಬೇಕಾಬಿಟ್ಟಿಯಿದ್ದರೂ ಅವರೆಲ್ಲ ಹತ್ತೋ ಇಪ್ಪತ್ತೋ ಲಕ್ಷದ ಕಾಮಗಾರಿಗಷ್ಟೇ ಸೀಮಿತರಾದ ಸ್ಥಳೀಯ ನಿರುದ್ಯೋಗಿ ಯುವಕರು. ಇಂಥ ಕರ್ನಾಟಕ ಮೂಲದ ಅರೆಬರೆ ಉದ್ಯೋಗಿ ಗುತ್ತಿಗೆದಾರರೇನಾದರೂ ದೊಡ್ಡ ಮೊತ್ತದ ಗುತ್ತಿಗೆಗೆ ಕಾಲಿಟ್ಟರೆಂದರೆ ಭೋಗೇಶ್, ಶೇಖರಪ್ಪ ಮತ್ತು ಶಿವಣ್ಣ ತ್ರಿಮೂರ್ತಿಗಳ ಹಗಲು ದರೋಡೆಗೆ ಭಂಗವಾದಂತೆಯೆ. ಸಾಲದ್ದಕ್ಕೆ ಲಕ್ಷದ ಲೆಕ್ಕದಲ್ಲಿ ಲಂಚ ಕೊಡುವ ಶಕ್ತಿ ಮತ್ತು ಯುಕ್ತಿಯೂ ಸ್ಥಳೀಯ ಸಣ್ಣಪುಟ್ಟ ಗುತ್ತಿಗೆದಾರರಿಗಿಲ್ಲ, ಆಂಧ್ರಾ ಮೂಲದ ತ್ರಿಮೂರ್ತಿ ಕಂಟ್ರಾಕ್ಟರ್‌ಗಳೇನೂ ಹತ್ತಿಪ್ಪತ್ತು ಲಕ್ಷದ ಲೆಕ್ಕದಲ್ಲಿ ಸುಮ್ಮನೆ ಲಂಚ ಕೊಡುವುದಿಲ್ಲ.

ಕೆಲಸವನ್ನೇ ಮಾಡದೆ ಟ್ರೀ ಮೆಂಟೇನೆನ್ಸ್ ಮಾಡಿದಂತೆ, ಸಸಿಯನ್ನೇ ನೆಡದೆ ವರ್ಷಗಟ್ಟಲೆ ಗಿಡಕ್ಕೆ ನೀರೆರೆದಂತೆ ಕೋಟಿ ಲೆಕ್ಕದಲ್ಲಿ ಬಿಲ್ಲು ಹಾಕಿ ಕೊಟ್ಟರಷ್ಟೇ ಈ ಖದೀಮರು ರೊಕ್ಕ ಬಿಚ್ಚುವುದು. 2011-12ರಲ್ಲಿ ಹೆಬ್ಬಾಳದ ಜಿಕೆವಿಕೆ ಅಂದರೆ ಗಾಂಧಿ ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ವಿವಿ ಆಡಳಿತ ಮಂಡಳಿಯೇ ಬೇಕಾಬಿಟ್ಟಿ ಗಿಡಗಳನ್ನು ನೆಟ್ಟಿತ್ತು, ಹೀಗೆ ಜಿಕೆವಿಕೆಯವರು ನೆಟ್ಟ ಗಿಡಗಳನ್ನೆಲ್ಲ ತಾವೇ ನೆಟ್ಟಿದ್ದೇವೆಂದು ಕಳ್ಳ ಬಿಲ್ಲು ಸೃಷ್ಟಿಸಿ ಕೋಟಿ ಮೊತ್ತದಲ್ಲಿ ದುಡ್ಡು ನುಂಗಿದ್ದು ಇದೇ ಡಿಸಿಎಫ್ ಚಂದ್ರಶೇಖರ್!

ಈ ಥರದ ರಾಬರಿ-ಡಕಾಯಿತಿಗೆಲ್ಲ ಡಿಸಿಎಫ್‌ರನ್ನು ಪ್ರಚೋದಿಸಿ ಕನ್ನ ಹಾಕಲೆಂದೇ ಪ್ರಕಾಶ್ ಎಂಬ ಆರ್‌ಎಫ್‌ಓ ಓರ್ವ ತಲೆಎತ್ತಿದ್ದಾನೆ. ಯಲಹಂಕ ವಲಯದಲ್ಲಿ ಆ ಕಾಲದಿಂದಲೂ ಆರ್‌ಎಫ್‌ಓ ಆಗಿದ್ದು ಶೇಖರಪ್ಪ ಮತ್ತು ನಾರಾಯಣಸ್ವಾಮಿಯಂಥ ಖದೀಮ ಕಂಟ್ರಾಕ್ಟರುಗಳನ್ನು ಜೊತೆ ಹಾಕಿಕೊಂಡೇ ಪ್ರಕಾಶ್ ಕನ್ನ ಹಾಕುತ್ತಾನೆ ಮತ್ತು ಅದರ ಸಮಪಾಲನ್ನು ಡಿಸಿಎಫ್ ಚಂದ್ರಶೇಖರ್ ಜೇಬಿಗಿಡುತ್ತಾನೆ.

ಸದ್ಯ ಆರ್‌ಎಫ್‌ಓ ಪ್ರಕಾಶ್ ಕೊಟ್ಟ ಪ್ರಳಯಾಂತಕ ಐಡಿಯಾ ಪರಿಣಾಮವೇ 7 ಕೋಟಿ ಮೊತ್ತದ ತರಹೇವಾರಿ ಟೆಂಡರ್‌ಗಳ ಜಾತ್ರೆ. ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿಗಳಿಗೆಂದೇ ನಲವತ್ತೆಂಟೂವರೆ ಲಕ್ಷ ರೂಪಾಯಿಗಳ ಬೊಂಬು ವೃಕ್ಷ ಕವಚಗಳ ಸರಬರಾಜಿನ ಟೆಂಡರ್ ಕರೆಯಲಾಗಿದೆ. ಯಲಹಂಕ ವಲಯಕ್ಕೆಂದೇ 31 ಲಕ್ಷದ ಇದೇ ಮಾದರಿಯ ಟೆಂಡರ್ ಕರೆದಿದ್ದಾರೆ. ಇದು ಕೇವಲ ಟ್ರೀಗಾರ್ಡ್‌ಗಳ ವಿಷಯವಾದರೆ ಇನ್ನು ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆಯ ಟೆಂಡರಿನ ಹಕೀಕತ್ತೇ ಬೇರೆಯಿದೆ. ರಾಜರಾಜೇಶ್ವರಿನಗರವೊಂದಕ್ಕೆ 99 ಲಕ್ಷದ 60 ಸಾವಿರ ರೂಪಾಯಿಗಳ ಸಸಿ ನೆಡುವ ಟೆಂಡರ್


ಆಯುಕ್ತ ಲಕ್ಷ್ಮೀನಾರಾಯಣ

ಕರೆದು; ಹೆಬ್ಬಾಳ, ಪುಲಿಕೇಶಿನಗರ, ಸರ್ವಜ್ಞನಗರ, ಶಿವಾಜಿನಗರ ಮತ್ತು ಶಾಂತಿನಗರಗಳಂಥ ಐದು ವಿಧಾನಸಭಾ ಕ್ಷೇತ್ರಗಳನ್ನು ಸೇರಿಸಿ ಕೇವಲ ಸಾವಿರ ಸಸಿ ನೆಡುವ 2 ಲಕ್ಷದ 49 ಸಾವಿರ ರೂಪಾಯಿಗಳ ಯೋಜನೆ ರೂಪಿಸಲಾಗಿದೆ.

ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಕೇವಲ ಸಾವಿರ ಸಸಿ ನೆಟ್ಟು ಒಂದೇ ಕ್ಷೇತ್ರದಲ್ಲಿ 20 ಸಾವಿರ ಸಸಿಗಳನ್ನು ಹಾಕಲು ಕಾರಣ ಮತ್ತು ಮಾನದಂಡ ಯಾರಿಗೂ ಅರ್ಥವಾಗುತ್ತಿಲ್ಲ. ಇದೇ ರೀತಿ ಬ್ಯಾಟರಾಯನಪುರದಲ್ಲಿ 53 ಲಕ್ಷದ ಟೆಂಡರ್ ಕರೆಯಲಾಗಿದೆ. ರಾಜರಾಜೇಶ್ವರಿನಗರದ 14 ವಾರ್ಡುಗಳಿಗೆ 99 ಲಕ್ಷದ ಟೆಂಡರ್ ಕರೆದಂತೆ ಬೊಮ್ಮನಹಳ್ಳಿ ವಲಯದಲ್ಲಿ 94 ಲಕ್ಷ ರೂಪಾಯಿಗಳ ಮಗದೊಂದು ಟೆಂಡರ್ ಕರೆಯಲಾಗಿದೆ. ಉಳಿದಂತೆ ಬಹುತೇಕವೆಲ್ಲ ಮೂರೋ, ಐದೋ, ಹತ್ತೋ ಲಕ್ಷದ ಟೆಂಡರುಗಳು. ಐದು ವಿಧಾನಸಭಾ ಕ್ಷೇತ್ರಗಳಿಗೆ ಸಾವಿರ ಸಸಿನೆಟ್ಟು ಎರಡೂವರೆ ಲಕ್ಷದ ಟೆಂಡರ್ ಕರೆದದ್ದಕ್ಕೂ ಒಂದೇ ವಿಧಾನಸಭಾ ಕ್ಷೇತ್ರದ 14 ವಾರ್ಡುಗಳಿಗೆ 40 ಸಾವಿರ ಸಸಿನೆಟ್ಟು ಹೆಚ್ಚೂ ಕಮ್ಮಿ 1 ಕೋಟಿ ಮೊತ್ತದ ಅದೇ ಟೆಂಡರ್ ಕರೆದಿರುವುದಕ್ಕೂ ಕಾರಣ, ಮಾನದಂಡ ಯಾವುದೂ ಅರ್ಥವಾಗುತ್ತಿಲ್ಲ.

ಇದರ ಹುನ್ನಾರವಿಷ್ಟೆ- ಶೇಖರಪ್ಪ ಭೋಗೇಶ್, ಶಿವಣ್ಣ ಶಂಕ್ರಪ್ಪ, ನಾರಾಯಣಸ್ವಾಮಿ ಇತ್ಯಾದಿ ಖದೀಮ ಕಂಟ್ರಾಕ್ಟರ್‌ಗಳೆಲ್ಲ ತಮ್ಮತಮ್ಮಲ್ಲೇ ರಿಂಗ್ ಮಾಡಿಕೊಂಡು ದೊಡ್ಡ ಮೊತ್ತದ ಕಾಂಟ್ರಾಕ್ಟುಗಳನ್ನು ಲಪಟಾಯಿಸುವುದು. ಹಿಂದಿನ ಐದು ವರ್ಷಗಳಲ್ಲಿ ಯಾವುದಾದರೂ ಒಂದು ವರ್ಷ ಈಗಿನದಕ್ಕಿಂತ ಅಧಿಕ ಮೊತ್ತದ ಟೆಂಡರ್ ಪೂರೈಸಿರಬೇಕೆಂಬ ಷರತ್ತು ಮೊದಲೇ ಹಾಕಿರುವುದರಿಂದಾಗಿ ಕಳ್ಳಬಿಲ್ಲುಕೋರರ ಹೊರತಾಗಿ ಬೇರೆ ಯಾರೂ ಟೆಂಡರ್ ಅರ್ಜಿಯನ್ನೇ ಹಾಕುವಂತಿಲ್ಲ. ನಾಳೆ ಏನ ಎಷ್ಟು ಸಸಿ ನೆಟ್ಟರು. ಎಲ್ಲೆಲ್ಲಿ ನೆಟ್ಟರು. ಉಳಿದ ಸಸಿಗಳೆಷ್ಟು, ಸತ್ತ ಸಸಿಗಳೆಷ್ಟು ಎಂಬ ಲೆಕ್ಕ ಹಾಕಲು ಇದೇ ಭ್ರಷ್ಟ ಅರಣ್ಯಾಧಿಕಾರಿಗಳು ತಾನೇ ಬರಬೇಕು? ಕುರಿಕಾಯಲು ತೋಳ, ಲೆಕ್ಕ ಕೇಳಲು ಚಿತ್ತ ಕಿರುಬ- ಹೇಗಿದೆ ಬಿಬಿಎಂಪಿಯ ಅರಣ್ಯ ಘಟಕದ ಲೂಟಿಯ ವೈಖರಿ!


● ರಾ.ಸೋಮನಾಥ್


...ಚ ಕೊಟ್ಟರೆ ಕಳ್ಳಬಿಲ್ಲು; ಕೊಡದಿದ್ದರೆ ಅಲ್ಲೇ ನಿಲ್ಲು!

1 ರಿಂದ ಈತನಕ ಬಿಬಿಎಂಪಿ ಅರಣ್ಯ ಘಟಕದ ಸಸಿ ನೆಡುವ ಟೆಂಡರ್‌ಗಳ ಕುರಿತಂತೆ ತನಿಖೆ ನಡೆದರೆ ಚಂದ್ರಶೇಖರ್ ಮಾತ್ರವಲ್ಲದೆ ಬಿಬಿಎಂಪಿ ಅರಣ್ಯ ಘಟಕದ ಸಿಸಿಎಫ್ ಅಂದರೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕುಮಾರ್ ಸಹಿತ ಅರ್ಧ ಡಜನ್ ಅರಣ್ಯಾಧಿಕಾರಿಗಳು ಜೈಲು ಪಾಲಾಗುತ್ತಾರೆ. ಗಿಡವನ್ನೇ ನೆಡದೆ ಕಳ್ಳ ಐದು ಕೋಟಿಗೂ ಅಧಿಕ ಮೊತ್ತದ ಡಕಾಯಿತಿಯಲ್ಲಿ ಈ ಹಿಂದೆ ಎಸಿಎಫ್ ಆಗಿದ್ದ ವೆಂಕಟೇಶಪ್ಪನಂಥ ಕಾರಿಗಳೂ ಪ್ರಮುಖ ಆರೋಪಿಗಳೆ.

ವೆಂಕಟೇಶಪ್ಪ ಬೇರೆ ಯಾರೂ ಅಲ್ಲ, ಬಿಜೆಪಿ ಸರ್ಕಾರದಲ್ಲಿ ಕಾರ್ಮಿಕ ಾಗಿದ್ದ ಹೊಸಕೋಟೆಯ ರಕ್ತಪಿಪಾಸು ಬಚ್ಚೇಗೌಡನ ರಕ್ತ ಸಂಬಂಧಿ!

ಟೇಶಪ್ಪ ಮಾತ್ರವಲ್ಲದೆ ಅನೇಕ ಅರಣ್ಯಾಧಿಕಾರಿಗಳು ಬೇನಾಮಿಯಾಗಿ ತಾವೇ ಮಾಡಿ ಕಳ್ಳಬಿಲ್ಲು ಹಾಕಿದ್ದರ ವಿರುದ್ಧ ಇನ್ನೂ ತನಿಖೆಯಾಗಬೇಕಿದೆ. ಇಲ್ಲಿ ಅರಣ್ಯಾಧಿಕಾರಿಗಳ ಷಡ್ಯಂತ್ರ ಹೇಗಿದೆಯೆಂದರೆ; ಇಂಥ ಕಳ್ಳಬಿಲ್ಲುಗಳನ್ನೆಲ್ಲ ಮರಗಳ ವ್ಯವಸ್ಥಿತ ನಿರ್ವಹಣೆ ಮಾಡಿದ ಬಡಪಾಯಿ ಕಂಟ್ರಾಕ್ಟರ್‌ಗಳ ಬಿಲ್ಲುಗಳ ಜೊತೆ ಸೇರಿಸಿ ಬಾಕಿಯಿಟ್ಟಿದ್ದಾರೆ. ಸಾಲಸೋಲ ಮಾಡಿತಂದು ಮರಗಳ ವ್ಯವಸ್ಥಿತ ನಿರ್ವಹಣೆ ಮಾಡಿದ ಒಂದು ಡಜನ್ ಕಂಟ್ರಾಕ್ಟರ್‌ಗಳ ಕೋಟಿಗೂ ಅಧಿಕ ಮೊತ್ತದ ಬಿಲ್ಲನ್ನು ಕಳೆದ ಎರಡೂವರೆ ವರ್ಷಗಳಿಂದ ಪಾವತಿಸದೇ ಸತಾಯಿಸಲಾಗುತ್ತಿದೆ. ಹೀಗೆ ಎರಡೂವರೆ ವರ್ಷದಿಂದ ಬಿಲ್ ಮೊತ್ತಕ್ಕಾಗಿ ಕಣ್ಣೀರಿಡುತ್ತಿರುವ ಬಹುತೇಕ ಕಂಟ್ರಾಕ್ಟರ್‌ಗಳೆಲ್ಲ ಪಾಲಿಕೆಯ ದಕ್ಷಿಣ ವಲಯಕ್ಕೆ ಸೇರಿದವರು ಮತ್ತು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸಿದವರು.


ಸಿಸಿಎಫ್ ಬ್ರಿಜೇಶ್


ರೇವಣ್ಣ

ಇಂಥ ಪ್ರಾಮಾಣಿಕ ಗುತ್ತಿಗೆದಾರರ ಬಿಲ್ಲನ್ನು ಕಳೆದ ಎರಡೂವರೆ ವರ್ಷದಿಂದ ಸತಾಯಿಸುತ್ತಿರುವ ಡಿಸಿಎಫ್ ಚಂದ್ರಶೇಖರ್ ಮತ್ತು ಸಿಸಿಎಫ್ ಬ್ರಿಜೇಶ್ ಕುಮಾರ್ ಕೆಲಸವನ್ನೇ ಕಳ್ಳಬಿಲ್ಲು ಹಾಕಿ ಲಂಚ ಕೊಟ್ಟ ಉತ್ತರ ಮತ್ತು ಪಶ್ಚಿಮ ವಲಯದ ಕಂಟ್ರಾಕ್ಟರುಗಳೆಲ್ಲರ ಬಿಲ್ಲುಗಳನ್ನು ಇಲ್ಲಿಗೆ ಒಂದೆರಡು ಪಾವತಿಸಿದ್ದಾರೆ. ಇದರರ್ಥ ಪ್ರಾಮಾಣಿಕವಾಗಿ ಟೆಂಡರ್ ಪೂರೈಸಿಯೂ ಲಂಚ ಕೊಡದೇ ಅಂಥವರಿಗೆ ಬಿಲ್ಲಿನ ಮೊತ್ತಕ್ಕೇ ದೋಖಾ. ಲಂಚ ಕೊಟ್ಟವರು ಕೆಲಸ ಮಾಡಿದೆ ಕಳ್ಳಬಿಲ್ಲು ಹಾಕಿಸಿದರೂ [illegible]. ಈ ಬಗ್ಗೆ ಕಳೆದ ಎರಡೂವರೆ ವರ್ಷದಿಂದ ಅರಣ್ಯ ಘಟಕದ ಟೇಬಲ್ಲಿನಿಂದ ಟೇಬಲ್ಲಿಗೆ ಅಲೆದಲೆದು ದ ಪ್ರಾಮಾಣಿಕ ಗುತ್ತಿಗೆದಾರರು ವಿಷ ಕುಡಿಯುವುದೊಂದೇ ಬಾಕಿ.

ಜೆಡಿಎಸ್ ನಾಯಕ ರೇವಣ್ಣನ ರಕ್ತ ಸಂಬಂಧಿ ಎಂದೇ ದೌಲತ್ತು ಮಾಡುತ್ತಾನೆ ಡಿಸಿಎಫ್ ಚಂದ್ರಶೇಖರ್. ಗೆ ಹೊಸ ಆಯುಕ್ತರಾಗಿ ಬಂದ ಲಕ್ಷ್ಮೀನಾರಾಯಣರಿಗೆ ಈಗಾಗಲೇ ಖದೀಮ ಡಿಸಿಎಫ್ ವಿರುದ್ಧ ಜೋಡಿ ದೂರುಗಳು ಬಂದಿದ್ದರೂ ಏಕೆ ಮುಲಾಜೋ ಗೊತ್ತಾಗುತ್ತಿಲ್ಲ, ಭ್ರಷ್ಟ ಡಿಸಿಎಫ್‌ನಿಂದಾಗಿ ಪಾಲಿಕೆಯ [illegible] ಉಳಿಗಾಲವಿಲ್ಲ.

ಅಮೆರಿಕಾ ಸದೆಬಡಿಯಲು ಹೊರಟ ಹುಡುಗ ಬಾಂಬ್ ಭೂತನಾದ!



ಅಹ್ಮದ್ ಕಹಾನಿ!!

ಆತಂಕವಾದಿ ಅಹ್ಮದ್ ಯಾನೆ ಯಾಸೀನ್ ತನ್ನ ಸಹಚರರೊಂದಿಗೆ ಅಡಗುದಾಣಗಳಲ್ಲಿ ಕ್ಯಾಂಪು ಹಾಕುತ್ತಿದ್ದ. ಆತ ಹಾಗೊಮ್ಮೆ ಕೊಪ್ಪದ ದಟ್ಟ ಅರಣ್ಯದಲ್ಲಿ ಬೀಡುಬಿಟ್ಟಿದ್ದ. ಅಲ್ಲಿಗೆ 'ಹೆಂಡತಿ'ಯೊಬ್ಬಳನ್ನು ತಂದಿಟ್ಟುಕೊಂಡಿದ್ದನಂತೆ. ಊಹಾಪೋಹಗಳ ಪ್ರಕಾರ ಆಕೆ ಉಡುಪಿ ಬಳಿಯ ಕಾಪುವಿನ ಹಿಂದೂ ಹೆಂಗಸು. ಆಕೆಯನ್ನು ರಹಸ್ಯವಾಗಿ ಅಹ್ಮದ್ ವರಿಸಿದ್ದನಂತೆ. ಇದು ಅದೆಷ್ಟು ನಿಜವ್ರೋ ಸುಳ್ಳೋ ಗೊತ್ತಿಲ್ಲ.

ಆದರೆ ಆತ ಬಿಹಾರದ ಸಮಷ್ಟಿಪುರದ ಮುಸ್ಲಿಮ್ ಹುಡುಗಿಯನ್ನು ಮದುವೆಯಾಗಿದ್ದು ಖರೆ. ಈಕೆ ಮಹ್ಮದ್ ಇರ್ಷಾದ್ ಖಾನ್ ಎಂಬ ಕಟ್ಟಾರ್ ಸಾಬಿಯೊಬ್ಬನ ಮಗಳು. ಈ ಖಾನ್ ಮತಾಂಧ ಮಸಲತ್ತುಗಾರ. ದೆಹಲಿಯ ಮಂಡಕಾ ರೈಲ್ವೆ ನಿಲ್ದಾಣದಿಂದ 8 ಕಿ.ಮೀ. ದೂರದ ಮೀರ್ ವಿಹಾರ್ ಕೈಗಾರಿಕಾ ಪ್ರದೇಶದಲ್ಲಿ ಈತನನ್ನು ದೆಹಲಿ ಪೊಲೀಸರು ದಸ್ತಗಿರಿ ಮಾಡುತ್ತಾರೆ. ದೆಹಲಿಯಲ್ಲಿ ಪುಟ್ಟದೊಂದು ಫ್ಯಾಬ್ರಿಕೇಷನ್ ಮಳಿಗೆ ಹೊಂದಿದ್ದ ಖಾನ್ ಮತ್ತು 'ಅಹ್ಮದ್' ಸಿದ್ದಿಬಾಪಾನಿಗೆ ಅದ್ಹೇಗೋ ದೋಸ್ತಿಯಾಗುತ್ತದೆ. ಅಹ್ಮದ್‌ನ 'ಜಿಹಾದಿ ತ್ಯಾಗ' ಕಂಡು ಸಹಾನುಭೂತಿ ವ್ಯಕ್ತಪಡಿಸುವ ಖಾನ್ ಆತನಿಗೆ ವಾಸಿಸಲು ಆಶ್ರಯ ಕೊಡುತ್ತಾನೆ. ಕೊನೆಗೆ ತನ್ನ ಮಗಳನ್ನೇ ಮದುವೆ ಮಾಡಿಯೂ ಕೊಡುತ್ತಾನೆ.

ಇದು ಭಟ್ಕಳದಲ್ಲಿರುವ ಅಹ್ಮದ್‌ನ ಕುಟುಂಬಸ್ಥರಿಗೆ ಗೊತ್ತಿರುವ ನಿಖಾನೇ! ಬಹುರಾಣಿ ಅಹ್ಮದ್‌ನ ಭಟ್ಕಳದ ಮನೆಗೆ 6 ತಿಂಗಳ ಹಿಂದೊಮ್ಮೆ ಫೋನಾಯಿಸಿದ್ದಳಂತೆ. ಭಟ್ಕಳದ ಗಂಡನ ಮನೆಗೆ ಬರುವುದಾಗಿ ಹೇಳಿದ್ದಳಂತೆ. ಮೊದಲೇ ಮಗನ ಲಫಡಾದಿಂದ ಕಂಗೆಟ್ಟಿದ್ದ ಅಹ್ಮದ್‌ನ ತಾಯ್ತಂದೆ ಇದಕ್ಕೆ ಒಪ್ಪಲಿಲ್ಲ. "ಮೊದಲು ಮಗನನ್ನು ತಂದು ಕೊಡು. ಆ ನಂತರ ಬಾ..." ಎಂದು ಹರತ್ತು ಹಾಕಿದ್ದರಂತೆ. ಈ ಫೋನ್ ಕಾಲ್ ಸಹ ಅಹ್ಮದ್‌ನ ಬಂಧನಕ್ಕೆ ಒಂಚೂರು ನೆರವಾಗಿದೆ.



ಯಾಸೀನ್ ಭಟ್ಕಳ್ ಯಾನೆ ಮಹ್ಮದ್ ಅಹ್ಮದ್ ಸಿದ್ದಿಬಾಪಾ ಅರೆಸ್ಟಾದಾಗ...

ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ-ಯಾವ ದೃಷ್ಟಿಕೋನದಿಂದ ಯೋಚಿಸಿದರೂ ಯಾಸೀನ್ ಭಟ್ಕಳ್ ಯಾನೆ ಮಹ್ಮದ್ ಅಹ್ಮದ್ ಸಿದ್ದಿಬಾಪಾ ನೆತ್ತರೋಕುಳಿಯ ಬಾಂಬ್ ಭೂತನಾಗಿ ಅವತರಿಸಿದ್ದು ಭಟ್ಕಳದಲ್ಲಿ 1990ರ ದಶಕದಲ್ಲಿ ಹಿಂದೂತ್ವ ಹುಟ್ಟುಹಾಕಿದ ಕೋಮು ರಾಜಕಾರಣದ ಕ್ರೌರ್ಯದ ಅಡ್ಡ ಪರಿಣಾಮದಂತೆ ಭಾಸವಾಗುತ್ತದೆ! ಮತೀಯ ಮಸಲತ್ತು- ಜಿಹಾದಿ ಜಿದ್ದು ಅಹ್ಮದ್ ಸಿದ್ದಿಬಾಪಾನನ್ನು ಅದ್ಯಾವ ಪರಿ ಆವರಿಸಿತೆಂದರೆ, ತನ್ನ ಇಪ್ಪತ್ತನಾಲ್ಕನೇ ವಯಸ್ಸಿಗೇ ಮುನ್ನೂರಕ್ಕಿಂತ ಹೆಚ್ಚು ಜನರನ್ನು ಬಾಂಬ್ ಇಟ್ಟೇ ಕೊಂದು ಖುಷಿಪಡುವಂಥ, ಇನ್ನಷ್ಟು ಜೀವ ಬಲಿಗೆ ಹಪಹಪಿಸುವಂಥ ಘನಘೋರ ಸೈತಾನನ್ನಾಗಿ ರೂಪಿಸಿಬಿಟ್ಟಿತು! ಇಂಥ ಉಗ್ರ ಪ್ರತಾಪಿ ಈಗ ಪೊಲೀಸರ ಬೋನಿಗೆ ಬಿದ್ದಿದ್ದಾನಾದರೂ ಆತ ಮಾಡಿದ ಪಾತಕ ಸರಣಿಯ ಹಾವಳಿ ಮಾತ್ರ ಅಷ್ಟು ಸುಲಭಕ್ಕೆ ಮರೆಯುವಂಥದ್ದಲ್ಲ...

ಅಮೆರಿಕೆಯನ್ನು ಸದೆಬಡಿವ ಹಠದಿಂದ ಮನೆಬಿಟ್ಟು ಹೋದ ಈ ಹಣವಂತರ ಮಗ ಪಕ್ಕಾ ಆತಂಕವಾದಿಯಾಗಿ ದೇಶದ ನಿದ್ದೆಗೆಡಿಸುತ್ತ ಬಂದ ಕತೆಯ ಪುಟ-ಪುಟದಲ್ಲೂ ರಕ್ತಸಿಕ್ತ ಕಲೆಗಳೇ ಕಲೆಗಳು. ಹತ್ತು-ಹಲವು ಭೀಭತ್ಸ ಬಾಂಬ್ ಸ್ಫೋಟ ಪ್ರಕರಣದಲ್ಲಿ ಮೋಸ್ಟ್ ವಾಂಟೆಡ್ ಅಹ್ಮದ್ ಯಾನೆ ಯಾಸೀನ್ ಎಂಬ ಹೆಸರು ಏಳೆಂಟು ವರ್ಷದಿಂದ ರಾಷ್ಟ್ರೀಯ ತನಿಖಾದಳದ ತಲೆ ತಿನ್ನುತ್ತಲೇ ಇತ್ತು. ಪ್ರತಿ ಬಾರಿ ಭಯೋತ್ಪಾದನಾ ಕಾರ್ಯಾಚರಣೆ ನಡೆದಾಗಲೂ ಆತನ ಬೆನ್ನಟ್ಟಿಹೋಗುತ್ತಿದ್ದ ಪೊಲೀಸರು ಇನ್ನೇನು ಹಿ... ಬಿಟ್ಟರು ಎನ್ನುವಾಗ ಪರಾರಿಯಾಗಿ ಬಿಡುತ್ತಿದ್ದ. ಒ... ಎರಡಲ್ಲ, ಮೂರು ಬಾರಿ ಪೊಲೀಸರೊಂದಿಗೇ ... ಗುರುತು ಸಿಗದಂತೆ ನೋಡಿಕೊಂಡು ತಲೆ ತಪ್ಪಿಸಿಕೊಂ... ಹಾಗೆ ಹೋದವನು ವಿಧ್ವಂಸಕ ಕಾರಸ್ಥಾನ ಮಾತ್ರ ಬಿ... ಬಾಂಬು ಕಟ್ಟುವ ಕೈಂಕರ್ಯ ನಿಲ್ಲಿಸಲಿಲ್ಲ!

ಪ್ರತಿಬಾರಿ ಬಾಂಬ್ ಸ್ಫೋಟಗೊಂಡು ಅಹ... ತಂತ್ರ ಸಫಲವಾಗಿತ್ತು. ಅದಾತನಲ್ಲಿ ಜೀವವಿರೋ... ಆತ್ಮಸ್ಥೈರ್ಯ ಹೆಚ್ಚಿಸುತ್ತಾ ಹೋಯಿತು. 2008ರ ಬಾಂಬ್ ಬ್ಲಾಸ್ಟ್ ಬಳಿಕ ಯಾಸೀನ್ ಎಂದು ಗುರುತಿ... ಅಹ್ಮದ್ ಸಿದ್ದಿಬಾಪಾ ಉಗ್ರಗಾಮಿಗಳ ಕುಲ ಗುರುವಿನ... ಹೋದ! ಉತ್ತರ ಕನ್ನಡದ ಭಟ್ಕಳದ ನವಾಯತ ಮು... ಕುಲದ ಅಹ್ಮದ್‌ನ ತಂದೆ ಜರಾರ್ ದುಬೈನಲ್ಲಿ ... ಉದ್ಯಮ ನಡೆಸಿಕೊಂಡಿದ್ದರು. ಅವರ ಸಂಸಾರ ಭ... ಮುಗ್ಧುಮ್ ಕಾಲೋನಿಯಲ್ಲೇ ಇತ್ತು, ಶ್ರೀಮಂತ ಕುಟುಂ... ಅಹ್ಮದ್ ಕಲಿಕೆಯಲ್ಲಿ ಹಿಂದಿದ್ದ; ಒಂಥರಾ ಪೆದ್ದು-... ಕಳೆಯ ಪೋರನಾಗಿದ್ದ. ಭಟ್ಕಳದ ಅಂಜುಮ... ಹೈಸ್ಕೂಲಿನಲ್ಲಿ 10ನೇ ತರಗತಿತನಕ ಕಲಿತಿದ್ದ... ಎಸ್‌ಎಸ್‌ಎಲ್‌ಸಿ ಪಾಸು ಮಾಡಲಿಕ್ಕೂ ಆಗಲಿಲ್ಲ. ... ತಲೆಗತ್ತದೇ ಅಂಡಲೆಯ ಹತ್ತಿದ.

ಒಮ್ಮೆ ವೃತ್ತಪತ್ರಿಕೆ ಓದುತ್ತಿದ್ದ ಅಹ್ಮದ್‌ಗೆ ಇದ್ದಕ್ಕಿ... ಅಮೆರಿಕದ ಮೇಲೆ ಸಿಟ್ಟು ಬರುತ್ತದೆ; ಜಗತ್ತಿನ ಮುಸ್ಲಿ...

ಭಟ್ಕಳಕ್ಕೇಕೆ ಕಳಂಕ?!

ಇದೆಂಥ ವಿಪರ್ಯಾಸ ನೋಡಿ!

ಭಟ್ಕಳದಲ್ಲಿ ವಿಶ್ವವಿಖ್ಯಾತ ಪ್ರಾಕೃತಿ ತಾಣಗಳಿವೆ; ಐತಿಹಾಸಿಕ ಕೀರ್ತಿಯಿದೆ; ಪ್ರಸಿದ್ಧ ಉದ್ಯಮಿಗಳಿದ್ದಾರೆ; ದೇಶದ ಆರ್ಥಿಕ ವ್ಯವಹಾರದಲ್ಲಿ ಸರಾಸರಿ 500 ಕೋಟಿ ರೂ. ಭಟ್ಕಳಿಗರದು. ಘಮ-ಘಮಿಸುವ ಮಲ್ಲಿಗೆಯಿದೆ. ವಿಶಿಷ್ಟ ಪರಂಪರೆ- ಸಂಸ್ಕೃತಿಯ ನವಾಯತ ಮುಸ್ಲಿಮರು ಭಟ್ಕಳದಲ್ಲಿದ್ದಾರೆ. ಇದ್ಯಾವುದರೊಂದಿಗೂ ಅಡ್ಡ ಹೆಸರಾಗಿ "ಭಟ್ಕಳ" ಸೇರಿಕೊಂಡಿಲ್ಲ. ದೇಶಕ್ಕೆ ಬಾಂಬಿಟ್ಟ- ಭಯೋತ್ಪಾದಕ ಭಂಡಾಟ ನಡೆಸಿದ ನಟೋರಿಯಸ್‌ಗಳ ಹೆಸರಿನೊಂದಿಗೆ ಮಾತ್ರ "ಭಟ್ಕಳ" ಥಳಾಗಿ ಸೇರಿಸಲಾಗುತ್ತಿದೆ.

ಇದ್ಯಾರ ಕುಚೋದ್ಯ? ಭಟ್ಕಳಕ್ಕೆ ಯಾಕಿಂತ ಕಳಂಕ? ಹಾಗಂತ ಭಟ್ಕಳಿಗರು ಅಲವತ್ತುಕೊಳ್ಳುತ್ತಿದ್ದಾರೆ. ಭಟ್ಟಾ ಕಳಂಕನೆಂಬ ಜೈನ ವ್ಯಾಕರಣಕಾರನಿಂದಾಗಿ ಭಟ್ಕಳವಾಗಿ, ಚೆನ್ನಭೈರಾದೇವಿಯ ದರ್ಬಾರಿನಲ್ಲಿ ಚನ್ನಪಟ್ಟಣವಾಗಿ, ಸೌಮ್ಯ ನವಾಯತಿ ಸಂಸ್ಕೃತಿಯ ನವಾಯತರಿಂದಾಗಿ "ಮಿನಿ ದುಬೈ" ಎಂದೆನಿಸಿಕೊಂಡಿರುವ ಭಟ್ಕಳ ಇವತ್ತು ಕ್ಷುದ್ರ ಜಿಹಾದಿ ಉಗ್ರರ ಹೆಸರಿನೊಂದಿಗೆ ಥಳಕು ಹಾಕಿಕೊಳ್ಳುತ್ತಿರುವುದು ದುರಂತ! ಇದು ಅಧಿಕಪ್ರಸಂಗಿ ಅಧಿಕಾರಿಗಳ ಅಚಾತುರ್ಯವೇನೋ ನಿಜ. ಆದರೆ ಅಮಾಯಕ ಜನರ ಭಾವನೆ ಘಾಸಿಯಾಗುವ ಪರಿಯಿದೆಯಲ್ಲ ಅದು ಘೋರ-ಕರುಣಾಜನಕ.

ಭಟ್ಕಳದಲ್ಲಿ ಜಗತ್ಪ್ರಸಿದ್ಧ ಮುರ್ಡೇಶ್ವರವಿದೆ. ಹತ್ತಿರದಲ್ಲೇ ರಾಷ್ಟ್ರೀಯ ಪ್ರಾಮುಖ್ಯತೆಯ "ನೇತ್ರಾಣಿ" ನಡುಗಡ್ಡೆಯಿದೆ. ಜಗತ್ತಿನಾದ್ಯಂತ ವಿಖ್ಯಾತಿ ಪಡೆದಿರುವ ಕೆಎಫ್‌ಸಿ ಚಿಕನ್ ಮಾಲೀಕ ಜುಬೇರ್ ಖಾಜಿ ಭಟ್ಕಳದವರು. (ಅವರೀಗ ಅಮೆರಿಕನ್ ಜುಬೇರ್ ಎಂದೇ ಹೆಸರುವಾಸಿ); ಚೆನ್ನೈನಲ್ಲಿರುವ ವಿಶ್ವಪ್ರಸಿದ್ಧ "ಮೌಲಾನಾ ಲುಂಗಿ" ಫ್ಯಾಕ್ಟರಿ ಒಡೆಯ ಎಸ್.ಎಂ. ಸೈಯದ್ ಮೊಹಸೀನ್ ಮೂಲ ಭಟ್ಕಳ; ಸ್ಯಾಂಡೋ ಹಲ್ವಾ ಪ್ರತಿದಿನ ಭಟ್ಕಳದಿಂದ ದೇಶ-ವಿದೇಶಕ್ಕೆ ರವಾನೆಯಾಗುತ್ತ ಖ್ಯಾತಿಗಳಿಸಿದೆ. ಇದ್ಯಾವುದರೊಂದಿಗೂ ಭಟ್ಕಳ ಹೆಗ್ಗಳಿಕೆ ಸಂಕೇತವಾಗಿ ಜೋಡಣೆ ಯಾರೂ ಮಾಡಿಲ್ಲ. ಆದರೆ ಇಡೀ ದೇಶದ ನಿದ್ದೆಗೆಡಿಸಿದ, ರಕ್ತದೋಕುಳಿ ಹರಿಸಿ, ವಿದೇಶದಲ್ಲೂ ದೇಶದ ಮಾನ ಕಳೆದ ಬಾಂಬ್ ಭೂತಗಳಾದ ರಿಯಾಜ್ ಶಾಬಂದ್ರಿ, ಇಕ್ಬಾಲ್ ಶಾಬಂದ್ರಿ ಮತ್ತು ಅಹ್ಮದ್ (ಯಾಸೀನ್) ಸಿದ್ದಿಬಾಪಾನ ಹೆಸರಿನ ಜತೆಗೆ ಭಟ್ಕಳ ಭಯೋತ್ಪಾದನೆ-ಪಾತಕದ ಪ್ರತೀಕವಾಗಿ ಸೇರಿಕೊಂಡಿದೆ.



ನವಯತ್ ಮುಸ್ಲಿಮರು

ದುಷ್ಕರೊಂದಿಗೆ ಸೇರಿಸಲ್ಪಟ್ಟಿರುವ ಭಟ್ಕಳ ಸ್ಥಳೀಯ ನಿಷ್ಪಾಪಿಗಳಿಗೆ ಮಾಡಿರುವ ಕಷ್ಟ-ನಷ್ಟ-ನೋವು-ಅಪಮಾನ-ಉದ್ಯೋಗ ಹಾನಿಯ ಕತೆ ಒಂದೆರಡಲ್ಲ. ಭಟ್ಕಳದ ಬೆಳವಣಿಗೆಯಲ್ಲಿ ಶಹರದಲ್ಲಿರುವ ನವಾಯತರ ಕೊಡುಗೆ ಬಹುದೊಡ್ಡದು. ಸುಮಾರು 10 ಸಾವಿರ ಮಂದಿ ಉದ್ಯೋಗ-ವ್ಯಾಪಾರ ನಿಮಿತ್ತ ಅರಬ್ ದೇಶದಲ್ಲಿದ್ದಾರೆ. ಉತ್ತರ ಕನ್ನಡದ ಕೊಂಕಣಿ (ಜಿಎಸ್‌ಬಿ)ಗಳಂತೆ ಈ ನವಾಯತರ ಮೂಲ ಕಸುಬು ವ್ಯಾಪಾರ! ವ್ಯಾಪಾರಕ್ಕಾಗಿ ಊರೂರು ಅಲೆವಾಗ ನವಾಯತರು ಈಗ ಶಂಕೆಗೆ ಒಳಗಾಗುತ್ತಿದ್ದಾರೆ. ಉಗ್ರರೆಂಬ ಕುಹಕಕ್ಕೆ ತುತ್ತಾಗುತ್ತಿದ್ದಾರೆ. ಗುಜರಾತ್, ಮುಂಬೈ, ದುಬೈನಿಂದ ಸರಕು-ಸರಂಜಾಮು ತರಿಸಿಕೊಳ್ಳುವಾಗ ಅನಾವಶ್ಯಕ "ಭಟ್ಕಳ" ಎಂಬ ಚುಚ್ಚುಮಾತು ಸಿಡಿದೇಳುತ್ತಿದೆ. ದಂಧೆಗೆ ಧಕ್ಕೆ ಆಗುತ್ತಿದೆ. ಉಗ್ರರೊಂದಿಗೆ ಅಡ್ಡ ಹೆಸರಾಗಿ ಅಂಟಿಕೊಂಡಿರುವ ಭಟ್ಕಳ ಸೌಮ್ಯವಾದಿಗಳಾದ ಭಟ್ಕಳದ ಮಂದಿಗೆ ಮುಜುಗರ ತಂದೊಡ್ಡುತ್ತಿದೆ. ಅದೆಷ್ಟೋ ಜನ "ಈ ಕಾರಣ"ದಿಂದ ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಹಲವರಿಗೆ ಹೊರಗಡೆ ನೌಕರಿ ಸಿಗುತ್ತಿಲ್ಲ, ವ್ಯಾಪಾರ ಮಾಡಲಾಗುತ್ತಿಲ್ಲ.

ಎಲ್ಲೋ ಕೆಲವು ಕಿಡಿಗೇಡಿಗಳಿದ್ದರೆಂದು ಇಡೀ ಭಟ್ಕಳವನ್ನೇ ಉಗ್ರರ ಅಡಗುದಾಣವೆಂದು ಚಡ್ಡಿಗಳು-ಬಿಜೆಪಿಗಳು ಬೊಬ್ಬೆ ಹೊಡೆಯುತ್ತಿವೆ. ಇದವರ ರಾಜಕೀಯ ಲಾಭದ ಕರ್ಮ ಬಿಡಿ. ಈಗ ಉಗ್ರರ ಜೊತೆ ಭಟ್ಕಳ ಸೇರಿರುವುದು ಈ ಹಿಂದೂ ಹರಾಮಿಗಳಿಗೆ ಕಾಲು ಕೆದರಿ ಕಿಚಾಯಿಸಲು ಅಸ್ತ್ರವಾಗಿಹೋಗಿದೆ. ಇದು ಆಳುವವರಿಗೆ, ಅವರ ಸಲಹೆಗಾರ ಅಧಿಕಾರಿ ಪಂಡಿತರಿಗೆ ಅರ್ಥವಾಗದಿರುವುದು ಅಕ್ಷಮ್ಯವೇ ಸರಿ. ಹಾಗೆ ನೋಡಿದರೆ ಐಎಂ ಸಂಸ್ಥಾಪಕ ರಿಯಾಜ್ ಭಟ್ಕಳದಲ್ಲಿದ್ದ ಅವಧಿ ತೀರಾ ಕಡಿಮೆ. ಮೂರ್ನಾಲ್ಕು ವರ್ಷ ಭಟ್ಕಳದಲ್ಲಿ ಐಎಂ ನೆಲೆ ವಿಸ್ತರಿಸಲು ಆತ ವಿಫಲ ಯತ್ನ ಮಾಡಿದ್ದಾನೆ.

ಅವನೊಬ್ಬ ಅಹ್ಮದ್ ಸಿದ್ದಿಬಾಪಾ (ಯಾಸೀನ್) ಈ ರಿಯಾಜ್ ಶಾಬಂ... ಗಾಳಕ್ಕೆ ಸಿಕ್ಕಿಬಲಿಯಾಗಿದ್ದು ಬಿಟ್ಟರೆ ಸ್ಥಳೀಯ ನವಾಯತರು ಆತನ ಪ... ಅವಕಾಶ ಕೊಡಲೇ ಇಲ್ಲ. ಹಾಗಾಗಿಯೇ ಆತ ಭಟ್ಕಳ ಬಿಟ್ಟೋ... ಪರಿಸ್ಥಿತಿ ಬಂತು.

ಈ ನವಾಯತರಿಗೆ ಭಟ್ಕಳದಾಚೆ ಅಂಥ ವೈವಾಹಿಕ-ಸಾಮಾಜಿಕ ಸಂ... ಇಲ್ಲ. ಇವರಿಗೆ ಸ್ಥಳೀಯ ಸ್ವ-ಧರ್ಮೀಯರೆಂದರೆ ವ್ಯಾಮೋಹ ಸ್ವಲ್ಪ ಜಾಸ್ತಿ... ತಮ್ಮವರ ಕಂಡರೆ ಸಲುಗೆ-ಸಂತೋಷದಿಂದ ಸಮೀಪಿಸುತ್ತಾರೆ. ಈ ದೌರ್ಬ... ಕೆಲದಿನಗಳ ಕಾಲ ರಿಯಾಜ್ ಸೋದರರಿಗೆ ತಮ್ಮ ಮತಾಂಧ ಕಾರ್ಯಾ... ನಡೆಸಲು ನೆರವಾಗಿತ್ತು. ರಿಯಾಜ್, ಇಕ್ಬಾಲ್ ಮತ್ತು ಅಹ್ಮದ್ ... ಹಿಡನ್ ಅಜೆಂಡಾದೊಂದಿಗೆ ಅಲ್ಲಲ್ಲಿ ಸಭೆ-ಪ್ರವಚನ-ಧರ್ಮೋಪದೇಶ ನಡೆ... ಸ್ನೇಹ-ಸಂಬಂಧದ ನಂಟಿನಿಂದ ಹೋದವರೂ ಇದ್ದಾರೆ. ಅದರ ... ಗೊತ್ತಾಗಿ ಬೆಚ್ಚಿಬಿದ್ದು ದೂರ ಸರಿದವರೂ ಇದ್ದಾರೆ. ಈ ಖತರ್... ತ್ರಿಮೂರ್ತಿಗಳೊಂದಿಗೆ ಮುಗ್ಧವಾಗಿ ಬೆರೆತು ಮೋಸ್ಟ್ ವಾಂಟೆಡ್ ಆದ... ಇದ್ದಾರೆ; ಪೊಲೀಸರಿಗೆ ಹೆದರಿ ಊರೇ ಬಿಟ್ಟವರಿದ್ದಾರೆ. ಇದನ್ನೇ ಇಟ್ಟುಕೊ... ಭಟ್ಕಳ ಭಯೋತ್ಪಾದಕರ ತರಬೇತಿ ತಾಣ ಎಂದರೆ ಅಮಾಯ... ಏನಾಗಬೇಡ? ಹೊಟ್ಟೆಪಾಡಿಗೆ ಪ್ಲಾಸ್ಟಿಕ್, ಭಜ್ಜಿ-ಮಿರ್ಚಿ ಮಾರುವ ... ಎದುರು ನಿಂತು "ಭಟ್ಕಳ ಬಾಂಬ್ ಹಾಕಿದನಂತೆ.... ಭಟ್ಕಳ ಅರೆಸ್ಟಾದನಂ... ಎಂದು ಕುಹಕವಾಡಿದರೆ ಏನಾದೀತು?

ಅದಿರಲಿ, ಕುಖ್ಯಾತ ಭೂಗತ ದೊರೆ ದಾವೂದ್ ಇಬ್ರಾಹಿಂ, ಛೋ... ರಾಜನ್ ಯಾವ ಊರಿನವರೋ ಗೊತ್ತಿಲ್ಲ; ತೀರಾ ಈಚೆಗೆ ಅರ... ತುಂಡಾನ ಮೂಲದ ಪ್ರಚಾರವಿಲ್ಲ, ಅಹ್ಮದ್ ಸಿದ್ದಿಬಾಪಾನ ಸಹಚರ... ಬಂಧಿಸಲ್ಪಟ್ಟ ಘಾಸಿ, ತಾರೀಕ್ ಹುಟ್ಟೂರು ತಿಳಿಯದು. ಅಷ್ಟೇ ... ಹಿಂದೂ ಭಯೋತ್ಪಾದಕರಾದ ಜಗದೀಶ್ ಕಾರಂತ, ಪ್ರಭಾಕರ ಭಟ್ಟ, ... ಸ್ವಾಧ್ವಿ, ಸನ್ಯಾಸಿಗಳ ಜನ್ಮಸ್ಥಳಗಳೂ ಇಂತಹ "ಮಹಿಮೆ"ಗೆ ಈಡಾ... ಹೀಗಿರುವಾಗ ಭಟ್ಕಳಕ್ಕೆ ಮಾತ್ರ ಏಕೆ ಇಂಥ ದೃಷ್ಟಿ ಬೊಟ್ಟುಗಳ... ಅಣಕಿಸಲಾಗುತ್ತಿದೆ?!

ಉಗ್ರರೊಂದಿಗೆ ಭಟ್ಕಳ ಸೇರಿಸುವುದನ್ನು ಸ್ಥಳೀಯರೀಗ ವಿರೋಧಿಸು... ಅನಾಹುತ ಆಗುವ ಮೊದಲೇ ಜಿಲ್ಲಾಡಳಿತ ಎಚ್ಚೆತ್ತುಕೊಂಡೀತಾ?!



ಮುರುಡೇಶ್ವರ ಬೀಚ್



ಮುರ್ಡೇಶ್ವರಕ್ಕೆ ಹತ್ತಿರವಿರುವ ನೇತ್ರಾಣಿ ನಡುಗಡ್ಡೆ







...ಗ ಬದುಕಿದ್ದಾನೆಂಬುದೇ ಸಮಾಧಾನ"!!



...ದ್ಧ ಬಾಂಬ್ ಮಾಸ್ಟರ್ ಅಹ್ಮದ್ ಸಿದ್ದಿಬಾಪಾ ಯಾನೆ ಯಾಸೀನ್ ...ಂಥವನೇ ಆಗಿರಲಿ; ಭಟ್ಕಳದಲ್ಲಿರುವ ಆತನ ಹೆತ್ತವರು, ...ಟ್ಟಿದವರು, ಕುಟುಂಬಸ್ಥರು ಯಾರದೇ ಉಸಾಬರಿಗೆ ಹೋಗದ ... 2007 ರ ನಂತರ ಮಗನ ಮುಖವೇ ತಾವು ಕಂಡಿಲ್ಲ ...ದ ಆತನ ತಂದೆ ಜರಾರ್ ಸಿದ್ದಿಬಾಪಾ. ತನ್ನ ಮಗನನ್ನು ಪೊಲೀಸರು ...ಟರ್ ನೆಪದಲ್ಲಿ ಎಲ್ಲಿ ಕೊಂದೆಸೆಯುತ್ತಾರೋ ಎಂಬ ಆತಂಕದಲ್ಲಿ ...ಡುತ್ತಿದ್ದರು ಅಥವಾ ಈಗಾಗಲೇ ಆತ ಅಂಥದೊಂದು ನಕಲಿ ...ಟರ್‌ನಲ್ಲಿ ಹತನಾಗಿರಲೂಬಹುದೆಂದುಕೊಂಡಿದ್ದರು.

...ಅಹ್ಮದ್‌ನನ್ನು ಬಂಧಿಸಿದಾಗ ಟಿವಿ ಚಾನೆಲ್‌ಗಳಲ್ಲಿ ಈ ಸುದ್ದಿ ... "ಯಾಹ್ ಅಲ್ಲಾ... ಬೇಟಾ ಬಾಚ್‌ಗಯಾ!" ಎಂದವರು ...ಬಿಟ್ಟಿದ್ದಾರೆ! ಪೊಲೀಸರು ಅಧಿಕೃತವಾಗೇ ಮಗನ ಬಂಧನದ ...ಸಿದಾಗಂತೂ ಖುಷಿಗೊಂಡಿದ್ದಾರೆ; ಆತನ ಭೇಟಿಯಾಗುವ ಅವಕಾಶ ...ಇದು ನಿರುಮ್ಮಳರಾಗಿದ್ದಾರೆ. "ನಮಗೆ ದೇಶದ ನ್ಯಾಯಾಂಗದ ...ದ್ದ ಭರವಸೆಯಿದೆ... ನಾವು ಕಾನೂನು ಹೋರಾಟಕ್ಕೆ ಸಿದ್ಧರಿದ್ದೇವೆ... ...ಹುಡುಗ ತಪ್ಪು ಮಾಡಿದ್ದರೆ ಆತನಿಗೆ ಶಿಕ್ಷೆಯಾಗಲಿ... ಆರೋಪಗಳು ...ಗುವ ಮೊದಲೇ ಅಪರಾಧಿಯೆಂದು ಬಿಂಬಿಸಿದರೆ ಹೇಗೆ? ...ಮಗಳಲ್ಲಿ ಬರುತ್ತಿರುವ ವರದಿಗಳು ಉತ್ಪ್ರೇಕ್ಷೆಯಿಂದ ಕೂಡಿವೆ.... ಇದು ಸಲ್ಲದು...." ಎಂದು ಅಹ್ಮದ್‌ನ ... ಅಲವತ್ತುಕೊಳ್ಳುತ್ತಿದ್ದಾರೆ.

...ಡಬಾರದು ಮಾಡಿರುವ ಮಗನ ಹೆತ್ತೊಡಲು ಇನ್ನೇನು ಹೇಳಲು ಸಾಧ್ಯ? ಧರ್ಮೋನ್ಮಾದ ಗೊಡವೆಗೆಂದೂ ...ದ ಸುಸಂಸ್ಕೃತ ಇಸ್ಲಾಮ್ ಅನುಯಾಯಿಗಳಾದ ಈ ತಾಯ್ತಂದೆಯರ ಸಂಕಟ ಹೇಳತೀರದು!

...ಅನ್ಯಾಯ ಮಾಡುತ್ತಿದೆ ಎಂಬ ಭಾವನೆ ಬರುತ್ತದೆ. 2001ರ ಕಾಲಘಟ್ಟ. ಅಮೆರಿಕೆಯನ್ನು ಹೆಡೆ ...ಟ್ಟಿ ಮಲಗಿಸಬೇಕೆಂಬ ಅಸಹನೆ ಆತನಲ್ಲಿ ...ತ್ತದೆ. ಜಿಹಾದಿ ತತ್ವಗಳು ಆಕರ್ಷಿಸುತ್ತವೆ. ಭಟ್ಕಳದಲ್ಲಿ ...ಜೆನ 'ಜಿಹಾದಿ ಮುಲ್ಲಾ' ಎಂದೇ ...ಲ್ಪಡುತ್ತಿದ್ದ ಗುರುಗಳ ಶಿಷ್ಯತ್ವ ...ಡುತ್ತಾನೆ. ಈ ಗುರುವಿಗೆ ಒಂದಿಷ್ಟು ...-ಮತಾಂಧರ ಸಂಪರ್ಕವೂ ಇತ್ತು. ...ಉಪದೇಶದಿಂದ ಅಹ್ಮದ್ ಬರೀ ಒಂದೇ ...ಲ್ಲಿ 'ವಿಪರೀತ' ಬದಲಾಗಿ ಬಿಡುತ್ತಾನೆ. ... ಬದಲಾವಣೆ ಸ್ವತಃ ಗುರುವನ್ನೇ ...ಸುತ್ತದೆ. ಅವಸರಕ್ಕೆ ಬಿದ್ದಿರುವ ...ಸಿಂದ ತಮಗೆ ಅಪಾಯವೆಂದು ಬಗೆದ ...ಆತನ ಸಾವಕಾಶ ದೂರ ಮಾಡುತ್ತಾರೆ. ...ರ್ಮೋಪದೇಶಕ್ಕೆ ಹೋಗುತ್ತಿದ್ದಾಗ ...ಗೆ ನಾಲ್ವರು ಬಿಹಾರಿ ವಿದ್ಯಾರ್ಥಿಗಳ ದೋಸ್ತಿ ...ತ್ತದೆ. ಭಟ್ಕಳದ ಅಂಜುಮನ್ ಇಂಜಿನಿಯರಿಂಗ್ ...ನಲ್ಲಿ ಕಲಿಯುತ್ತಿದ್ದ ಖತರ್‌ನಾಕ್ ಹುಡುಗರಿವರು. ...'ಸಿಮಿ'ಯ ಸಕ್ರಿಯ ಸದಸ್ಯರು. ಇವರಲ್ಲಿ ಥಾಸಿ



ಅಹ್ಮದ್‌ನನ್ನು ಪೊಲೀಸರು ಬಂಧಿಸಿದ್ದಾರೆ. ಆಗ 'ಸಿಮಿ' ಸ್ವಿಂಗ್‌ನಲ್ಲಿದ್ದ ಕಾಲ. ಬಿಹಾರದಿಂದ ಭಟ್ಕಳಕ್ಕೆ ಮತ್ತೊಂದಿಷ್ಟು ಸಿಮಿ ಆಕ್ಟೀವಿಸ್ಟ್‌ಗಳ ತಂದು ಸ್ಥಳೀಯವಾಗಿ ಸಂಘಟನೆಯನ್ನು ಮಜಬೂತಾಗಿ ಕಟ್ಟುವ ಇರಾದೆ ಈ ಬಿಹಾರಿ ಪೋರರಿಗಿತ್ತು. ಆದರೆ ಭಟ್ಕಳದ ನವಾಯತರು ಇದಕ್ಕೆ ಅವಕಾಶ ಕೊಡಲಿಲ್ಲ. ಆದರೆ ಅಹ್ಮದ್ ಸಿದ್ದಿಬಾಪಾ ಮತ್ತವನ ಬಿಹಾರಿ ಸಂಗಾತಿಗಳು ಹಗಲಿರುಳೂ ಕನವರಿಸುತ್ತಿದ್ದುದು ಒಂದೇ ಸ್ಲೋಗನ್ "ವಿ ಹ್ಯಾವ್ ಟು ಫೈಟ್ ಅಗೈನ್ಸ್ಟ್ ಅಮೆರಿಕ...!" ಇದು ಅಹ್ಮದ್ ಯಾನೆ ಯಾಸೀನ್‌ನನ್ನು ಭಯೋತ್ಪಾದಕತೆಯತ್ತ ಕರೆದೊಯ್ದ ಮೊಟ್ಟ ಮೊದಲ ತಿರುವು!!

ಆನಂತರ ಅಹ್ಮದ್‌ಗೆ 'ಇಂಡಿಯನ್ ಮುಜಾಹಿದೀನ್' ಎಂಬ ಉಗ್ರೋನ್ಮಾದದ ಸಂಘಟನೆಯ ಶೂರರ ಸಂಪರ್ಕ ಸಿಗುತ್ತದೆ. ಮುಂಬೈನಲ್ಲಿ ಆರ್-ಎನ್ (ರಿಯಾಜ್-ನಾಸೀರ್) ಗ್ಯಾಂಗ್ ಐಎಂ-ಇಂಡಿಯನ್ ಮುಜಾಹಿದೀನ್ ಕಟ್ಟಿದ್ದೇನೋ ನಿಜ. ಆದರೆ ಐಎಂ ವ್ಯವಸ್ಥಿತವಾಗಿ ಬೆಳೆಸಿದ್ದು ಮಾತ್ರ ಭಟ್ಕಳದ ನವಾಯತ ಹುಡುಗರಾದ ರಿಯಾಜ್ ಶಾ ಬಂಧ್ರಿ ಮತ್ತು ಇಕ್ಬಾಲ್ ಶಾ ಬಂಧ್ರಿ. ಈ ಅಣ್ಣ-ತಮ್ಮರ ಬೆನ್ನಿಗೆ ಮುಂಬೈ ಪೊಲೀಸರು ಬಿದ್ದಾಗ ಅವರು ಮೂಲ ಊರಾದ ಭಟ್ಕಳಕ್ಕೆ ಪಲಾಯನ ಮಾಡುತ್ತಾರೆ. ಭಟ್ಕಳದಲ್ಲಿ ಭೂಗತರಾದ ಈ ಸಹೋದರರು ಸ್ಥಳೀಯವಾಗಿ ಐಎಂ ವಿಸ್ತರಿಸಲು ಸ್ಕೆಚ್ ಹಾಕುತ್ತಾರೆ. ಹಿಂದೂತ್ವದ ಕರ್ಮಭೂಮಿ ಎನಿಸಿದ್ದ ಭಟ್ಕಳದ 'ಧರ್ಮಕಾರಣ' ಸಹಜವಾಗೇ ಈ ಜಿಹಾದಿ ಹುಡುಗರಲ್ಲಿ ಕೋಮು ಪ್ರಚೋದನೆ ಕೆರಳಿಸಿತ್ತು! ಆಗ ರಿಯಾಜ್ ಬ್ರದರ್ಸ್‌ಗೆ ಸಿಕ್ಕವನೇ ಈ ಅಹ್ಮದ್ ಸಿದ್ದಿಬಾಪಾ. ರಿಯಾಜ್-ಇಕ್ಬಾಲ್ ಗರಡಿಯಲ್ಲಿ ಪಳಗಿದ ಅಹ್ಮದ್ ಅಪ್ಪಟ ಆತಂಕವಾದಿಯಾಗಿ ಮಾರ್ಪಡುತ್ತಾನೆ. ಅವರ ಬಲಗೈ ಬಂಟನಾಗಿ ಹೋಗುತ್ತಾನೆ. ಶಾ ಬಂಧ್ರಿ ಸೋದರರು ಕರಾಚಿಯಲ್ಲಿ ತಲೆ ಮರೆಸಿಕೊಂಡ ನಂತರ ಅಹ್ಮದ್‌ನ ಹೆಗಲಿಗೆ ಐಎಂನ ಸಕಲ ಆರ್ಥಿಕ-ವಿಧ್ವಂಸಕ ಚಟುವಟಿಕೆ ಹೊಣೆಯೇರುತ್ತದೆ! ಅಹ್ಮದ್ ಐಎಂನಲ್ಲಿ ಅದೆಷ್ಟು ಪ್ರಬಲವಾಗುತ್ತಾನೆಂದರೆ, ಶಾ ಬಂಧ್ರಿ ಬ್ರದರ್ಸ್ ನಂತರದ ಥರ್ಡ್ ಕ್ಯಾಪ್ಟನಿಕೆ ಆತನದಾಗುತ್ತದೆ! ಆಗವನಿಗೆ ಕೇವಲ 21 ವರ್ಷ ವಯಸ್ಸು!

ಅಹ್ಮದ್‌ನ ಅಪ್ಪ ಜರಾರ್ ಸಿದ್ದಿಬಾಪಾಗೆ ಮಗನ ಬಗ್ಗೆ ಏನೇನೋ ಅನುಮಾನ ಶುರುವಾಗುತ್ತದೆ; ಅದ್ಯಾಕೋ ಹುಡುಗ ಹಾದಿಯ ಮೇಲಿಲ್ಲ. ಎಲ್ಲೆಲ್ಲೋ ಅಡ್ಡಾದಿಡ್ಡಿ ತಿರುಗುತ್ತಿದ್ದಾನೆ ಅನ್ನಿಸುತ್ತದೆ. ಧರ್ಮಾಂಧತೆಯ ಗೊಡವೆಗೆ ಹೋಗದ ಅಹ್ಮದ್‌ನ ತಂದೆ-ತಾಯಿ ಸೌಮ್ಯ ಸ್ವಭಾವದವರು. ಹೀಗಾಗಿ ಮಗನನ್ನು ದಾರಿಗೆ ತರಲು ದುಬೈಗೆ ಕರೆದೊಯ್ಯುತ್ತಾರೆ. ಉದ್ಯೋಗವೊಂದು ಹಾಕಿ ಕೊಡುತ್ತಾರೆ. ಆದರೆ ಅಹ್ಮದ್‌ಗೆ ಜಿಹಾದಿ ಸೆಳೆತದ ನಡುವೆ ಜೀವನ-ದಂಧೆ ಯಾವುದು ಬೇಕಾಗುವುದಿಲ್ಲ. ಈ ವಿಷಯವಾಗೇ ತಂದೆ-ಮಗನ ನಡುವೆ ಜಗಳವೂ ಆಗುತ್ತದೆ. ಕಿರಿಕ್ ಮಾಡಿಕೊಂಡು ಮನೆಯಿಂದ ಓಡಿಹೋಗುವ ಅಹ್ಮದ್‌ನ ಸಿಕ್ಕುಗಳು ಪಾಪದ ಪಾಲಕರಿಗೆ ಇಂದಿಗೂ ಅರ್ಥವೇ ಆಗಿಲ್ಲ!

ಮಹಾರಾಷ್ಟ್ರದ ಪುಣೆ, ಮಂಗಳೂರಿನ ಉಳ್ಳಾಲ ಮತ್ತು ಪಾಂಡೇಶ್ವರದ ಸುಭಾಷ್ ನಗರ ಹಾಗು ಉತ್ತರ ಕನ್ನಡದ ಭಟ್ಕಳವನ್ನು ಅಹ್ಮದ್ ಕೇಂದ್ರಗಳನ್ನಾಗಿ ಮಾಡಿಕೊಂಡು ಐಎಂ ಕಾರ್ಯಾಚರಣೆ ನಡೆಸುತ್ತಿದ್ದ. ಇಡೀ ಭಾರತವನ್ನು



ಸುತ್ತುತ್ತಿದ್ದ. ಪಾಕಿಸ್ತಾನ್-ಬಾಂಗ್ಲಾದೇಶ-ನೇಪಾಳಕ್ಕೆ ಆಗಾಗ ಹೋಗಿಬರುತ್ತಿದ್ದ ಮುಂಬೈನ ಭೂ ಉದ್ಯಮಿ ಉಳ್ಳಾಲದಲ್ಲಿ ಖರೀದಿಸಿದ್ದ ಜಾಗದ ಸೈಟ್ ವ್ಯವಹಾರದಲ್ಲಿ ಅಹ್ಮದ್ ರಿಯಲ್ ಎಸ್ಟೇಟ್ ದಂಧೆದಾರನಂತೆ ತೊಡಗಿಕೊಂಡು ಐಎಂ ಪೋಷಣೆ ಮಾಡಿದ್ದ. ಹಾಗೇ ಕೊಪ್ಪದ ಭದ್ರಾ ಕಾಡಿನಲ್ಲೂ ಅವಿತುಕೊಂಡಿದ್ದ. ಆದರೆ ಅಹ್ಮದ್ ಮೊಟ್ಟ ಮೊದಲು ಭಯೋತ್ಪಾದಕನಾಗಿ ಕುಖ್ಯಾತಿ ಗಳಿಸಿದ್ದು 2008ರಲ್ಲಿ.

ಆಗ ಸೂರತ್, ಅಹ್ಮದಾಬಾದ್ ಸೇರಿದಂತೆ ಬರೋಬ್ಬರಿ 24 ಕಡೆ ಸರಣಿ ಬಾಂಬ್ ಸ್ಫೋಟ ಆಗಿತ್ತು. ಆ ಬಾಂಬುಗಳಿಗೆ ಕರಾವಳಿಯ ಉಡುಪಿಯಿಂದಲೇ ಸ್ಫೋಟಕ ಸಾಮಗ್ರಿ ರವಾನೆಯಾಗಿದೆ ಎಂಬ ಗುಲ್ಲೆದ್ದಿತ್ತು. ಹಾಗೇ ಅಹ್ಮದ್‌ನ ಕರಾಳ ಇತಿಹಾಸ ಬೆಳೆಯುತ್ತಲೇ ಹೋಯ್ತು. ಹತ್ತಾರು ಸ್ಫೋಟಗಳಲ್ಲಿ, ನೂರಾರು ಸಾವುನೋವುಗಳಲ್ಲಿ ಅಹ್ಮದ್ ಸಿದ್ದಿಬಾಪಾ ಕೈವಾಡದ ಶಂಕೆ ಶುರುವಾಯ್ತು. 2010ರ ಪುಣೆಯ ಜರ್ಮನ್ ಬೇಕರಿ ಬಾಂಬ್ ಬ್ಲಾಸ್ಟ್ ತನಿಖೆ ಹೊತ್ತಲ್ಲಿ ಸಿಸಿ ಕ್ಯಾಮರಾದಲ್ಲಿ ಅಹ್ಮದ್‌ನ ಚಲನವಲನ ದಾಖಲಾಗಿತ್ತು. ಆಗಲೇ ಮಹಾರಾಷ್ಟ್ರ ಪೊಲೀಸರು ಅಹ್ಮದ್‌ನಿಗೆ 'ಯಾಸೀನ್ ಭಟ್ಕಳ್' ಎಂದು ನಾಮಕರಣ ಮಾಡಿದ್ದು. ಅಷ್ಟೇ ಅಲ್ಲ, ಅಹ್ಮದನಂತೆಯೇ ಕಾಣುತ್ತಿದ್ದ ಆತನ ತಮ್ಮ ಸಮದ್‌ನನ್ನು ಮಹಾರಾಷ್ಟ್ರ ಪೊಲೀಸರು ಬಂಧಿಸುವ ಎಡವಟ್ಟೂ ಮಾಡಿದ್ದರು! ನಂತರ ಸಮದ್ ನಿರಪರಾಧಿ; ಆತ ಅಹ್ಮದ್ ಅಲ್ಲವೆಂದು ಸಾಬೀತಾಗಿತ್ತು. ಮಹಾರಾಷ್ಟ್ರ ಪೊಲೀಸರಂತೂ ನಗೆಪಾಟಲಿಗೀಡಾಗಿದ್ದರು.

ಹಾಗಂತ ದೇಶದ ತನಿಖಾ ತಂಡಗಳೇನೂ ಕೈಚೆಲ್ಲಿ ಕೂಡಿರಲಿಲ್ಲ. ಅಹ್ಮದ್ ಯಾನೆ ಯಾಸೀನ್‌ಗಾಗಿ ಬಲೆ ಬೀಸಿಯೇ ಕೂತಿದ್ದರು. ದೆಹಲಿ ಬಾಂಬ್ ಸ್ಫೋಟ ನಡೆದಾಗ ಪೊಲೀಸರು ಮಾಡಿದ ದಾಳಿಯಲ್ಲಿ ಆತ ಸ್ವಲ್ಪದರಲ್ಲಿ ತಪ್ಪಿಸಿಕೊಂಡಿದ್ದ. ಹೈದರಾಬಾದಿನ ದಿಲ್‌ಸುಖ್ ನಗರದಲ್ಲಿ ಬಾಂಬ್ ಬಿದ್ದಾಗ ಅಹ್ಮದ್‌ನ ಹೆಸರು ಮತ್ತೆ ಕೇಳಿಬಂದಿತ್ತು. ಸೈಕಲ್ ಮೇಲೆ ಬಂದು ಬಾಂಬಿಟ್ಟವನೇ ಈ ಅಹ್ಮದ್ ಎಂಬ ಸಂಶಯ ತನಿಖಾ ತಂಡಗಳದಾಗಿತ್ತು. ಕಳೆದ ಆರು ತಿಂಗಳಿಂದ ಈತನ ಬೇಟೆಗೆ ಕೇಂದ್ರ ತನಿಖಾ ತಂಡಗಳು ಕರಾರುವಾಕ್ಕಾದ ಪ್ಲಾನ್ ಹಾಕಿಕೊಂಡಿದ್ದವು. ಒಂದು ತಿಂಗಳ ಹಿಂದೆಯೇ ಆತ ನೇಪಾಳ-ಬಿಹಾರ ಗಡಿಯಲ್ಲಿ ಸುಳಿದಾಡುವ ಜಾಡು ಪೊಲೀಸರಿಗೆ ಸಿಕ್ಕಿತ್ತು. ಬಾಂಗ್ಲಾಕ್ಕೆ ಹೋಗುವ ಸಿದ್ಧತೆಯಲ್ಲಿದ್ದ ಯಾಸೀನ್‌ನನ್ನು ಬಂಧಿಸಲಾಯ್ತು.

ವಿಪರ್ಯಾಸ ನೋಡಿ: ಅಮೆರಿಕವನ್ನೇ ಬಡಿದು ಮಲಗಿಸುವ ಜಿದ್ದಿನಿಂದ ದಾರಿ ತಪ್ಪಿದ ಹುಡುಗ ಅಹ್ಮದ್ ಸಿದ್ದಿಬಾಪಾ ಆತಂಕವಾದಿ ಯಾಸೀನ್ ಭಟ್ಕಳನಾಗಿ ಸ್ವ-ದೇಶ ಭಾರತಕ್ಕೇ ಕಂಟಕಕಾರಿಯಾಗಿ ಹೋಗಿದ್ದ. ತರಹೇವಾರಿ ಹೆಸರುಗಳಿಂದ ಊರೂರು ಸುತ್ತುತ್ತ ಪೊಲೀಸರನ್ನು ಯಾಮಾರಿಸುತ್ತಿದ್ದ. ಅಹ್ಮದ್ ಯಾನೆ ಯಾಸೀನ್ ಈ ಬಾರಿಯೂ ತನ್ನನ್ನು ಹಿಡಿಯಲು ಬಂದವರಿಗೆ ಹಾಕೊಬ್ಬ ಇಂಜಿನಿಯರ್ ಎಂದು ಹೇಳಿದ್ದಾನೆ. ಆಗೆ ಯುನಾನಿ ವೈದ್ಯ ಎಂದಿದ್ದಾನೆ. ಆದರೆ ಈ ಬಾರಿ ಆತನ 'ಆಟ' ನಡೆಯಲಿಲ್ಲ!!

● ನಹುಷ



ಇಂಡಿಯನ್ ಮುಜಾಹಿದೀನ್ (ಐಎಂ)ನ ಮೂರನೇ ಆಯಕಟ್ಟಿನ ಸ್ಥಾನಕ್ಕೆ ತನ್ನ 21ನೇ ವಯಸ್ಸಿಗೆ ತಲುಪಿದ್ದ ಅಹ್ಮದ್ ಸಿದ್ದಿಬಾಪಾ ಯಾನೆ ಯಾಸೀನ್ ಭಟ್ಕಳ್ ಬಾಂಬ್ ಇಡುವುದರಲ್ಲಿ, ತಯಾರಿಕೆಯಲ್ಲಿ ಸಿದ್ಧಹಸ್ತ. ಖತರ್‌ನಾಕ್ ಉಗ್ರ ಕರೀಮ್ ಲಾಲ್ ತುಂಡಾ ಮತ್ತು ಅಹ್ಮದ್ ಬಾಂಬ್ ಬ್ಲಾಸ್ಟ್ ಸ್ಕೆಚ್‌ಗಳನ್ನು ಕರಾರುವಾಕ್ಕಾಗಿ ಹಾಕುತ್ತಿದ್ದರು. 2006ರಲ್ಲಿ ದುಬೈನಲ್ಲಿ ಮತ್ತೊಂದು ಭಯೋತ್ಪಾದಕ ಗ್ಯಾಂಗ್ ಅಲ್‌ಕೈದಾ ದೊರೆಗಳೊಂದಿಗೂ ಈತ ಸಂಪರ್ಕ ಸಾಧಿಸಿಕೊಂಡಿದ್ದ. ಅದರ ಮುಖಂಡನೊಬ್ಬನನ್ನು ಆತ ದುಬೈನಲ್ಲಿ ಭೇಟಿಯಾಗಿ ಚರ್ಚಿಸಿದ್ದ ಕೂಡ.


ಈತ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸುವ ಕಲೆ ಕರಗತ ಮಾಡಿಕೊಂಡಿದ್ದ. ತನ್ನ ನಿಜನಾಮ ಮರೆಮಾಚಿ ಡಾ. ಇಮ್ರಾನ್, ಆಸೀಫ್, ಶಾರುಕ್, ಜದಾರ್... ಮುಂತಾದ ಹೆಸರಲ್ಲಿ ಚಲಾವಣೆಯಲ್ಲಿರುತ್ತಿದ್ದ. ಹಿಂದೆರಡು ಬಾರಿ ಆತ ಅರೆಸ್ಟ್. ಆದರೂ ನಕಲಿ ಹೆಸರಿಂದ ಬಚಾವಾಗಿದ್ದ. ಕೊಲ್ಕತ್ತಾದಲ್ಲಿ ನಕಲಿ ನೋಟು ಚಲಾವಣೆ ಕೇಸಲ್ಲಿ ಅಂದರ್ ಆಗಿದ್ದ. ಆಗಾತ ತಾನು 'ಶಾರುಕ್ ಖಾನ್' ಎಂದು ಗುರುತಿನ ಚೀಟಿ ತೋರಿಸಿ ಬಿಡುಗಡೆಗೊಂಡಿದ್ದ. ಹಾಗೆಯೇ ಚೆನ್ನೈನಲ್ಲೊಮ್ಮೆ ಪೊಲೀಸರಿಗೆ ದಾರಿಗೆಡಿಸಿದ್ದ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಬಾಂಬ್ ಬೀಳುವ ಕೆಲವೇ ಗಂಟೆ ಮೊದಲು ಈತ ಪ್ರಯಾಣಿಸುತ್ತಿದ್ದ ರಿಕ್ಷಾವನ್ನು ಪೊಲೀಸರು ತಪಾಸಿಸಿದ್ದರು. ಆದರೆ ಯಾಸೀನ್‌ನ ಗುರುತು ಹಿಡಿಯಲಾಗಿರಲಿಲ್ಲ.

...ಪಳಗಿದ ಉಗ್ರ ಪ್ರತಾಪಿ



...ಳದಲ್ಲಿ ಎಸ್‌ಎಸ್‌ಎಲ್‌ಸಿ ಫೇಲಾಗಿ ಓಡಾಡುವಾಗಲೇ 'ಜಿಹಾದಿ'ಯಾಗುವ ...ರ್ಧಾರಕ್ಕೆ ಅಹ್ಮದ್ ಬಂದುಬಿಟ್ಟಿದ್ದ. ಅಮೆರಿಕ ಆತನ ಟಾರ್ಗೆಟ್ ಆಗಿತ್ತು; ...ರಿಗೇನೋ ಅನ್ಯಾಯ-ತೊಂದರೆ ಧರ್ಮದ ನೆಲೆಯಲ್ಲಾಗುತ್ತಿದೆ ಎಂದಾತ ...ಡಿದ್ದ! ಉಗ್ರವಾದ ಬೇಡವೆಂದು 'ಜಿಹಾದಿ ಗುರು' ಹೇಳಿದರೂ ಆತ ...ಮನಸ್ಥಿತಿಯಲ್ಲಿರಲಿಲ್ಲ. ಭಟ್ಕಳದ ಹಳೆ ಬಸ್ ನಿಲ್ದಾಣದ ಬಳಿ ಇದ್ದ ಇಸ್ಲಾಮಿಕ್ ...ಕ್ಕೆ ಆತ ಕುರಾನ್, ಹದೀಸ್ ಓದಲು ಆಗಾಗ ಹೋಗುತ್ತಿದ್ದ. ಹತ್ತಿರದಲ್ಲೇ ...ಮಿಕ್ ಧರ್ಮಗುರು ಒಬ್ಬರ ಅಂಗಡಿಗೂ ಹೋಗಿಬರುತ್ತಿದ್ದ. ಅಲ್ಲವನಿಗೆ ಬಿಹಾರದಿಂದ ಭಟ್ಕಳ ಇಂಜಿನಿಯರಿಂಗ್ ...ಗೆ ಬಂದಿದ್ದ ಅಡ್ಡಕಸುಬಿ ವಿದ್ಯಾರ್ಥಿಗಳ ಸಹವಾಸವೂ ಸಿಗುತ್ತದೆ. 'ಗುರು' ನೋಡುನೋಡುತ್ತಿದ್ದಂತೆಯೇ ... ಆತಂಕವಾದಿ ಚಹರೆ ಬೆಳೆಸಿಕೊಂಡು ಬಿಟ್ಟಿದ್ದ.

...ದಿಂದ ಬೇಸರಗೊಂಡ ಗುರು 'ಇದು ತಪ್ಪು' ಎಂದು ಸರಿದಾರಿಗೆ ತರಲು ನೋಡಿದ್ದರು. ಆಗಾತ ಏನೆಂದ ... "ನೀವು ಮಹಾ ಪುಕ್ಕಲು. ನಿಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲ... ಇಸ್ಲಾಮ್‌ಗೆ ನಿಮ್ಮಿಂದ ಪ್ರಯೋಜನವಿಲ್ಲ..." ...ದಿದ್ದ! ಒಂದು ತನಿಖಾ ಸಂಸ್ಥೆ ಮೂಲದ ಪ್ರಕಾರ ಅಹ್ಮದ್ ಅಫಘಾನಿಸ್ತಾನಕ್ಕೆ ಹೋಗಿ ಉಗ್ರ ಸಂಘಟನೆಗಳಿಂದ ...ತರಬೇತಿ ಪಡೆದು ಬಂದಿದ್ದ! ಕರ್ನಾಟಕದ ಚಿಕ್ಕಮಗಳೂರಿನ ಭದ್ರಾ ಅರಣ್ಯದಲ್ಲಿ ನಡೆದ ಉಗ್ರ ತರಬೇತಿಯಲ್ಲಿ ಭಾಗವಹಿಸಿದ್ದ. ಐಎಂ ಸಂಸ್ಥಾಪಕರಾದ ಭಟ್ಕಳದ ಶಾ ಬಂಧ್ರಿ ಸೋದರರು ಕರಾಚಿಯಲ್ಲಿ ತಲೆ ಮರೆಸಿಕೊಂಡ ನಂತರ ಅಹ್ಮದ್‌ನೇ ಬಾಸ್‌ನಂತಾಗಿದ್ದ. ಗುರುಗಳ ನಿರ್ದೇಶನ ಚಾಚೂತಪ್ಪದೆ ನಿಭಾಯಿಸುತ್ತಿದ್ದ. ಬಾಂಬ್ ಸ್ಫೋಟಕ್ಕೆ ಸಕಲ ಸಿದ್ಧತೆ ಮಾಡಿ ಮುಗಿಸಿ ಬಿಹಾರ-ನೇಪಾಳ ಗಡಿಯ ಗೋರಖ್‌ಪುರ ಸೇರುತ್ತಿದ್ದ. ಅಲ್ಲಿಂದ ಬಾಂಗ್ಲಾಕ್ಕೆ ನುಸುಳುತ್ತಿದ್ದ. ಅಲ್ಲಿ ಹಣ ಒಟ್ಟುಗೂಡಿಸುತ್ತಿದ್ದ. ಪುಣೆಯ ಜರ್ಮನ್ ಬೇಕರಿ ಬ್ಲಾಸ್ಟ್, ದೆಹಲಿ ಹೈಕೋರ್ಟ್ ಸ್ಫೋಟ, ಮುಂಬೈ ಸ್ಫೋಟ, ಹೈದರಾಬಾದ್ ಬಾಂಬ್ ಸ್ಫೋಟ, 2010ರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಾದ ಬಾಂಬ್ ಸ್ಫೋಟ, 2008ರಲ್ಲಿ ಅಹಮದಾಬಾದ್‌ನಲ್ಲಿ 70 ನಿಮಿಷದ ಅಂತರದಲ್ಲಿ 20 ಕಡೆಯಾದ ಬಾಂಬ್ ಬ್ಲಾಸ್ಟ್‌ಗಳ ರೂವಾರಿ ಈ ಅಹ್ಮದ್ ಯಾನೆ ಯಾಸೀನ್!!



'ಸತ್ಯಾಗ್ರಹ'ವೊಂದರ ಸೋಲು-ಗೆಲುವು

'ರಾಜ್‌ನೀತಿ', 'ಆರಕ್ಷಣ್', 'ಚಕ್ರವ್ಯೂಹ್' ಮೊದಲಾದ ಚಿತ್ರಗಳನ್ನು ನೋಡಿದವರಿಗೆ ಪ್ರಕಾಶ್ ಝಾ ಅವರ 'ಸತ್ಯಾಗ್ರಹ' ಚಿತ್ರದ ಕುರಿತು ಊಹಿಸುವುದು ಕಷ್ಟವಾಗದು. ಮೀಸಲಾತಿ, ನಕ್ಸಲೀಯ ಸಮಸ್ಯೆ ಮೊದಲಾದವುಗಳನ್ನು ಅಭಿನಂದನಾರ್ಹರಾಗುತ್ತಾರೆ.' 'ಸತ್ಯಾಗ್ರಹ'ವನ್ನು ಕೇವಲ ಒಂದೇ ಕಣ್ಣಿನಿಂದ ನೋಡದೆ, ಅದರ ದುರಂತವನ್ನೂ ಕಟ್ಟಿ ಕೊಡಲು ಝಾ ಇಲ್ಲಿ ಪ್ರಯತ್ನಿಸಿದ್ದಾರೆ.

ದ್ವಾರಕಾ ಆನಂದ್ (ಅಮಿತಾಭ್ ಬಚ್ಚನ್) ಎನ್ನುವ



ತಮ್ಮ ಕಮರ್ಷಿಯಲ್ ಪಾಕಕ್ಕೆ ಒಗ್ಗುವಂತೆ ಅತ್ಯಾಕರ್ಷಕವಾಗಿ ಕಟ್ಟಿಕೊಡುವ ಝಾ ಅವರ ಚಿತ್ರಗಳ ಮೂಲಕ ಸಾಮಾಜಿಕ ಚಳವಳಿಗಳ ಕುರಿತಂತೆ ಚರ್ಚೆಯನ್ನು ನಿರೀಕ್ಷಿಸುವುದು ತಪ್ಪಾಗುತ್ತದೆ. ಚಳವಳಿ, ಹೋರಾಟ ಇಂದು ಯುವಕರೊಳಗೆ ತಮ್ಮೊಳಗಿನಿಂದ ಹುಟ್ಟಿಕೊಳ್ಳದೆ ಫೇಸ್‌ಬುಕ್, ಟ್ವಿಟ್ಟರ್‌ಗಳ ಆಕರ್ಷಣೆಗಳಿಗೆ ಸೀಮಿತವಾಗುತ್ತಿದೆ. 'ಚೆ' ಮುಖವುಳ್ಳ ಟೀ ಶರ್ಟ್‌ನಂತೆ ಅದೊಂದು ಫ್ಯಾಶನ್‌ನ ಭಾಗವಾಗಿದೆ. ಕ್ಯಾಂಡಲ್‌ಗಳನ್ನು ಹಚ್ಚಿ ಮೆರವಣಿಗೆಯಲ್ಲಿ ಸಾಗುತ್ತಾ ಮೊಂಬತ್ತಿ ಕರಗುವ ಮೊದಲೇ ಹೋರಾಟದ ಉತ್ಸಾಹವನ್ನು ಕಳೆದುಕೊಳ್ಳುವ ಯುವ ಪೀಳಿಗೆಯಿಂದ ಹುಟ್ಟಿದ ಸತ್ಯಾಗ್ರಹವನ್ನು ಆಕರ್ಷಕವಾಗಿ ತಮ್ಮ ಚಿತ್ರದಲ್ಲಿ ಝಾ ಕಟ್ಟಿಕೊಟ್ಟಿದ್ದಾರೆ. ಝಾ ಚಿತ್ರವೆಂದರೆ ವಿರೋಧಾಭಾಸಗಳ ಸಂಗಮ. 'ಸತ್ಯಾಗ್ರಹ' ಚಿತ್ರದಲ್ಲೂ ಅದರ ದರ್ಶನವಾಗುತ್ತದೆ. ಆದರೂ ಎಲ್ಲ ತರ್ಕಗಳನ್ನು ಬದಿಗಿಟ್ಟು ನೋಡಿದರೆ, ಒಂದು ಸಿನಿಮಾವಾಗಿ ಕೆಲವು ಕಾರಣಗಳಿಗೆ 'ಸತ್ಯಾಗ್ರಹ' ಇಷ್ಟವಾಗಬಹುದು. ಸದ್ಯದ ಸಂದರ್ಭದ ಜ್ವಲಂತ ಸಮಸ್ಯೆಯಾಗಿರುವ ಭ್ರಷ್ಟಾಚಾರವನ್ನು ವಸ್ತುವಾಗಿಟ್ಟುಕೊಂಡು ಚಿತ್ರ ಮಾಡಿದ ಕಾರಣಕ್ಕಾಗಿ ಅವರು

ಗಾಂಧೀವಾದಿ ನಿವೃತ್ತ ಪ್ರಾಂಶುಪಾಲರು ಭ್ರಷ್ಟತೆಯನ್ನು ಪ್ರಶ್ನಿಸಿದ ಕಾರಣಕ್ಕೆ ಬಂಧನಕ್ಕೊಳಗಾಗುತ್ತಾರೆ. ಆ ಘಟನೆ ಒಂದು ಸತ್ಯಾಗ್ರಹಕ್ಕೆ ವೇದಿಕೆಯನ್ನು ನಿರ್ಮಿಸಿಕೊಡುತ್ತದೆ. ದ್ವಾರಕಾ ಆನಂದ್‌ರ ಪುತ್ರನ ಗೆಳೆಯ ಉದ್ಯಮಿ ಮಾನವ್ (ಅಜಯ್ ದೇವಗನ್) ಪ್ರವೇಶದಿಂದ ಚಿತ್ರ ತಿರುವನ್ನು ಪಡೆದುಕೊಳ್ಳುತ್ತದೆ. ದ್ವಾರಕಾ ಆನಂದ್ ಅವರನ್ನು ಬಿಡಿಸಿಕೊಳ್ಳುವ ಮಾನವ್ ಪ್ರಯತ್ನ ನಿಧಾನಕ್ಕೆ ಭ್ರಷ್ಟಾಚಾರದ ವಿರುದ್ಧದ ಸತ್ಯಾಗ್ರಹವಾಗಿ ರೂಪ ಪಡೆಯುತ್ತದೆ. ಇದೇ ಸಂದರ್ಭದಲ್ಲಿ ಗೆಳೆಯನ ಸಾವಿನ ಜೊತೆಗೆ ರಾಜಕಾರಣ ಸುತ್ತಿಕೊಂಡಿರುವುದು ಅವನ ಗಮನಕ್ಕೆ ಬರುತ್ತದೆ. ಅಂತಿಮವಾಗಿ ಈ ಸತ್ಯಾಗ್ರಹಕ್ಕಾಗಿ ತನ್ನೆಲ್ಲ ಉದ್ಯಮಗಳಿಗೆ ರಾಜೀನಾಮೆ ನೀಡಿ ಅಪ್ಪಟ ಮಾನವನಾಗುತ್ತಾನೆ. ಮಾನವ್ ಜೊತೆಗೆ ದ್ವಾರಕಾ ಆನಂದ್‌ರ ಮಾಜಿ ಶಿಷ್ಯ ಸ್ಥಳೀಯ ಗೂಂಡಾ ಅರ್ಜುನ್ (ಅರ್ಜುನ್ ರಾಮ್‌ಪಾಲ್), ಟಿ.ವಿ. ಪತ್ರಕರ್ತೆ ಯಾಸ್ಮಿನ್ (ಕರೀನಾ ಕಪೂರ್) ಮೊದಲಾದವರು ಸೇರಿಕೊಳ್ಳುತ್ತಾರೆ. ಅಂತಿಮವಾಗಿ ಅಮಿತಾಭ್ ಬಚ್ಚನ್ ಬಿಡುಗಡೆಯಾಗುತ್ತಾರಾದರೂ, ಹೋರಾಟ ಇನ್ನಷ್ಟು ತೀವ್ರತೆಯನ್ನು ಪಡೆಯುತ್ತದೆ. ದ್ವಾರಕಾ ಆನಂದ್ ಅವರ ಆಮರಣ ಉಪವಾಸ ಸತ್ಯಾಗ್ರಹ ರಾಜಕಾರಣಿ ಬಲರಾಂ ಸಿಂಗ್ (ಮನೋಜ್ ಭಾಜ್‌ಪೈ) ಜೊತೆಗಿನ ಸಂಘರ್ಷಕ್ಕೆ ಕಾರಣವಾಗುತ್ತದೆ.

ಚಿತ್ರದ ಕತೆಯನ್ನು ಹೆಣೆಯುವ ಸಂದರ್ಭದಲ್ಲಿ ಝಾ ಅವರ ಪಕ್ವತೆ ಕೆಲಸ ಮಾಡಿದೆ. ಗುರಿಯನ್ನು ಸಾಧಿಸುವ ಆತುರದಲ್ಲಿ ತಪ್ಪು ಹೆಜ್ಜೆಗಳನ್ನು ಇಟ್ಟರೆ ಹೇಗೆ ಸತ್ಯಾಗ್ರಹ ದುರಂತಕ್ಕೆ ಕಾರಣವಾಗಬಹುದು ಎನ್ನುವುದನ್ನು ಚಿತ್ರದ ಕೊನೆಯಲ್ಲಿ ತೋರಿಸುತ್ತಾರೆ. ಸರಕಾರದ ಮೇಲೆ ಒತ್ತಡ ಹೇರುವುದಕ್ಕಾಗಿ ಸತ್ಯಾಗ್ರಹದ ನಡೆಯಲ್ಲಿ ತಪ್ಪು ನಿರ್ಧಾರಗಳನ್ನು ಮಾನವ್ ತೆಗೆದುಕೊಳ್ಳುತ್ತಾನೆ. ಇದು ದಂಗೆ, ಪೊಲೀಸರ ಹತ್ಯೆಗೆ ಕಾರಣವಾಗುತ್ತದೆ. ಅಂತಿಮವಾಗಿ ಮಿಲಿಟರಿ ಪ್ರವೇಶಕ್ಕೆ ಅವಕಾಶ ನೀಡುತ್ತದೆ. ಅಹಿಂಸಾ ಸತ್ಯಾಗ್ರಹ ಹಿಂಸೆಗೆ ತಿರುಗುತ್ತದೆ. ಒಟ್ಟಿನಲ್ಲಿ ದ್ವಾರಕಾ ಅವರ ಕೊಲೆಯಲ್ಲಿ ಸತ್ಯಾಗ್ರಹ ಕೊನೆಯಾಗುತ್ತದೆ. ತನ್ನ ಚಿತ್ರದಲ್ಲಿ ಈ ವಾಸ್ತವದೆಡೆಗೆ ಝಾ ಕಣ್ಣು ಹರಿಸಿದ್ದು ಶ್ಲಾಘನೀಯ. ತಮ್ಮ ಚಿತ್ರದೊಳಗಿನ ಸತ್ಯಾಗ್ರಹದಲ್ಲಿ ಕೋಮುವಾದಿ ಪಕ್ಷವನ್ನು ಝಾ ದೂರ ಇಟ್ಟಿರುವುದು ಅವರ ಇನ್ನೊಂದು ಹೆಗ್ಗಳಿಕೆ. ಅವರ ಎಲ್ಲ ಚಿತ್ರಗಳಲ್ಲಿರುವ ಮೆಲೋಡ್ರಾಮಗಳೂ ಇಲ್ಲೂ ಕೆಲಸ ಮಾಡಿವೆ. ಐಟಂಸಾಂಗ್‌ಗಳ ಮೂಲಕ ತನ್ನ ಸತ್ಯಾಗ್ರಹವನ್ನು ಇನ್ನಷ್ಟು ಶ್ರೀಮಂತಗೊಳಿಸಿದ್ದಾರೆ. ಅಜಯ್ ದೇವಗನ್-ಕರೀನಾ ಕಪೂರ್ ನಡುವೆ ಹಸಿ ಬಿಸಿ ಡ್ಯೂಯಟ್ ಕೂಡ ಇದೆ. ದ್ವಾರಕಾ ಆನಂದ್ ಪಾತ್ರದಲ್ಲಿ ಅಮಿತಾಭ್ ಬಚ್ಚನ್ ಅಭಿನಯ ಚಿತ್ರದ ಹೆಗ್ಗಳಿಕೆ. ಅಜಯ್ ದೇವಗನ್ ಕೂಡ ತನ್ನ ಪಾತ್ರಕ್ಕೆ ನ್ಯಾಯ ನೀಡಿದ್ದಾರೆ. ಕರೀನಾ ಕಪೂರ್ ಸಿಕ್ಕಿದ ಅವಕಾಶವನ್ನು ಬಳಸಿಕೊಂಡಿದ್ದಾರೆ. ಅರ್ಜುನ್ ರಾಮ್‌ಪಾಲ್ ನಿರ್ವಹಿಸಿದ ಪಾತ್ರಕ್ಕೆ ಪೋಷಣೆಯಿಲ್ಲ. ಅಮೃತಾ ರಾವ್ ಆರಂಭದಲ್ಲಿ ಲವಲವಿಕೆಯಿಂದ ನಟಿಸಿದ್ದಾರಾದರೂ, ವಿರಾಮದ ಬಳಿಕ ಆ ಪಾತ್ರವೇ ಸೊರಗಿ ಬಿಡುತ್ತದೆ. ಸಂಗೀತ ಚಿತ್ರದ ಓಘಕ್ಕೆ ಅರ್ಥಪೂರ್ಣವಾಗಿ ಮಿಡಿಯುತ್ತದೆ. ರಘುಪತಿ ರಾಘವ ರಾಜಾರಾಂ ಪದ್ಯ ಸತ್ಯಾಗ್ರಹದ ಹೆಜ್ಜೆಗಳಿಗೆ ಸಾಥ್ ನೀಡುತ್ತದೆ. ಸಚಿನ್ ಕೃಷ್ಣಾ ಅವರ ಛಾಯಾಗ್ರಹಣ ಪರವಾಗಿಲ್ಲ.

ನಿರ್ದೇಶನ, ನಿರೂಪಣೆ ಇನ್ನಷ್ಟು ಬಿಗಿಯಾಗಬೇಕಾಗಿತ್ತು. ಚಿತ್ರದ ಕ್ಲೈಮಾಕ್ಸ್ ಹೊತ್ತಿಗೆ ನಿರ್ದೇಶಕರಿಂದ ಚಿತ್ರ ಕೈ ಜಾರಿ ಬಿಡುತ್ತದೆ. ಅಂತ್ಯ ಮಾಡಲೇಬೇಕೆನ್ನುವ ಉದ್ದೇಶದಿಂದ ಚಿತ್ರವನ್ನು ಸುಖಾಂತ್ಯಗೊಳಿಸಿದ್ದಾರೆ. ಕಮರ್ಶಿಯಲ್ ಚಿತ್ರಕ್ಕೆ ಅದು ಅಗತ್ಯವೂ ಕೂಡ. ಒಟ್ಟಿನಲ್ಲಿ ಚಿತ್ರವನ್ನು ಒಮ್ಮೆ ನೋಡುವುದಕ್ಕೆ ಅಡ್ಡಿಯಿಲ್ಲ.

● ಸ್ಪಂದನಾ

ಮಲೆನಾಡ 'ಭಲಗಾರ'ನ ನಿರ್ಗಮನ

ಕಳೆದ ನಾಲ್ಕು ದಶಕಗಳಿಂದ 'ಭಲಗಾರ' ಎನ್ನುವ ದಿನಪತ್ರಿಕೆಯನ್ನು ಸ್ಥಾಪಿಸಿ ವೃತ್ತಿಪರ ಶ್ರದ್ಧೆಯಿಂದ ನಡೆಸಿಕೊಂಡು ಬಂದ ಎ.ಎಸ್.ಗಣಪತಿ ಅಲ್ಪಕಾಲದ ಅನಾರೋಗ್ಯದ ನಂತರ ನಿರ್ಗಮಿಸಿದ್ದಾರೆ.

ಈಗ ನಾವು ಒಂದು ಪತ್ರಿಕೆ ಮಾಡಬೇಕೆಂದು ನಿರ್ಧರಿಸಿದರೆ ಅದು ಅತ್ಯಂತ ಸುಲಭದ ಕೆಲಸ. ಒಂದಷ್ಟು ಹಣ ಕೈಯಲ್ಲಿ ಇದ್ದರೆ ಒಂದು ಕಂಪ್ಯೂಟರ್ ಇಟ್ಟುಕೊಂಡರೆ ನಾಲ್ಕು ಪುಟದ ದಿನಪತ್ರಿಕೆಯೊಂದನ್ನು ಸಲೀಸಾಗಿ ತರಬಹುದು. ಸುದ್ದಿಗಾಗಿ ತೀರಾ ಹುಡುಕಬೇಕಿಲ್ಲ, ಬ್ಲಾಗ್‌ಗಳಿಂದ, ಅಂತರ್ಜಾಲದಿಂದ ಸಾಕಷ್ಟು ಸುದ್ದಿಗಳು ಸಿಗುತ್ತವೆ. ಲೋಕಲ್ ಸುದ್ದಿಗಳು ನಮ್ಮ ಕಾಲಬುಡಕ್ಕೇ ಬಂದು ಬೀಳುತ್ತವೆ. ಫೋನ್ ಮಾಡಿಯೇ ದೂರದ ಸುದ್ದಿಗಳನ್ನು ಸಂಗ್ರಹಿಸಬಹುದು. ಅಚ್ಚು ಮಾಡಲು ಹತ್ತಾರು ಮುದ್ರಣಾಲಯಗಳು ಸಿಗುತ್ತವೆ.


ಆದರೆ ನಲವತ್ತು ವರ್ಷಗಳ ಕೆಳಗೆ ಒಂದು ಪತ್ರಿಕೆ ಮಾಡುವುದೆಂದರೆ ಅದೊಂದು ಸವಾಲಿನ ಕೆಲಸವಾಗಿತ್ತು. ದೂರವಾಣಿಯೂ ಅತ್ಯಂತ ಶ್ರೀಮಂತರಿಗೆ ಮೀಸಲಾದ ಕಾಲವದು. ಸುದ್ದಿಸಂಗ್ರಹ ಅತ್ಯಂತ ಕಷ್ಟದ ಕೆಲಸವಾಗಿತ್ತು. ಮುದ್ರಣ ಮಾಡಲು ಅಚ್ಚುಮೊಳೆ ಜೋಡಿಸಬೇಕಿತ್ತು. ಇದು ಹೆಚ್ಚಿನ ಸಮಯವನ್ನು ಮತ್ತು ತಾಳ್ಮೆಯನ್ನು ನಿರೀಕ್ಷಿಸುತ್ತಿತ್ತು. ಇದರೊಂದಿಗೆ ಇಡೀ ರಾಜಕಾರಣ ಭೂಮಾಲೀಕ ಪುಢಾರಿಗಳ ಕೈಯಲ್ಲಿತ್ತು, ಅವರ ವಿರುದ್ಧ ಬರೆದರೆ ಜೀವಕ್ಕೆ ಅಪಾಯವಿತ್ತು; ಇಂತಹ ಸಂಕೀರ್ಣ ಕಾಲಘಟ್ಟದಲ್ಲಿ ಆರಂಭಗೊಂಡದ್ದು 'ಭಲಗಾರ.'

'ಭಲಗಾರ' ದಿನಪತ್ರಿಕೆಯ ಸಂಪಾದಕ ಗಣಪತಿ ಹೆಸರಿಗೆ ತಕ್ಕಂತೆ 'ಭಲಗಾರ'ರೇ ಆಗಿದ್ದರು.

ಎಂತಹ ಪ್ರಭಾವಿಯನ್ನಾದರೂ ಟೀಕಿಸುವ, ಎದುರು ಹಾಕಿಕೊಳ್ಳುವ ಎದೆಗಾರಿಕೆ ಗಣಪತಿ ಅವರಿಗಿತ್ತು, ಈ ಕಾರಣದಿಂದಲೇ ಕೆಲವು ಪುಢಾರಿಗಳಿಂದ, ಭ್ರಷ್ಟ ಪೊಲೀಸ್ ಅಧಿಕಾರಿಗಳಿಂದ ಗಣಪತಿ ಹಲವು ಬಾರಿ ತೀವ್ರ ಹಲ್ಲೆಗೆ ಒಳಗಾದರು.

ತೀರ್ಥಹಳ್ಳಿಯಂತಹ ಕೊಳಕೆ ವಿಸ್ತಾರದ ಒಂದು ಊರಿನಲ್ಲಿ ದಿನನಿತ್ಯ ಎದುರುಗೊಳ್ಳುವ ಅದೇ ಜನರ ವಿರುದ್ಧವೇ ಗಣಪತಿ ಬರೆಯಬೇಕಿತ್ತು. ಹೀಗೆ ಬರೆದೂ ಅವರನ್ನು ದ್ವೇಷಿಸದೆ ನಿಷ್ಠುರವಾಗಿ ಇರುವ ಕಲೆ ಭಲಗಾರನಿಗೆ ಕರಗತವಾಗಿತ್ತು.

ತೀರಾ ಅನಿವಾರ್ಯ ಕಾರಣಗಳಿಂದ ಪತ್ರಿಕೆ ಒಂದೆರಡು



ಎ.ಎಸ್.ಗಣಪತಿ

ದಿನ ಸ್ಥಗಿತಗೊಂಡದ್ದು ಬಿಟ್ಟರೆ 'ಭಲಗಾರ' ನಿರಂತರತೆಯನ್ನು ಕಾಯ್ದುಕೊಂಡಿತ್ತು, ಮುದ್ರಣದೋಷವಿಲ್ಲದಿರುವುದು ಮತ್ತು ಸುಂದರ ವಿನ್ಯಾಸ 'ಭಲಗಾರ' ಪತ್ರಿಕೆಯ ಹೆಚ್ಚುಗಾರಿಕೆ.

ಹಾಗೆಂದು 'ಭಲಗಾರ' ಪತ್ರಿಕೆಗೆ ಮಿತಿಗಳಿರಲಿಲ್ಲ ಎಂದಲ್ಲ, ಎಲ್ಲ ಬಗೆಯ ವಿಚಾರಗಳನ್ನೂ ಮುಕ್ತವಾಗಿ 'ಭಲಗಾರ'ದಲ್ಲಿ ಪ್ರಕಟವಾಗುತ್ತಿದ್ದರೂ ಅದು ಹೆಚ್ಚು ಬಲಪಂಥೀಯತೆಯ ಕಡೆ ವಾಲುತ್ತಿತ್ತು, ಆದರೆ ಯಾವುದೇ ಮತೀಯರು ನಡೆಸುವ ದುಷ್ಕೃತ್ಯಗಳನ್ನು ಖಂಡಿಸುವ ಮನೋಭಾವ 'ಭಲಗಾರ' ಹೊಂದಿತ್ತು.

ಇನ್ನೊಂದು ಪತ್ರಿಕಾ ಸಂಪಾದಕರೊಡಗಿನ ಸಂಘರ್ಷವನ್ನು ಕೆಲವೊಮ್ಮೆ ತುಂಬಾ ಕೆಳಮಟ್ಟದಲ್ಲಿ ವೈಯಕ್ತಿಕ ನಿಂದನೆಯ ರೀತಿಯಲ್ಲಿ 'ಭಲಗಾರ'ದಲ್ಲಿ ಪ್ರಕಟವಾದದ್ದೂ ಇದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಇದು ಮರೆಯಾಗಿದ್ದು ವಿವೇಕಯುತವಾದ ಪತ್ರಿಕಾಧರ್ಮ ಪಾಲಿಸುತ್ತಿರುವುದು ಓದುಗರ ಗಮನಕ್ಕೆ ಬಂದಿತ್ತು.

ತೀರ್ಥಹಳ್ಳಿ ಕುವೆಂಪು, ಅನಂತಮೂರ್ತಿ, ಶಾಂತವೇರಿ ಗೋಪಾಲಗೌಡರಂತಹ ಲೇಖಕರನ್ನು- ಹೋರಾಟಗಾರರನ್ನು ನೀಡಿದ ಊರು. ಇದನ್ನು ಪ್ರಜ್ಞಾವಂತರ ಕ್ಷೇತ್ರವೆಂದೂ ಹೊಗಳಲಾಗುತ್ತಿದೆ. ಕಿಮ್ಮನೆ ರತ್ನಾಕರ್‌ರಂಥ ಪ್ರಾಮಾಣಿಕ ರಾಜಕಾರಣಿ ಇಲ್ಲಿನವರೇ. ತೀರ್ಥಹಳ್ಳಿ ಬೌದ್ಧಿಕವಾಗಿ ಮಾತ್ರವಲ್ಲ ಭೌತಿಕವಾಗಿಯೂ ಬೇರೆ ಊರುಗಳಿಗೆ ಹೋಲಿಸಿದರೆ ತುಂಬ ಬೆಳೆದಿದೆ. ಶೈಕ್ಷಣಿಕ ಗುಣಮಟ್ಟ ಹೆಚ್ಚಿದೆ. ಒಂದಲ್ಲ ಒಂದು ಬಗೆಯಲ್ಲಿ ಚಳವಳಿ ತನ್ನ ಮಿತಿಯಲ್ಲಿ ಕ್ರಿಯಾಶೀಲವಾಗಿದೆ. ಇಲ್ಲಿ ಅನೇಕ ಪತ್ರಿಕೆಗಳು ಹುಟ್ಟಿವೆ. ಹೊಸ ಪತ್ರಿಕೆಗಳು ಹುಟ್ಟುತ್ತಿವೆ. ಕೆಲವು ಪತ್ರಿಕೆಗಳು ಈಗಲೂ ಕ್ರಿಯಾಶೀಲವಾಗಿವೆ. ಇವುಗಳೆಲ್ಲದರ ಹಿಂದೆ 'ಭಲಗಾರ' ಗಣಪತಿಯವರ ನಾಲ್ಕು ದಶಕದ ಪತ್ರಿಕಾ ಕೃಷಿಯ ಕೊಡುಗೆ ಖಂಡಿತವಾಗಿಯೂ ಇದೆ.

'ಭಲಗಾರ' ಗಣಪತಿ ತಾವು ನಿರ್ಗಮಿಸುವ ಮುನ್ನ ಪತ್ರಿಕೆಗೆ ಭದ್ರಬುನಾದಿ ಹಾಕಿಹೋಗಿದ್ದಾರೆ. ಅದನ್ನು ನಡೆಸಲು ಸಮರ್ಥ ಪರ್ಯಾಯವನ್ನು ಸೃಷ್ಟಿಸಿದ್ದಾರೆ. ಕಳೆದ ಒಂದೆರಡು ವರ್ಷಗಳಿಂದ ಗಣಪತಿ ಅವರ ಮಗ ನಿಶಾಂತ್ ತಂದೆಯಷ್ಟೇ ಶ್ರದ್ಧೆಯಿಂದ ಪತ್ರಿಕೆ ತರುತ್ತಿದ್ದಾರೆ. ಇತ್ತೀಚಿನ ವಿಶ್ವ ಹಿಂದೂ ಪರಿಷತ್ತಿನ ಕೋಸಿ ಯಾತ್ರೆ ಮತ್ತು ಆಸಾರಾಂ ಸ್ವಾಮಿಯ ಲೈಂಗಿಕ ಹಗರಣವನ್ನು ಕುರಿತು ನಿಶಾಂತ್ ಬರೆದ ಸಂಪಾದಕೀಯಗಳು ಆತ ತನ್ನ ತಂದೆಯ ಮಿತಿಯನ್ನು ಮೀರಿ ಬೆಳೆಯುವ ಲಕ್ಷಣವನ್ನು ತೋರಿಸುತ್ತಿದೆ. ಇಷ್ಟೇ ಮುಖ್ಯವಾದದ್ದು ತಂದೆ ಅನಾರೋಗ್ಯ ಬಿದ್ದ ಕಾಲದಿಂದ ತಾನೇ ಸಂಪೂರ್ಣವಾಗಿ ಪತ್ರಿಕೆ ತರುತ್ತಿದ್ದರೂ, ಸಂಪಾದಕೀಯಗಳನ್ನು ಬರೆಯುತ್ತಿದ್ದರೂ ಅದನ್ನೆಲ್ಲ ತೋರ್ಪಡಿಸಿಕೊಳ್ಳದೆ ಇರುವ ನಿಶಾಂತ್‌ನ ಗುಣ 'ಭಲಗಾರ'ದ ಬಗ್ಗೆ ಮುಂದಿನ ದಿನಗಳಲ್ಲಿ ಹೆಚ್ಚಿನ ಭರವಸೆಯನ್ನು ಮೂಡಿಸಿದೆ.

● ಸರ್ಜಾಶಂಕರ್ ಹರಳಿಮಠ

ಅಸಾರಾಮ್ ಆಶ್ರಮದ[...]
ನಡೆದಿದ್ದೇನು?

"ನಾನು ಆ ಸಂದರ್ಭದಲ್ಲಿ ಆಶ್ರಮದಲ್ಲಿರದಿದ್ದರೆ
ಮಗಳ ಮಾತನ್ನು ನಂಬುತ್ತಿರಲೇ ಇಲ್ಲ" ಅಸಾರಾಮ್ ಬ
ಎಂಬ 72 ವರ್ಷ ವಯಸ್ಸಿನ ಸ್ವಾಮಿಯಿಂದ ಅತ್ಯಾ
ಕ್ಕೊಳಗಾದ 16 ವರ್ಷದ ಬಾಲಕಿಯ ತಂದೆ ಧರ್ಮಸಿ
ಅಂದು ನಡೆದ ಘಟನಾವಳಿಯನ್ನು ಬಿಚ್ಚಿಟ್ಟಿದ್ದಾರೆ.

ಒಂದು ಸಣ್ಣ ಟ್ರಾನ್ಸ್‌ಪೋರ್ಟ್ ವ್ಯವಹಾರ ನಡೆಸುತ್ತಿ
ಧರ್ಮಸಿಂಗ್ ಅವರು ಸುಮಾರು ಹತ್ತು ವರ್ಷಗಳ ಹಿ
ಅಸಾರಾಮ್ ಬಾಪುನ ಭಕ್ತರಾದರು. ಜನರನ್ನು ಮರು
ಮಾಡುವ ಮಾಂತ್ರಿಕಶಕ್ತಿ ಹಾಗೂ ಆತನ ಆಧ್ಯಾ
ಬೋಧನೆಗಳಿಂದ ಆಕರ್ಷಿತರಾದ ಧರ್ಮಸಿಂಗ್‌ರ
ಕುಟುಂಬ ಅವರ ಪರಮಭಕ್ತರಾಗಿಬಿಟ್ಟರು. ಸುಮಾರು
ವರ್ಷಗಳಿಂದ ತಮ್ಮ ಮಕ್ಕಳನ್ನೂ ಇದೇ ಆಶ್ರಮ
ಅಡಿಯಲ್ಲಿರುವ ಛಿಂದ್ವಾರಾ ಗುರುಕುಲಕ್ಕೆ ಸೇರಿಸಿದ್ದರು

ಆಗಸ್ಟ್ 14ರಂದು ಅಸಾರಾಮ್‌ನ ಕೆಲವು ಸೇ
ಸೇವಕಿಯರು ಇದ್ದಕ್ಕಿದ್ದಂತೆ ತಮ್ಮ ಮಗಳು ರೋಶ
ಏನೇನೋ ಚಿಕಿತ್ಸೆ ನೀಡಲು ಪ್ರಾರಂಭಿಸಿದರು. ತನಗೆ ಏ
ಆಗಿಲ್ಲ, ಯಾವ ಚಿಕಿತ್ಸೆಯೂ ಅಗತ್ಯವಿಲ್ಲವೆಂದು ಎ
ಹೇಳಿದರೂ ಕೇಳಲಿಲ್ಲ. ನೀನು ಆತ್ಮದ ಪ್ರಭಾವಕ
ಗಾಗಿದ್ದೀಯ, ಅದಕ್ಕಾಗಿ ಇಡೀ ರಾತ್ರಿ ವಿಶೇಷ ಪ
ಸಲ್ಲಿಸಬೇಕು ಎಂದು ತಿಳಿಸಿದರು. ಆ ರಾತ್ರಿಯಿಡೀ ನ
ವಿಚಿತ್ರ ಪೂಜೆ, ಮಂತ್ರಘೋಷಣೆಗಳಿಂದ 16ರ ಹರೆ
ಅಮಾಯಕ ರೋಶ್‌ನಿಗೆ ನಿಜಕ್ಕೂ ತಲೆನೋವು ಬ

ನಂತರ ಆಶ್ರಮದ ಸೇವಕಿಯರು ಧರ್ಮಸಿಂಗ್ ಅ
ಫೋನ್ ಮಾಡಿ ನಿಮ್ಮ ಮಗಳಿಗೆ ಹುಷಾರಿಲ್ಲ, ಕೂ
ಬನ್ನಿ ಎಂದು ಕರೆಸಿಕೊಂಡರು. ತಮ್ಮ ಮಗಳನ್ನು ನೋ
ಹೋದ ತಂದೆತಾಯಿಗಳಿಗೆ 'ಅಸಾರಾಮ್ ಬಾಪು ವ
ನಿಮ್ಮ ಮಗಳ ಕಾಯಿಲೆಯನ್ನು ಗುಣಪಡಿಸಬಲ್ಲರು; ಆ
15ರ ರಾತ್ರಿ ಜೋಧ್‌ಪುರದ ಆಶ್ರಮಕ್ಕೆ ನಿಮ್ಮ ಮಗ
ಕರೆದುಕೊಂಡುಹೋಗಿ' ಎಂದು ತಿಳಿಸಿದರು.

ಅದರಂತೆ ಆಗಸ್ಟ್ 15ರ ರಾತ್ರಿ ಅಸಾರಾಮ್ ಬಾಪು
ಕಂಡರು. ಅಸಾರಾಮ್ ನಿಮ್ಮ ಮಗಳು ಗುಣಮುಖವಾ
ರಾತ್ರಿಯಿಡೀ ಪೂಜೆ ಸಲ್ಲಿಸಬೇಕಾಗುತ್ತದೆ; ಆದ್ದರಿಂದ ನಿ
ಅವಳನ್ನು ಇಲ್ಲೇ ಬಿಟ್ಟುಹೋಗಿ ಎಂದು ತಿಳಿಸಿದ. ಆ
ತಡರಾತ್ರಿಯಾಗಿದ್ದರಿಂದ ನಮಗೆ ಉಳಿದುಕೊಳ್ಳಲು
ಎಲ್ಲೂ ಜಾಗವಿಲ್ಲ ಎಂದಾಗ, ಅದೇ ಆವರಣದಲ್ಲಿ
ಮತ್ತೊಂದು ಕಾಟೇಜಿನಲ್ಲಿ ಉಳಿದುಕೊಳ್ಳುವಂತೆ ಸೂಚಿ
ಅದರಂತೆ ಪಕ್ಕದ ಕಾಟೇಜಿಗೆ ಬಂದ ಈ ಭಕ್ತ ದಂ
ಅಸಾರಾಮ್ ಕಲಿಸಿದ್ದ ಭಜನೆ ಮಾಡುತ್ತಾ ಕುಳಿತಿದ್ದ

ಸುಮಾರು ಒಂದೂವರೆ ಗಂಟೆಯ ನಂತರ ರೋ
ಅಳುತ್ತಾ ತಂದೆತಾಯಿ ಇರುವಲ್ಲಿಗೆ ಬಂದಳು. ಏ
ಏನಾಯಿತು ಎಂದು ಕೇಳಲಾಗಿ ಆಕೆ ಏನನ್ನೂ ಬಾ
ಬಿಡಲಿಲ್ಲ. ಇಲ್ಲಿಂದ ಬೇಗ ಹೊರಟುಹೋಗೋಣ ಎ
ಒತ್ತಾಯಿಸಲು ಶುರು ಮಾಡಿದಳು. ಅಲ್ಲಿಂದ ವ
ಬಂದ ನಂತರ ಸತತ ಎರಡು ದಿನಗಳ ಕಾಲ ಅಳು
ಇದ್ದ ಬಾಲಕಿ ಏನೊಂದನ್ನೂ ಬಾಯಿಬಿಡಲಿಲ್ಲ, ಕೊ
ಆಕೆಯ ತಾಯಿ ತುಂಬಾ ಅನುನಯಿಸಿ ಕೇಳಿದಾಗ ಮ
ತಿಳಿಸಿದ ಸಂಗತಿಯನ್ನು ಕೇಳಿ ಈ ಭಕ್ತ ದಂಪತಿ ಕು
ಹೋದರು. ಅಂದು ರಾತ್ರಿ ಪೂಜೆ ಸಲ್ಲಿಸುವ ನೆಪ
ಹಿಂಬಾಗಿಲಿನಿಂದ ಮತ್ತೊಂದು ಕಟ್ಟಡಕ್ಕೆ ಕರೆದೊ
ಅಸಾರಾಮ್ ಎಂಬ ಪಶು ಆ ಬಾಲಕಿಯನ್ನು ವಿವಸ್ತ್ರಗೊ
ಕ್ರೂರವಾಗಿ ಅತ್ಯಾಚಾರ ಎಸಗಿದ್ದ.

ಆ ಕೂಡಲೆ ಅಸಾರಾಮ್‌ನನ್ನು ಭೇಟಿಯಾಗಲು ಧ
ಸಿಂಗ್ ಪ್ರಯತ್ನಿಸಿದರು. ಆದರೆ ದೆಹಲಿಯ ರಾಮಲಿ
ಮೈದಾನದಲ್ಲಿ ಪ್ರವಚನ ನೀಡುತ್ತಿದ್ದ ಸ್ವಾಮಿಯ
ಭೇಟಿಯಾಗಲು ಆತನ ಅನುಯಾಯಿಗಳು ಅವ
ನೀಡಲಿಲ್ಲ. ಕೊನೆಗೆ ಪೊಲೀಸ್ ಕಂಪ್ಲೈಂಟ್ ಕೊಡುವ
ಸೂಕ್ತವೆಂದು ಭಾವಿಸಿ ತಮ್ಮ ಮಗಳ ಸಮೇತ ಠಾ
ಹೋಗಿ ದೆಹಲಿಯಲ್ಲೇ ದೂರು ನೀಡಿದರು.

ಅದಾದ ಒಂದು ವಾರವಾದರೂ ಪೊಲೀ
ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಕಾಮುಕ ಅಸಾರಾ
ಸ್ವೇಚ್ಛೆಯಾಗಿ ತಿರುಗಾಡುತ್ತಲೇ ಇದ್ದ. ಬದಲಿಗೆ ಅಸಾರಾ
ಬೆಂಬಲಿಗರು (ಇದರಲ್ಲಿ ಶಾಸಕರು, ಮಂತ್ರಿಗಳೂ ಇ
ದೂರು ವಾಪಸ್ ತೆಗೆದುಕೊಂಡರೆ ಯಥೇಚ್ಛ
ಕೊಡುವುದಾಗಿ ಆಮಿಷ ಒಡ್ಡಿದರು. ನಿಮ್ಮ ಮಗ
ಇಂಥಾ ಸ್ಥಿತಿ ಬಂದಿದ್ದರೆ ಹಣ ಪಡೆದು ಸುಮ್ಮನಾಗುತ್ತಿ
ಎಂದು ಕಟುವಾಗಿ ಪ್ರಶ್ನಿಸಿ ಅವರೆಲ್ಲರನ್ನೂ ವಾಪಸ್ ಕ
ನಂತರ ಬೆದರಿಕೆಗಳು ಪ್ರಾರಂಭವಾದವು. ಆದರೆ ಧ
ಸಿಂಗ್‌ನ ಕುಟುಂಬ ಏನೇ ಆದರೂ ಹೋರಾಡಲು ತೀ
ನಿಸಿದರು. ಅಸಾರಾಮ್‌ನನ್ನು ಬಂಧಿಸುವಂತೆ ಒತ್ತಾ
ಆತ ಧರಣಿ ಸತ್ಯಾಗ್ರಹ ಕುಳಿತರು. ದಿನೇದಿನೇ ಸಾರ್ವ
ಒತ್ತಡ ಹೆಚ್ಚಿದ ನಂತರವೇ ಆತನನ್ನು ಬಂಧಿಸಲಾಗಿ

ಆದರೆ ಗುಜರಾತ್, ರಾಜಸ್ಥಾನ, ಉತ್ತರಪ್ರದೇಶ,
ಮುಂತಾದ ಕಡೆಗಳಿಂದ ಪ್ರಭಾವಿ ರಾಜಕಾರಣಿಗಳು,
ಮಹೋದಯರೇ ಈ ಕೀಚಕ ಸ್ವಾಮಿಯ ರಕ್ಷಣೆಗೆ ನಿಂ
ಹೀಗಿರುವಾಗ ಅಘಾಯುಕ ಬಾಲಕಿಗೆ ನ್ಯಾ
ದೊರಕುತ್ತದೆಯೆಂದು ನಿರೀಕ್ಷಿಸಬಹುದೆ?


● ದೊಡ್ಡಿಪಾಳ್ಯ ನರಸಿಂಹಮೂ[...]

...ಂದೂ ಉಗ್ರ ಮುತಾಲಿಕನಿಗೆ ಹಳೆಗಂಡನ ಪಾದವೇ ಗತಿ

...ಹಿಂದೂತ್ವದ ಪ್ರತಿಪಾದಕ, ಮಾನವದ್ವೇಷಿ, ...ಅತ್ಯಂತ ವಿಕೃತ ಹಿಂದೂ ಮತಾಂಧ, ...ಸೇನೆಯ ನಾಯಕ ಪ್ರಮೋದ ಮುತಾಲಿಕನಿಗೀಗ ...ನ ಪಾದವೇ ಗತಿ. ವಿಶ್ವ ಹಿಂದೂ ಪರಿಷತ್ತು, ...ಳ, ಶಿವಸೇನೆ, ರಾಷ್ಟ್ರೀಯ ಹಿಂದೂ ಸೇನಾ, ...ಸೇನಾ ಅಂತೆಲ್ಲ ಸುತ್ತಾಡಿ ಮಾಡಬಾರದ್ದನ್ನೆಲ್ಲ ...ಲ್ಲಿ ತನ್ನ ವಿಕೃತಿಗೆ ಬೆಲೆ ಸಿಗದ ಕಾರಣ ಈಗ ...ಯ ಬಿಜೆಪಿಯ ಬಾಗಿಲು ತಟ್ಟುತ್ತಿದ್ದಾನೆ. ಒಂದು ...ಷ್ಟ ಕ್ರೂರವಾದ ಭಾಷಣಗಳ ಮೂಲಕ ಉತ್ತರ ...ಲ್ಲಿ ಬಿಜೆಪಿಗೆ ಭದ್ರವಾದ ಓಟ್ ಬ್ಯಾಂಕ್ ...ದ್ದಲ್ಲದೆ ತಾನು ಹೇಳಿದವರಿಗೆಲ್ಲ ಟಿಕೆಟ್ ಕೊಡಿಸಿ ...ಗೆಲ್ಲಿಸಿ ತರುವ ತಾಕತ್ತು ಹೊಂದಿದ್ದ ಮುತಾಲಿಕ್ ...ಹತ ದೈನೇಸಿಸ್ಥಿತಿ ತಲುಪಿದ್ದಾನೆಂದರೆ ಕಳೆದ ... ಚುನಾವಣೆಯಲ್ಲಿ "ನೀವು ಹೇಳಿದಂತೆಲ್ಲ ... ನನಗೂ ಒಂದು ಮತಕ್ಷೇತ್ರದ ಟಿಕೆಟ್ ಕೊಡಿ ...ದು ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ ಜೋಶಿ ...ಪಾಕಿ ಗೋಗರೆದು ಅಂಗಲಾಚಿದ್ದ. ಆದರೆ ...ೇರಿದಂತೆ ಯಾವೊಬ್ಬ ಬಿಜೆಪಿ ನಾಯಕರೂ ...ಭೀರವಾಗಿ ತೆಗೆದುಕೊಳ್ಳುವುದಿರಲಿ, ಮುತಾಲಿಕನ ...ತಿ ನೋಡದೇ ಆತನಿಗೆ ಉಗಿದು ಕಳುಹಿಸಿದ್ದರು. ...ಹಾವಿನಂತಾಗಿರುವ ಮುತಾಲಿಕ್ ಅದೆಷ್ಟೇ ...ಟ್ಟಿದರೂ ಅವರ‍್ಯಾರೂ ಕ್ಯಾರೇ ಅನ್ನಲಿಲ್ಲ. ...ಕ, ಈಗಲೂ ಹಲ್ಲು ಕಿರಿದು "ಬಿಜೆಪಿಯವರು ...ಕೊಟ್ಟರೆ ಬೆಳಗಾಂವಿ, ಚಿಕ್ಕೋಡಿ, ಹಾವೇರಿ, ...ಧಾರವಾಡ, ಬಾಗಲಕೋಟ ಅಥವಾ ...ಾರು ಇವುಗಳಲ್ಲಿ ಯಾವುದಾದರೂ ಒಂದು ... ಮತಕ್ಷೇತ್ರದಿಂದ ಸ್ಪರ್ಧಿಸುತ್ತೇನೆ. ಇಲ್ಲಾಂದ್ರೆ ...ಾಗಿ ಚುನಾವಣೆಗೆ ನಿಲ್ಲುತ್ತೇನೆ" ಎಂದು ...ಮು ತಿರುಗುತ್ತಿದ್ದಾನೆ.

...ಲಿಕ್‌ನ ದುರಾದೃಷ್ಟಕ್ಕೆ ಈಗಲೂ ಬಿಜೆಪಿಯ ...ಾಯಕರೂ ಇವನ್ನು ಗಂಭೀರವಾಗಿ ತೆಗೆದು ... ಇದು ಮುತಾಲಿಕ ಎಂಬ ಭಯಾನಕ ಹಿಂದೂ ...ೂಬ್ಬ ಬಂದು ತಲುಪಿರುವ ದಿವಾಳಿ ಸ್ಥಿತಿ.

...ನೋಡಿದರೆ ಮುತಾಲಿಕ ಎಂಬ ವಿಕೃತಿಯನ್ನು ...ಸಾಕಷ್ಟು ಬಳಸಿಕೊಂಡಿದೆ. ಈತ ...ಸದಲ್ಲಿದ್ದಾಗ ನಡೆಸಿದ ಸಮಾಜದ್ರೋಹಿ ಕೆಲಸಗಳು ... ಈತನ ರೌಡಿಪಡೆ ಕರ್ನಾಟಕದ ನೆಮ್ಮದಿಯನ್ನೇ ...ನ ತೆಗೆದುಕೊಂಡಿತ್ತು. ನಾಡಿನ ...ಮುತವಾದ ಬದುಕನ್ನೇ ನಾಶಮಾಡ ಹೊರಟಿತ್ತು. ... ಅಲ್ಪಸಂಖ್ಯಾತ ಜನರನ್ನು ಭಯಭೀತಗೊಳಿಸಿತ್ತು. ...ಜೆಪಿ ತನ್ನ ವೋಟ್‌ಬ್ಯಾಂಕಾಗಿ ಬಳಸಿಕೊಂಡಿತು. ... ಕೋಮುಸೌಹಾರ್ದ ವೇದಿಕೆಯಂತಹ ...ರ ಸಂಘಟನೆಯೊಂದು ಈ ನೆಲದಲ್ಲಿ ಇಲ್ಲದಿದ್ದರೆ



ಈತನ ಕುಕೃತ್ಯಗಳಿಗೆ ತಡೆಯೇ ಇಲ್ಲದಂತಾಗುತ್ತಿತ್ತು. ಜನಪರ ಶಕ್ತಿಗಳ ಪ್ರತಿರೋಧಕ್ಕೆ ಈತ ಅರ್ಧ ಮುಗ್ಗರಿಸಿಹೊದ.

ವಿಷಕಾರುವ ತನ್ನ ಭಾಷಣದ ಮೂಲಕ ನಾಡಿನ ಸ್ವಾಸ್ಥ್ಯ ಕದಡಿ, ಧರ್ಮ ಧರ್ಮಗಳ ಮಧ್ಯೆ ಬೆಂಕಿ ಹಚ್ಚಿ ರಾಜಕಾರಣ ಮಾಡುವುದೊಂದೇ ಈತನ ಖಯಾಲಿಯಾಗಿರಲಿಲ್ಲ. ಹೊರಗೆ ತಾನೊಬ್ಬ ದೊಡ್ಡ ದೇಶಭಕ್ತನಂತೆ ಪೋಸು ಕೊಡುತ್ತಾನಾದರೂ ಒಳಗೊಳಗೆ ಹಡಬೆ ಹಣ ಮಾಡುವ, ಶ್ರಮಪಡದೆ ಕೋಟಿ-ಕೋಟಿ ಆಸ್ತಿ ಗಳಿಸುವ ದೇಶದ್ರೋಹಿ ಮನಸ್ಥಿತಿ ಈತನದ್ದು. ಆದಕ್ಕಾಗಿ ಎಂತಹ ಹೀನ ಕೆಲಸಕ್ಕಾದರೂ ತಯಾರು. ಅದು ಬಿಜೆಪಿಯ ನಾಯಕರಿಗೂ ಗೊತ್ತಾಗಿತ್ತು. ಅದೇ ಕಾರಣಕ್ಕೆ 2004ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷ 79 ಸೀಟು ಗೆದ್ದು ಜೆಡಿಎಸ್ ಜೊತೆ ಸೇರಿಕೊಂಡು ಸರಕಾರ ರಚಿಸಿದಾಗ ಬಿಜಾಪುರದ ದರ್ಗಾ ಜೈಲಿನಲ್ಲಿದ್ದ ಈತನನ್ನು ಕನಿಷ್ಟ ಸೌಜನ್ಯಕ್ಕಾದರೂ ಭೆಟ್ಟಿಯಾಗಿ ಮಾತನಾಡಿಸುವ ಕೆಲಸವನ್ನು ಯಾವ ನಾಯಕರೂ ಮಾಡಲಿಲ್ಲ. ಇದು ಮುತಾಲಿಕನ ಹೊಟ್ಟೆಯಲ್ಲಿ ಬೆಂಕಿಬಿದ್ದಂತೆ ಮಾಡಿತ್ತು. ಅಷ್ಟೇ ಅಲ್ಲದೇ ತನ್ನನ್ನು ಬಳಸಿಕೊಂಡು ಗೆದ್ದು ಸರಕಾರ ರಚಿಸಿ ಗಡದ್ದಾಗಿ ಉಣ್ಣಲಾರಂಭಿಸಿದ್ದ ಶಾಸಕರನ್ನು ಕಂಡು ಹೊಟ್ಟೆಯುರಿಯಲಾರಂಭಿಸಿತ್ತು.

ಮುಂದೇ ಹೇಗೋ ಹೊರಬಂದು 2005ರಲ್ಲಿ ಹುಬ್ಬಳ್ಳಿಯಲ್ಲಿ ಹಿಂದೂ ಭವನ ಕಟ್ಟುತ್ತೇನೆಂದು ಹೊರಟವನು ಅಕ್ಷರಶಃ ದರೋಡೆಗಿಳಿದುಬಿಟ್ಟ. ಸಿಕ್ಕಸಿಕ್ಕವರಿಂದೆಲ್ಲ ಕೋಟ್ಯಾಂತರ ರೂಪಾಯಿ ವಸೂಲಿ ಮಾಡಿದ. ಹಿಂದೂ ಭವನ ನಿರ್ಮಾಣವೇನೋ ಸಾಗುತ್ತಿದ್ದಂತೆ ಮುತಾಲಿಕನ ಐಶ್ವರ್ಯವೂ ಬೆಳೆಯಿತು. ಚೆಡ್ಡಿಗಳೇ ಅಂದಾಜಿಸಿದಂತೆ ಈತ ಹೆಚ್ಚು ಕಡಿಮೆ ಐದು ಕೋಟಿ ರೂಪಾಯಿಗಳನ್ನು ನುಂಗಿಹಾಕಿದ್ದ. ಅಲ್ಲಿಂದಲೇ ಈತನ ಕೇಡುಗಾಲ ಆರಂಭವಾದದ್ದು. ಆರೆಸ್ಸೆಸ್ಸಿನ ವಟುಗಳು ತಮಗಿರದ ಭಾಗ್ಯ ಇವನಿಗೇಕೆಂದು ಹಿಂದೂ ಭವನದ ಲೆಕ್ಕ ಕೇಳಲಾರಂಭಿಸಿದರು. ಈತ ಲೆಕ್ಕ ಕೊಡಲಾರದೇ ತಲೆ ಮರೆಸಿಕೊಂಡು ತಿರುಗಲಾರಂಭಿಸಿದಾಗ ಸಂಘದೊಳಗೆ ಒತ್ತಡ ತೀವ್ರಗೊಂಡು ಈತನನ್ನು ಹೊರಹಾಕಲಾಯಿತು.

ಅದಾಗಲೇ ಧರ್ಮ ರಕ್ಷಣೆ ಎನ್ನುವುದು ಎಂತಹ ಲಾಭದಾಯಕ ದಂಧೆ ಎಂಬುದನ್ನು ಮನಗಂಡಿದ್ದ ಮುತಾಲಿಕ ಆರೆಸ್ಸೆಸ್ಸಿನಿಂದ ಹೊರದಬ್ಬಿಸಿಕೊಂಡರೂ ಆ ರಕ್ಷಣಾ ಕಾರ್ಯವನ್ನು ಮಾತ್ರ ಬಿಡಲಿಲ್ಲ. ಅದೇ ವರ್ಷ ತನ್ನಷ್ಟೇ ಧರ್ಮಾಂಧತೆಯನ್ನು ಹೊಂದಿದ್ದ ಬಾಳಾಠಾಕ್ರೆಯ ಶಿವಸೇನೆ ಎಂಬ ಕನ್ನಡಿಗ ವಿರೋಧಿ ಸಂಘಟನೆಯನ್ನು ಮಹಾರಾಷ್ಟ್ರದಿಂದ ತಂದು ಇಲ್ಲಿ ನೆಲೆ ಕಟ್ಟಿಕೊಳ್ಳಲು ಯತ್ನಿಸಿದ. ಆದರೆ ಬೆಳಗಾಂವಿ ವಿಷಯದಲ್ಲಿ ಶಿವಸೇನೆ ಕರ್ನಾಟಕದ ವಿರುದ್ಧ ತಿರುಗಿಬಿದ್ದಾಗ ಅನಿವಾರ್ಯವಾಗಿ ಸೇನೆಯಿಂದ ಹೊರಬಂದ. ಆಗ ಆರಂಭವಾದದ್ದೇ ಈತನ ರಾಷ್ಟ್ರೀಯ ಹಿಂದೂ ಸೇನೆ. ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ರಾಷ್ಟ್ರೀಯ ಪದವನ್ನು, ವಿಶ್ವ ಹಿಂದೂ ಪರಿಷತ್‌ನಿಂದ ಹಿಂದೂ ಪದವನ್ನು, ಶಿವಸೇನೆಯಿಂದ ಸೇನೆ ಎಂಬ ಪದವನ್ನು ಸೇರಿಸಿ 2006ರ ಫೆಬ್ರುವರಿಯಲ್ಲಿ ಹುಬ್ಬಳ್ಳಿಯ ಇಂದಿರಾ ಗಾಜಿನ ಅರಮನೆಯಲ್ಲಿ ರಾಷ್ಟ್ರೀಯ ಹಿಂದೂ ಸೇನೆಯನ್ನು ಹಾಗು ಶ್ರೀರಾಮ ಸೇನೆಯನ್ನು ಆರಂಭಿಸಿದ.

ಚುನಾವಣೆಯಲ್ಲಿ ಬಿಜೆಪಿ ನಾಯಕರನ್ನು ಸೋಲಿಸಿ ತನ್ನ ಸಾಮರ್ಥ್ಯ ತೋರಿಸಲೇಬೇಕೆಂದು 2008ರ ವಿಧಾನಸಭಾ ಚುನಾವಣೆಯಲ್ಲಿ 150 ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೂ ಯಾರೂ ಸಾವಿರಕ್ಕಿಂತ ಹೆಚ್ಚು ಮತ ಪಡೆಯಲಿಲ್ಲ. ದುರಂತಕ್ಕೆ ಅದೇ ಚುನಾವಣೆಯಲ್ಲಿ ಬಿಜೆಪಿ 110 ಸೀಟು ಗೆದ್ದು ಆಪರೇಷನ್ 'ಕಮಲ'ದ ಮೂಲಕ ಅಧಿಕಾರಕ್ಕೆ ಬಂತು. ಅಲ್ಲಿಗೆ ಮುತಾಲಿಕನ ರಾಜಕೀಯ ಅಧಿಕಾರದ ಕನಸು ನುಚ್ಚುನೂರಾಯಿತು. ಶ್ರೀರಾಮ ಸೇನೆಯ ಹೆಸರಿನಲ್ಲಿ ಧರ್ಮ ರಕ್ಷಣೆಗಾಗಿ ವಸೂಲಿ ಮಾಡುವುದೇ ಈತನ ಫುಲ್‌ಟೈಮ್ ಉದ್ಯೋಗವಾಯಿತು.

ಈತನ ಹಣದಾಹವನ್ನು, ವಿಕೃತ ಮನೋವಿಕಾರವನ್ನು, ಜೊತೆಗಿದ್ದವರನ್ನೇ ಮುಗಿಸಿಬಿಡುವ ಕುತಂತ್ರವನ್ನು ಕಂಡು ಬೇಸತ್ತ ಬೆಂಬಲಿಗರೆಲ್ಲ ದೂರವಾಗಿ ಈತನ ಅಸಲಿ ಮುಖವನ್ನು ಬಯಲು ಮಾಡತೊಡಗಿದರು. ಮುತಾಲಿಕ ಹೇಳಿದ ಕೆಲಸವನ್ನು ಶಿರಸಾವಹಿಸಿ ಮಾಡುತ್ತಿದ್ದ ಈಶ್ವರಸಿಂಗ್ ಠಾಕೂರ, ವಿಲಾಸ ಪವಾರ, ಕೃಷ್ಣಾ ಗಂಡಗಾಳ್ಕರ, ಪ್ರಕಾಶ ನಾಯಕ, ವಸಂತಕುಮಾರ ಭವಾನಿ, ಮಂಜುನಾಥ ಮಂಡ್ಯ, ನಂದುಲಾಲ ಜೈನ, ಪ್ರವೀನ ವಾಳ್ಕೆ, ಉಮೇಶ ಆಲಮೇಲಕರ, ಮಂಚಾಲೇಶ್ವರಿ ನಾಯಕ ಮುಂತಾದವರೆಲ್ಲ ದೂರವಾದನಂತರ ಈತ ಅಕ್ಷರಶಃ ತತ್ತರಿಸಿದ. ಆನಂತರ ಈತ ಮಾಡಿದ್ದೆಲ್ಲ ಬರೀ ಪ್ರಚಾರಕ್ಕಾಗಿ, ಅಸ್ತಿತ್ವಕ್ಕಾಗಿನ ಪರದಾಟ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಭಾರತ-ಪಾಕಿಸ್ತಾನ ಕ್ರಿಕೆಟ್ ಮ್ಯಾಚ್ ವಿರುದ್ಧ ಕಿರುಚಾಡಿದ್ದು, ಸಿನಿಮಾಗಳ ವಿರುದ್ಧ ಗುರಾಯಿಸಿದ್ದು ಕೊನೆಗೆ ಕಾಮುಕ ಸ್ವಾಮಿ ನಿತ್ಯಾನಂದನನ್ನು ಕರೆಸಿ ಜಮಖಂಡಿಯಲ್ಲಿ ಸಮಾವೇಶ ಮಾಡಿದ್ದು ಹೀಗೆ ಎಲ್ಲವೂ ಹಣ ಮತ್ತು ಪ್ರಚಾರಕ್ಕಾಗಿ. ಮೊದಲಿನ ಹಾಗೆ ಈಗ ಆತ ಹೇಳಿದ ಕೆಲಸ ಮಾಡುವ ಹುಡುಗರು ಅವನೊಂದಿಗಿರಲಿಲ್ಲ. ಹಿಂದೂತ್ವದ ಪ್ರಖರ ಭಾಷಣ ಕೇಳಲು ಜನ ಸೇರುತ್ತಿರಲಿಲ್ಲ. ಅದರಿಂದ ಮೊದಲಿನಷ್ಟು ಲಾಭವೂ ಆಗುತ್ತಿರಲಿಲ್ಲ. ಇದೆಲ್ಲವನ್ನೂ ಅರಿತ ಈ ಆಸಾಮಿ ಧರ್ಮರಕ್ಷಣೆಯ ಕಾರ್ಯಕ್ಕೆ ಶಾಶ್ವತ ವಿದಾಯ ಹೇಳಿ ವಿಧಾನ ಸೌಧವನ್ನೋ, ಪಾರ್ಲಿಮೆಂಟನ್ನೋ ಸೇರಿಕೊಂಡು ಸೆಟ್ಲ್ ಆಗಬೇಕೆಂದು ಹೊಂಚು ಹಾಕಿದ. ಆದರೆ ಯಾರೂ ಆತನನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುತ್ತಿಲ್ಲ. ಆದರೂ ಆತ ಬಿಜೆಪಿಯ ಬಾಗಿಲು ಬಡಿಯುವುದನ್ನು ನಿಲ್ಲಿಸುತ್ತಿಲ್ಲ.

ಮುಂದೇನಾಗುವುದೋ ಕಾದು ನೋಡಬೇಕು.

● ಮಹಾಲಿಂಗಪ್ಪ ಆಲಬಾಳ

ಪಾಪಿ ಮುತಾಲಿಕನ ಪಾತಕಗಳು

ಹಿಂದೂ [illegible] ... ಮಾಡಿದವರು [illegible] ... ಮುಗಿಸಿದ. ಇನ್ನೂ ಕೆಲವರನ್ನು ಹೆದರಿಸಿ [illegible]

...ಉನ್ನತ ಶಿಕ್ಷಿತ ಜೀತದಾಳುಗಳ ಬಿಡುಗಡೆ ಎಂದು?

...ಸೆಪ್ಟೆಂಬರ್ 5 ಬಂದಿದೆ. ಡಿ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ...ಹೆಸರಿನಲ್ಲಿ ಶಿಕ್ಷಕರ ದಿನಾಚರಣೆ ನಡೆಯುತ್ತದೆ. ಆದರೆ; ರಾಜ್ಯದ 350 ...ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರು ಮತ್ತು 300 ಅನುದಾನಿತ ...ಕಾಲೇಜುಗಳ ಆಡಳಿತ ಮಂಡಳಿಗಳಿಂದ ನೇಮಕಗೊಂಡಿರುವ ಹಾಗೂ ...ಸಾರು ಖಾಸಗೀ ಕಾಲೇಜುಗಳಲ್ಲಿರುವ ಉಪನ್ಯಾಸಕರುಗಳ ಗೋಳುಗಳನ್ನು ... ಇಲ್ಲವಾಗಿದೆ. ಇವರು ಸಂಘಟಿತರಾಗಿ ಹೋರಾಟ ಮಾಡುವುದು ...ಲ್ಲ. ಯಾಕೆಂದರೆ ಇವರ ನೇಮಕಾತಿ ಶುದ್ಧ ತಾತ್ಕಾಲಿಕ. ಖಾಸಗೀ ...ಮಂಡಳಿಗಳ ಹಂಗಿನಲ್ಲೇ ಸದಾ ಅವರು ಬದುಕಬೇಕು. ಸರಕಾರವೇ ತಾನು ...ದ ಸರಕಾರೀ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಿಗೆ ಅಂಶಕಾಲಿಕ ... (ಪೂರ್ಣಕಾಲಿಕ ಕೆಲಸ ಮಾಡಬಾರದೆಂಬ ಸರಕಾರೀ ಆದೇಶ ಇದೆ!) ... 10,000 ಕೊಡುತ್ತಿದ್ದಾರೆ. ಅದೂ ವರ್ಷದಲ್ಲಿ 9 ತಿಂಗಳು ಮಾತ್ರ. ... ಸಂಬಳವನ್ನು ವರ್ಷದ ಕೊನೆಯಲ್ಲಿ ಕಂತುಗಳಲ್ಲಿ ಕೊಡುತ್ತಾರೆ. ಅನು...ಷ್ಟು ಅನುದಾನರಹಿತ ಕಾಲೇಜುಗಳಲ್ಲಿ ಆಡಳಿತ ಮಂಡಳಿಗಳು ತಮಗೆ ... ಸಂಬಳ ಕೊಟ್ಟು ಈ ಉನ್ನತ ಶಿಕ್ಷಿತ ಉಪನ್ಯಾಸಕರನ್ನು ಜೀತದಾಳುಗಳಂತೆ ...ತ್ತಿದ್ದಾರೆ. ಸರಕಾರಕ್ಕೆ ಈ ಕಾಲೇಜುಗಳ ಮೇಲೆ ಯಾವ ಹಿಡಿತವೂ ...ಹಿತ ಉಪನ್ಯಾಸಕರ ಬಗ್ಗೆ ಯಾವ ಕಾಳಜಿಯೂ ಇಲ್ಲ.

...ಲ್ಲಾ ಅವ್ಯವಸ್ಥೆಗಳಿಗೆ ಕಾರಣ ಸರಕಾರಕ್ಕೆ ಉನ್ನತ ಶಿಕ್ಷಣದ ಬಗ್ಗೆ ಸ್ಪಷ್ಟ ...' ಇಲ್ಲದಿರುವುದು! ಸ್ವಾತಂತ್ರ್ಯ ಸಿಕ್ಕಿ 67 ವರ್ಷಗಳಾದರೂ ...ಕ್ಷಣ ಈ ರೀತಿಯಲ್ಲಿ ಸರಕಾರದ ಅವಗಣನೆಗೆ ಒಳಗಾಗಿದೆ! ... [illegible]?

...ಲ್ಲಿ ಡಿ. ರಾಮಕೃಷ್ಣ ಹೆಗಡೆಯವರ ಸರಕಾರ ಇರುವಾಗ 'ಆರ್ಥಿಕ ... (Economic Crisis) ಎನ್ನುವ ಕಾರಣಕ್ಕೆ ಕಾಲೇಜುಗಳ ಬೋಧಕ/ ...ರ ನಿಯಮಿತ ನೇಮಕಾತಿಯ ಪ್ರಕ್ರಿಯೆಯನ್ನು ನಿಲ್ಲಿಸಲಾಯಿತು. ...ನಂತರಗೆ ಹೇಗೋ ನೇಮಕಾತಿ ಸ್ವಲ್ಪ ಸ್ವಲ್ಪ ಮುಂದುವರಿಯಿತು. ...ಗೆ ಹೋಗಿ ತುಂಬಾ ಖರ್ಚು ಮಾಡಿ, ಕಷ್ಟಪಟ್ಟು ಕೆಲಸ ...ಕೊಂಡರು. ನಂತರ ಮಾತ್ರ ಹಿಂದುಳಿದ ವರ್ಗಗಳ ನೇಮಕಾತಿ ... ಬೇರೆ ಎಲ್ಲಾ ಬೋಧಕ/ಬೋಧಕೇತರರ ನೇಮಕಾತಿ ಪ್ರಕ್ರಿಯೆ ... ಸ್ಥಗಿತಗೊಂಡಿತು. ಇದರಿಂದಾಗಿ ರಾಜ್ಯಾದ್ಯಂತ ಸಾವಿರಾರು ... ಎಂ.ಎ./ಎಂ.ಎಸ್‌ಸಿ/ ಎಂ.ಕಾಂ/ ಎಂಬಿಎ/ ಎಂಸಿಎ ... [illegible]

ಆಡಳಿತ ಮಂಡಳಿಗಳ ಶೋಷಣೆ ಅನುಭವಿಸುತ್ತಾ ಅವಮಾನದಿಂದ ಜೀತದಾಳುಗಳಂತೆ ಬದುಕು ಸಾಗಿಸುವಂತಾಗಿದೆ.

ಈ ಸಮಸ್ಯೆ ಪರಿಹಾರ ಆಗುವುದು ಹೇಗೆ? ಯಾವಾಗ? 'ಆರ್ಥಿಕ ಬಿಕ್ಕಟ್ಟು' (Economic Crisis) ಹೋಗುವುದು ಯಾವಾಗ? ಅಂದಿನಿಂದ ಹಲವು ಸರಕಾರಗಳು ಬಂದುಹೋಗಿವೆ. ಚುನಾವಣೆಗಳನ್ನು ನಡೆಸಲು ಕೋಟಿಗಟ್ಟಲೆ ಹಣ ವ್ಯಯವಾಗುತ್ತಿದೆ. ಸಚಿವರುಗಳ ಓಡಾಟಕ್ಕೆ, ಖರ್ಚಿಗೆ ತುಂಬಾ ಹಣ ವ್ಯಯವಾಗುತ್ತಿದೆ. ಅದಕ್ಕೆಲ್ಲಾ 'ಆರ್ಥಿಕ ಬಿಕ್ಕಟ್ಟು' ಉದ್ಭವಿಸುತ್ತಿಲ್ಲ. ಆದರೆ ಕಾಲೇಜು ಶಿಕ್ಷಕರ ನೇಮಕಾತಿಗೆ ಮಾತ್ರ ಆರ್ಥಿಕ ಬಿಕ್ಕಟ್ಟು! ಇದು ಯಾವ ನ್ಯಾಯ?

ಇತ್ತೀಚೆಗೆ ರಾಷ್ಟ್ರೀಯ ಪ್ರವೇಶ ಪರೀಕ್ಷೆ 'ನೆಟ್'ಗಳ ಮೂಲಕ ಸ್ವಲ್ಪ ಸ್ವಲ್ಪ ನೇಮಕಾತಿ ಆಗುತ್ತಿದೆ. ಆದರೆ ಆ 'ನೆಟ್'ಗಳು ಎಷ್ಟು ಕಠಿಣ ಪರೀಕ್ಷೆಗಳನ್ನು ಒಳಗೊಂಡಿವೆ ಎಂದರೆ ಶೇಕಡಾ 1 ಅಥವಾ 2 ಅಭ್ಯರ್ಥಿಗಳು ಮಾತ್ರ ಉತ್ತೀರ್ಣರಾಗುತ್ತಿದ್ದಾರೆ. ಇದರಿಂದಾಗಿ ಉನ್ನತ ಶಿಕ್ಷಿತ ಯುವಕಯುವತಿಯರಲ್ಲಿ ತಮ್ಮ ಸಾಮರ್ಥ್ಯದ ಬಗ್ಗೆಯೇ ಅಪನಂಬಿಕೆ ಬರುವಂತಾಗುತ್ತಿದೆ. ಕೀಳರಿಮೆ ಉಂಟಾಗುತ್ತಿದೆ. ಪ್ರತೀ ಪರೀಕ್ಷೆಗೂ ಸಾಮಾನ್ಯ ಗುಂಪಿನವರು 1000 ರೂ., ಹಿಂದುಳಿದ ವರ್ಗದವರು 800 ರೂ. ಶುಲ್ಕ ಕಟ್ಟಬೇಕು. ಅಲ್ಲದೇ ಪರೀಕ್ಷೆ ನಡೆಯುವ ಕೇಂದ್ರಕ್ಕೆ ಹೋಗಿ ಬರೆದು ಬರಬೇಕು. ಈ ಆರ್ಥಿಕ ಹೊರೆಯನ್ನು ತಮಗೆ ಬರುತ್ತಿರುವ ಕಡಿಮೆ ಸಂಬಳದಲ್ಲೇ ಅವರು ಭರಿಸಬೇಕಾಗುತ್ತದೆ. ಈ ಕಷ್ಟ ಯಾರಿಗೆ ಅರ್ಥವಾಗುತ್ತದೆ? ಮಾತ್ರವಲ್ಲದೇ ಆ ಪ್ರಶ್ನೆ ಪತ್ರಿಕೆಗಳಲ್ಲಿರುವ ಪ್ರಶ್ನೆಗಳು ಪಾಠಪ್ರವಚನಕ್ಕೆ ಪೂರಕವಾಗಿ ಇರುವುದೇ ಇಲ್ಲ. ಅಷ್ಟು 'ಹೈ ಸ್ಟಾಂಡರ್ಡ್' ಯಾಕೆ ಬೇಕು? ನಮ್ಮದೇ ಸಮಾಜದ, ನಮ್ಮಂತಹದೇ ಮಕ್ಕಳಿಗೆ ಪಾಠ ಮಾಡಲು ಅಂತಹ ಕೈಗೆಟುಕದ ಮಾನದಂಡ ಯಾಕೆ ಬೇಕು? 'ನೆಟ್' ಹೆಸರಿನಲ್ಲೂ ಉಪನ್ಯಾಸಕ ವರ್ಗಕ್ಕೆ ಅನ್ಯಾಯವಾಗುತ್ತಿದೆ. 'ನೆಟ್'ನ ಮೌಲ್ಯಮಾಪನ ಪಾರದರ್ಶಕವಾಗಿಲ್ಲ, ಅಭ್ಯರ್ಥಿಗಳಿಗೆ ತಮಗೆ ಎಷ್ಟು ಅಂಕ ಬಂತೆಂದು ಗೊತ್ತಾಗುವುದೇ ಇಲ್ಲ.

ಇತ್ತೀಚೆಗೆ ಸರಕಾರೀ ಕಾಲೇಜುಗಳಲ್ಲಿರುವ ಅತಿಥಿ ಉಪನ್ಯಾಸಕರನ್ನು ಗಮನದಲ್ಲಿಟ್ಟುಕೊಂಡೇ ಒಂದು ಸರಕಾರಿ ಆದೇಶ ಬಂತು. ಎಲ್ಲಾ ಪದವಿ ತರಗತಿಗಳಿಗೆ ಒಂದೇ ಭಾಷಾ ಪಠ್ಯಪುಸ್ತಕ ಜಾರಿಗೆ ಬರಬೇಕೆಂದು! ಆ ಆದೇಶದ ಉದ್ದೇಶ ಸರಕಾರದ ಆರ್ಥಿಕ ಹೊರೆ ಕಡಿಮೆ ಮಾಡುವುದು! ಅದರ ಅರ್ಥ ರಾಜ್ಯಾದ್ಯಂತ 10,500 ಅತಿಥಿ ಉಪನ್ಯಾಸಕರನ್ನು ಮತ್ತು ಅದರ ಮೂರು ಪಟ್ಟು ಇರುವ ಆಡಳಿತ ಮಂಡಳಿಗಳಿಂದ ನೇಮಕಗೊಂಡಿರುವ ಖಾಸಗೀ ಕಾಲೇಜುಗಳ ತಾತ್ಕಾಲಿಕ ಉಪನ್ಯಾಸಕವನ್ನು ಮನೆಗೆ ಕಳುಹಿಸಿ ಸರಕಾರಿ ಆರ್ಥಿಕ ಹೊರೆ ಕಡಿಮೆ ಮಾಡಿಕೊಳ್ಳಬೇಕೆಂದು!

ಉನ್ನತ ಶಿಕ್ಷಣ ಪಡೆದ / ಪಡೆಯುತ್ತಿರುವ ಯುವಕ / ಯುವತಿಯರ ಶೋಷಣೆ ಕೊನೆಗೊಳ್ಳುವುದು ಯಾವಾಗ? ಯಾವ ಪಕ್ಷದ ಸರಕಾರವೂ ಈ ಬಗ್ಗೆ ಗಮನಹರಿಸುತ್ತಿಲ್ಲ. ಅವರಿಗೆ ಸಂವಿಧಾನ ಕೊಡಮಾಡಿದ ಅಭಿವ್ಯಕ್ತಿ ಸ್ವಾತಂತ್ರ್ಯವೂ ಇಲ್ಲ. ಅವರು ಸಂಘಟಿತರಾಗುವುದು ಕಷ್ಟಸಾಧ್ಯ. ವೃತ್ತಿ ಭದ್ರತೆ ಇಲ್ಲದ ಅವರನ್ನು ಯಾವಾಗಬೇಕಾದರೂ ಕೆಲಸದಿಂದ ಕಿತ್ತು ಹಾಕಬಹುದು.

ಕಾಲೇಜು ಉಪನ್ಯಾಸಕರೆಂದರೆ ಎಲ್ಲರೂ ಯುಜಿಸಿ ವೇತನ ಪಡೆಯುವ ಶ್ರೀಮಂತರೆಂಬ ತಪ್ಪು ಅಭಿಪ್ರಾಯ ಸಮಾಜದಲ್ಲಿದೆ. ವಾಸ್ತವವಾಗಿ ಈಗ ಕಾಲೇಜುಗಳಲ್ಲಿ ಕೇವಲ 20% ಯುಜಿಸಿ ಶಿಕ್ಷಕರು ಮಾತ್ರ ಉಳಿದಿದ್ದಾರೆ. ಇನ್ನು ಕೆಲವೇ ವರ್ಷಗಳಲ್ಲಿ ಅವರೂ ನಿವೃತ್ತರಾದರೆ, ಕಾಲೇಜುಗಳಲ್ಲಿ ಉಳಿಯುವುದು ಈ ಬಹುಸಂಖ್ಯಾತ ಶೋಷಿತ ಉಪನ್ಯಾಸಕರು ಮಾತ್ರ.

ಆದ್ದರಿಂದ ಉನ್ನತಶಿಕ್ಷಣ ಉಳಿಯಬೇಕಾದರೆ, ಸರಕಾರ ಕೂಡಲೇ ರಾಜ್ಯದಾದ್ಯಂತ ಇರುವ 350 ಸರಕಾರಿ ಕಾಲೇಜುಗಳಲ್ಲಿರುವ ಅತಿಥಿ ಉಪನ್ಯಾಸಕರ ಮತ್ತು 300 ಅನುದಾನಿತ ಖಾಸಗೀ ಕಾಲೇಜುಗಳಲ್ಲಿರುವ ತಾತ್ಕಾಲಿಕ ಉಪನ್ಯಾಸಕರ ಹುದ್ದೆಗಳನ್ನು ಅವರು ಇರುವಲ್ಲೆ (ಮೂರು ವರ್ಷಗಳ ಪ್ರೊಬೇಶನರಿ ಪೀರಿಯಡ್ ನಂತರ) ಕಾಯಂಗೊಳಿಸಬೇಕು. ಎಲ್ಲರಿಗೂ ಕನಿಷ್ಠ ತಿಂಗಳ ರೂ. 25,000/- ವೇತನ ಸಿಗುವಂತೆ ಆದೇಶ ಹೊರಡಿಸಬೇಕು. ಯಾಕೆಂದರೆ ಕೆಲವರು ಈಗಾಗಲೇ 10-15 ವರ್ಷಗಳಿಂದ ತಾತ್ಕಾಲಿಕ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಎಲ್ಲರಿಗೂ ಪ್ರಾವಿಡೆಂಟ್ ಫಂಡ್ (ಭವಿಷ್ಯ ನಿಧಿ) ಸವಲತ್ತು ಸಿಗುವಂತೆ ಮಾಡಬೇಕು. ಎಲ್ಲಾ ಖಾಸಗೀ ಕಾಲೇಜುಗಳನ್ನು ಸರಕಾರೀಕರಣಗೊಳಿಸಬೇಕು. 'ನೆಟ್' ಪರೀಕ್ಷೆ ಸುಲಭಗೊಳಿಸಿ, ಹಳ್ಳಿಗಾಡಿನ ಪ್ರತಿಭಾವಂತರಿಗೆ ಕಾಯಂ ಉಪನ್ಯಾಸಕರಾಗಿ ಸೇವೆ ಸಲ್ಲಿಸುವ ಅವಕಾಶ ನೀಡಬೇಕು.

ಒಟ್ಟಿನಲ್ಲಿ ಕೃಷಿ, ಆರೋಗ್ಯ ಕ್ಷೇತ್ರಗಳಂತೆ, ಉನ್ನತ ಶಿಕ್ಷಣವನ್ನೂ ಪ್ರಥಮ ಆದ್ಯತಾ ಕ್ಷೇತ್ರವೆಂದು ಪರಿಗಣಿಸಿ, ಶಿಕ್ಷಕ ಪರವಾದ, ಆ ಮೂಲಕ ಶಿಕ್ಷಣ ಪರವಾದ ಸ್ಪಷ್ಟ ಶಿಕ್ಷಣ ನೀತಿಯನ್ನು ಸರಕಾರ ಪ್ರಕಟಿಸಬೇಕು. ಆಗ ಮಾತ್ರ ವರ್ಷ ವರ್ಷ ನಡೆಸುವ ಶಿಕ್ಷಕರ ದಿನಾಚರಣೆ ಅರ್ಥಪೂರ್ಣವಾಗುತ್ತದೆ.


ಈ ಬಗ್ಗೆ ಉನ್ನತ ಶಿಕ್ಷಣ ಸಚಿವ ಆರ್.ವಿ.ದೇಶಪಾಂಡೆ ಗಮನ ಹರಿಸುವರೇ?

● ಡಾ. ಹಯವದನ ಉಪಾಧ್ಯ,

[illegible]

ಸುದ್ದಿಗನ್ನ
ಸಾಹಿತಿ-ಕಲಾವಿದ-ಚಿಂತ
ಸಂದರ್ಶನ

ಕಳೆದ ಎರಡು ವಾರಗಳಿಂದ ವಾದ ವಿವಾದದ ಕೇಂದ್ರ ಬಿಂದುವಾಗಿದ್ದ 'ಘುಂಢಿ' ಎಂಬ ಕಾದಂಬರಿಯ ಕರ್ತೃ ಯೋಗೇಶ್ ಮಾಸ್ಟರ್ ಅವರ ಬಗ್ಗೆ - ಅವರ ಆಪ್ತ ವಲಯವನ್ನು ಹೊರತುಪಡಿಸಿದರೆ- ರಾಜ್ಯದ ಜನಸಾಮಾನ್ಯರಿಗಿರಲಿ, ಪ್ರಧಾನ ಧಾರೆಯ ಸಾಹಿತಿಗಳಿಗಾಗಲಿ, ರಂಗಕರ್ಮಿಗಳಿಗಾಗಲಿ ಗೊತ್ತೇ ಇರಲಿಲ್ಲ. ಅವರು ಯಾರು, ಅವರ ಹಿನ್ನೆಲೆ ಎಂತಹದ್ದು, ಅವರ ವಿಚಾರಧಾರೆ ಯಾವ ರೀತಿಯದ್ದು ಎಂಬ ಕುತೂಹಲ ಎಲ್ಲರಲ್ಲೂ ಇತ್ತು. ಹಲವು ದಿನಪತ್ರಿಕೆಗಳಲ್ಲಿ ಮತ್ತು ಹೆಚ್ಚಿನ ಟಿವಿ ಚಾನೆಲ್‌ಗಳಲ್ಲಿ ಅವರ ಕೃತಿಯ ಸುತ್ತ ರೋಚಕ ವಿಷಯಗಳು ಬಿತ್ತರಗೊಂಡವೇ ಹೊರತು ಯೋಗೇಶ್ ಮಾಸ್ಟರ್ ಅವರ ವ್ಯಕ್ತಿತ್ವವನ್ನು ಪರಿಚಯಿಸುವ ಪ್ರಯತ್ನ ನಡೆಯಲೇ ಇಲ್ಲ. ನಿಮ್ಮ ಈ ಪತ್ರಿಕೆ ಮತ್ತು ಓದುಗರು ವಿಶಿಷ್ಟ! ಆದ್ದರಿಂದ ಹಲವಾರು ಓದುಗರು ಯೋಗೇಶ್ ಮಾಸ್ಟರ್ ವ್ಯಕ್ತಿತ್ವ, ಚಿಂತನೆ, ಹಿನ್ನೆಲೆ ಇತ್ಯಾದಿ ಬಗೆಗಿನ ತಮ್ಮ ಕುತೂಹಲವನ್ನು ಇಂಗಿಸಬೇಕೆಂದು ನಮ್ಮನ್ನು ಕೇಳಿದ್ದರು. ಆ ನಿಟ್ಟಿನಲ್ಲಿ ಈ ಸಂದರ್ಶನವನ್ನು ನಡೆಸಲಾಗಿದೆ. ವಿ ಪ್ರೆಸೆಂಟ್ 'ಘುಂಢಿ' ಯೋಗೇಶ್ ಮಾಸ್ಟರ್!!



ಅಜ್ಞಾನಿಗಳಿಗೆ ನನ್ನ ಮತ್ತಷ್ಟು ಕೃತಿಗಳು ದೊರಕಲಿವೆ

ಯೋಗೇಶ್ ಮಾಸ್ಟರ್

ಪ್ರಶ್ನೆ: ಯೋಗೇಶ್ ಮಾಸ್ತರ್ ಅವರೇ, ಕಳೆದ ಎರಡು ವಾರಗಳಿಂದ ತಮ್ಮ ಕೃತಿ 'ಘುಂಢಿ'ಯದ್ದೇ ಸುದ್ದಿ. ಏನಿದು 'ಘುಂಢಿ'? ಯಾಕೆ ಹಿಂದೂತ್ವವಾದಿ ಸಂಘಟನೆಗಳು ಇದರ ವಿರುದ್ಧ ತಿರುಗಿಬಿದ್ದಿದ್ದಾವೆ ಎಂದು ನಿಮಗೆ ಅನ್ನಿಸುತ್ತದೆ?

ಉತ್ತರ: ಘುಂಢಿ - ಒಂದು ಆರಣ್ಯಕ ಹೆಸರು. ಕಾಶಿಯಲ್ಲಿ ಘುಂಢಿ ಗಣಪತಿಯ ದೇವಸ್ಥಾನವಿದೆ ಹಾಗೂ ಈ ಕಥೆಯ ಕ್ಷೇತ್ರವೂ ಅವಿಮುಕ್ತ ಅಂದರೆ, ಈಗಿನ ಕಾಶಿಯಾದ್ದರಿಂದ ಘುಂಢಿಯೊಂದು ಸೂಕ್ತವಾದ ಹೆಸರಾಗಿ ನನಗೆ ಕಂಡಿತು.


ಶತಶತಮಾನಗಳಿಂದ ನಡೆಯುತ್ತಿರುವ ವರ್ಗ ಮತ್ತು ವರ್ಣ ಸಂಘರ್ಷಗಳೇ ಈ ಕಥೆಯ ಕೇಂದ್ರವಾದರೂ, ಲೇಖಕನಾಗಿ ನಾನು ಸಾಮರಸ್ಯವನ್ನು ಕನಸಿದ್ದೇನೆ, ಕಥಿಸಿದ್ದೇನೆ. ಪೌರಾಣಿಕ ಕಥಾನಕವನ್ನು ಮಾನವೀಯ ನೆಲೆಗಟ್ಟಿನಿಂದ ನೋಡಲು ತಾಳ್ಮೆಯಿರದ ಹಾಗೂ ಕಥೆಯಲ್ಲಿನ ಸೂಕ್ಷ್ಮ ಭಾವಗಳನ್ನು ಗುರುತಿಸಲಾಗದೇ, ಬರೀ ಪತ್ರಿಕಾ ಹೇಳಿಕೆಯೊಂದನ್ನು ಆಧರಿಸಿ ಗದ್ದಲವೆಬ್ಬಿಸಿದ ಅವರ ವರ್ತನೆಯ ಬಗ್ಗೆ ನನಗೆ ಸಾಂಸ್ಕೃತಿಕ ಆಘಾತವಾಗಿದೆ. ಅವರ ಅಜ್ಞಾನದ ಬಗ್ಗೆ ಕನಿಕರವೆನಿಸಿದೆ.

ಪ್ರಶ್ನೆ: ಕನ್ನಡ ಸಾರಸ್ವತ ಲೋಕದಲ್ಲಿ ಬಹುಪಾಲು ಜನರಿಗೆ ತಮ್ಮ ಪರಿಚಯವಿಲ್ಲ; ಆದರೆ ತಮ್ಮ ಓದು, ಬರೆದಿರುವ ಕೃತಿಗಳು ಎಲ್ಲವನ್ನೂ ನೋಡಿದರೆ ಬಹಳ ಕಾಲದಿಂದ ತಾವು ಸಾಹಿತ್ಯ ಕೃಷಿಯಲ್ಲಿದ್ದೀರಿ ಎಂದು ಗೊತ್ತಾಗುತ್ತದೆ. ತಾವು ಇಲ್ಲಿಯುತನಕ ಏನೇನು ಬರೆದಿದ್ದೀರಿ? ಅದರ ಪ್ರೇರಣೆಯೇನು? ನಿಮ್ಮನ್ನು ನೀವು ಯಾವ ರೀತಿಯ ಬರಹಗಾರ ಎಂದುಕೊಳ್ಳುತ್ತೀರಿ?

ಉತ್ತರ: ನಾನು ಪ್ರಾರಂಭಿಸಿದ ಸಾಹಿತ್ಯ ಪ್ರಕಾರವೆಂದರೆ ಕಾವ್ಯ. 1984ರಲ್ಲಿ ನನ್ನ ಮೊದಲ ಕವನ ಸಂಕಲನ 'ಭಗ್ನ ಹೃದಯ' ಬಿಡುಗಡೆಯಾಯಿತು. ನಂತರ ನಾನು ತರಂಗ, ಕರ್ಮವೀರ ಇತ್ಯಾದಿ ವಾರಪತ್ರಿಕೆಗಳಲ್ಲಿ ಸಣ್ಣಕಥೆಗಳನ್ನು ಬರೆಯುತ್ತಿದ್ದೆ. ನಾನು 'ಗಿರಿಜಾಸುತ, ವಿಶ್ವಾಮಿತ್ರ, ಜೆಕೆವೈ, ಸುಮಸ್ವಾಮಿ' ಹೀಗೆ- ವಿವಿಧ ಕಾವ್ಯನಾಮಗಳಲ್ಲಿ ಬರೆಯುತ್ತಿದ್ದ ಕಾರಣ ಸಾರಸ್ವತ ಲೋಕದಲ್ಲಿ ಈ ನನ್ನ ಹೆಸರು ಯೋಗೇಶ್ ಮಾಸ್ಟರ್ ಹೆಚ್ಚು ತಿಳಿದಿಲ್ಲ, ಯೋಗೇಶ್ ಮಾಸ್ಟರ್ ಎಂಬ ಹೆಸರನ್ನು ನಾನು ಚಾಲ್ತಿಯಲ್ಲಿ ಇಟ್ಟುಕೊಂಡಿರುವುದೂ ಕಳೆದ ಮೂರು ವರುಷಗಳಿಂದ. ಇನ್ನು ಈ ಹೆಸರು ಬದಲಿಸುವ ಹಾಗಿಲ್ಲ!

ಸಣ್ಣಕಥೆಗಳು, ಕಾದಂಬರಿ, ಕವನ ಹಾಗೂ ಗೀತ-ರಚನೆ, ಅದರಲ್ಲೂ ನೃತ್ಯ ನಾಟಕಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದುಂಟು. ಸ್ವತಂತ್ರ ಕೃತಿಯಾಗಿ 'ಘುಂಢಿ' ಆರನೆಯದು. ಇದಕ್ಕೂ ಮುನ್ನ 'ಮರಳಿ ಮನೆಗೆ' (ಕಾದಂಬರಿ), 'ಜೀವನ ಸಂಜೀವನ' (ಕಥಾಸಂಕಲನ), 'ಮಳೆ ಬಂದು ನಿಂತಾಗ' (ರಂಗಗೀತೆಗಳ ಸಂಗ್ರಹ), 'ಕೊನೆಯ ಅಂಕ' (ನಾಟಕ) ಮತ್ತು 'ನಾನ್ ಕೋಳೀಕೆ ರಂಗಾ' (ಮಕ್ಕಳ ಕಥಾ ಸಂಕಲನ) ಎಂಬ ಕೃತಿಗಳನ್ನು ರಚಿಸಿದ್ದೇನೆ. ಪ್ರಕಟಣೆಗೆ ಸಿದ್ಧವಾಗಿರುವಂತಹ ಹಲವಾರು ಕಾದಂಬರಿಗಳು ಮತ್ತು ಇತರ ಸಾಹಿತ್ಯ ಪ್ರಕಾರಗಳೂ ಇವೆ.

ನನ್ನ ಬರವಣಿಗೆಗೆ ಪ್ರೇರಣೆ ಎಂದರೆ, ಬಾಲ್ಯದಲ್ಲಿ ಸಾಹಿತ್ಯಗಳನ್ನು ಓದಲು ಪ್ರೇರೇಪಿಸಿದ ನನ್ನ ಅಜ್ಜಿ, ನನ್ನಜ್ಜಿ ಪಾರ್ವತಮ್ಮ ನನಗೆ ತಮಗೆ ಪರಿಚಿತವಿರುವ ಸಾಹಿತ್ಯಗಳ



ಮೌಲ್ಯಗಳನ್ನು ಹೇಳಿ, ತಾವು ಓದಿ ಹೇಳುತ್ತಿದ್ದುದ್ದಲ್ಲದೇ ನನ್ನಿಂದ ಓದಿಸಿ ಕೇಳುತ್ತಿದ್ದರು.

ನಾನು ಬರವಣಿಗೆಯಲ್ಲಿ ಕಥೆಗಾರನಾದರೂ, ನನ್ನನ್ನು ಕವಿಯಾಗಿಯೂ ಗುರುತಿಸಿಕೊಳ್ಳುತ್ತೇನೆ.

ಪ್ರಶ್ನೆ: ತಮ್ಮ ಬಾಲ್ಯ, ಕುಟುಂಬ, ಹಿನ್ನೆಲೆ, ಸಮುದಾಯದ ಬಗ್ಗೆ ಒಂದಿಷ್ಟು ಹೇಳಿ.


ಉತ್ತರ: ನಾನು ತಂದೆಯಿಂದ ದೂರಾಗಿ ತಾಯಿ ಮತ್ತು ಆಕೆಯ ಕುಟುಂಬದವರೊಂದಿಗೆ ಬೆಳೆದುಬಂದವನು. ಕಟ್ಟುನಿಟ್ಟಾಗಿ ಶರಣ ಸಂಸ್ಕೃತಿಯನ್ನು (ಜಾತೀಯ ಸಂಪ್ರದಾಯಗಳನ್ನಲ್ಲ) ರೂಢಿಸಿಕೊಂಡು ಬಂದಂತಹ ಕೌಟುಂಬಿಕ ವಾತಾವರಣ. ಶರಣರ ವಚನಗಳೇ ನನಗೆ ಜೋಗುಳಗಳು, ಶಿಶುಗೀತೆಗಳು. ಪ್ರೌಢ್ಯವೆಂದರೆ ಮೂಗುಮುರಿಯುತ್ತಿದ್ದ ನನ್ನ ಅಜ್ಜಿ ದೇವರನ್ನಾಗಲಿ, ಧಾರ್ಮಿಕ ಆಚರಣೆಗಳನ್ನಾಗಲಿ ಪ್ರಶ್ನಿಸುವುದಷ್ಟೇ ಅಲ್ಲದೇ, ಅವುಗಳಿಗೆ ಬೇರೆ ರೀತಿಯಲ್ಲಿ ಒಪ್ಪಲರ್ಹವಾಗುವ ತಾತ್ವಿಕವಾದ ನೆಲೆಗಟ್ಟಿನಿಂದ ಆಲೋಚನೆ ಮಾಡುತ್ತಿದ್ದರು. ನಾನು ಅವರ ಗರಡಿಯಲ್ಲಿ ಪಳಗಿದವನು. ಧರ್ಮ ಅಥವಾ ಜಾತಿ ಇತ್ಯಾದಿಗಳೊಂದಿಗೆ ಗುರುತಿಸಿಕೊಳ್ಳಲು ನಮಗೆ ಆಸ್ಪದವೇ ಇರಲಿಲ್ಲ, ಆದರೂ ನಮಗೆ ಆಯ್ಕೆಯ ಸ್ವಾತಂತ್ರ್ಯವಿತ್ತು.

ಪ್ರಶ್ನೆ: ನಿಮ್ಮ ಮೇಲೆ ಹೆಚ್ಚಿನ ಪ್ರಭಾವ ಬೀರಿದ ವ್ಯಕ್ತಿ ಪುಸ್ತಕ, ಸಂಗತಿಗಳು ಯಾವುವು?

ಉತ್ತರ: ನನ್ನ ಮೇಲೆ ಪ್ರಭಾವ ಬೀರಿದ ಪುಸ್ತಕಗಳೆಂದರೆ, ಕೆ.ಟಿ.ಗಟ್ಟಿಯವರ ಕಾದಂಬರಿಗಳು. ಅವರ ಬರಹ ಪ್ರಭಾವ ಬೀರಿದವು ಅನ್ನುವುದಕ್ಕಿಂತ ನನಗಾಗಲೇ ಇರುವಂತಹ ವಿಚಾರಗಳಿಗೆ ಪುಷ್ಟಿ ನೀಡಿದವು. ನಾನು ಹೈಸ್ಕೂಲಿನಲ್ಲಿದ್ದಾಗ ನಾನು ಮೊದಲು ಓದಿದ ಅವರ ಕೃತಿ 'ಅಬ್ರಾಹ್ಮಣ'. ಅದರ ನಂತರ ಅವರ ಎಲ್ಲಾ ಕಾದಂಬರಿಗಳನ್ನು ಓದುತ್ತಾ ಬಂದೆ. ನಾ.ಡಿಸೋಜರ 'ಕ್ರೈತಾನ್ ಗಾಂಧಿಯ ಸ್ವಾತಂತ್ರ್ಯ ಹೋರಾಟ', 'ಬಾವುಗ್', 'ಕೊಳಗ' ಇತ್ಯಾದಿ ಕಾದಂಬರಿಗಳು, ಬೋಳುವಾರುರವರ 'ಜೆಹಾದ್', ಲಂಕೇಶರ 'ಟೀಕೆ ಟಿಪ್ಪಣಿ'ಗಳು ನಾನು ಸಾಹಿತಿಯಾಗಿ ರೂಪುಗೊಳ್ಳುತ್ತಿದ್ದ ಹಾಗೂ ನಂತರದ ಹಂತದಲ್ಲಿಯೂ ತಾತ್ವಿಕವಾಗಿ ಪ್ರಭಾವ ಬೀರಿರುವಂತವು.

ಪ್ರಶ್ನೆ: ಇಷ್ಟು ದಿನ ನೀವು ಎಲ್ಲಿದ್ದಿರಿ (ಅಂದರೆ ಯಾವ ವೃತ್ತಿಯಲ್ಲಿ) ಮತ್ತು ಅಲ್ಲಿ ಏನು ಮಾಡುತ್ತಿದ್ದಿರಿ?

ಉತ್ತರ: ನಾನು ಬಹುಕಾಲ, ಬಹುಪಾಲು ಗುರುತಿಸಲ್ಪಟ್ಟಿದ್ದು ರಂಗಕರ್ಮಿಯಾಗಿಯೇ. ಉಪಾಧ್ಯಾಯನಾಗಿ ನಾನು ಶಾಲೆಗಳಲ್ಲಿ ಕೆಲಸ ಮಾಡುತ್ತಿದ್ದರೂ, ಅಲ್ಲಿ ಪಾಠಪ್ರವಚನಗಳಿಗಿಂತ ರಂಗಚಳವಳಿಯನ್ನೇ ಮಾಡುತ್ತಿದ್ದದ್ದು. ಯಾರು ಪಠ್ಯದ ವಿಷಯಗಳಲ್ಲಿ ಹಿಂದುಳಿದವರು ಎಂದು ಗುರುತಿಸಲ್ಪಟ್ಟಿದ್ದರೋ ಅಂತವರ ಆತ್ಮವಿಶ್ವಾಸ ಹೆಚ್ಚಿಸಲು, ಅವರನ್ನು ರಂಗಭೂಮಿಯಲ್ಲಿ ತೊಡಗಿಸುತ್ತಿದ್ದೆ. ಆದರಿಂದ ಅವರಿಗೆ ಸಾಮಾನ್ಯವಾಗಿ ಓದಿನಲ್ಲಿ ಹಿಂದುಳಿದ ಮಕ್ಕಳು ಎದುರಿಸುವ ಕೀಳರಿಮೆಯಿಂದ ಹೊರಬರಲು ಸಾಧ್ಯವಾಗುತ್ತಿತ್ತು. ಶಾಲೆಗೆ ಮತ್ತು ನನ್ನ ರಂಗ ತಂಡ 'ರಾಜಮಾರ್ಗ'ಕ್ಕೆ ನನ್ನ ಸೀಮಿತ ಅವಧಿಯನ್ನು ಹಂಚಿಕೊಳ್ಳಲು ತೊಡಕಾದಾಗ, ನಾನು ಸಂಪೂರ್ಣವಾಗಿ ರಂಗಭೂಮಿಯನ್ನೇ ಆಯ್ದುಕೊಂಡೆ. ನಾಟಕದ ರಚನೆ, ಗೀತ ರಚನೆ ಮತ್ತು ನೃತ್ಯ ನಾಟಕಗಳ ರಚನೆ ಜೊತೆಜೊತೆಯಾಗಿ ಸಾಗುತ್ತಿತ್ತು.



ಪ್ರಶ್ನೆ: ತಮ್ಮ ಇತರ ಕೃತಿಗಳಲ್ಲೂ ನೀವು ವರ್ತಮಾನ ಮತ್ತು ಪುರಾಣವನ್ನು ಅನುಸಂಧಾನ ಮಾಡಿ ಬರೆಯುವ ಪ್ರಯತ್ನ ಮಾಡಿದ್ದೀರಿ. ಈ ಪ್ರಕಾರದ ಆಯ್ಕೆಯ ಹಿಂದಿನ ಕಾರಣಗಳೇನು? ಈ ಪ್ರಕಾರವು ಒಡ್ಡುವ ಸವಾಲುಗಳನ್ನು ಹೇಗೆ ಎದುರಿಸಿದ್ದೀರಿ?

ಉತ್ತರ: ಚಾಮರಾಜಪೇಟೆಯ ನಾಲ್ಕನೇ ಮುಖ್ಯರಸ್ತೆಯಲ್ಲಿದ್ದ ನಮ್ಮ ಮನೆಯ ಪಕ್ಕದಲ್ಲಿಯೇ ಶ್ರೀಸಿದ್ಧಾಶ್ರಮವನ್ನು ಹೊಂದಿದ್ದ ನನಗೆ ಹರಿಕಥೆಗಳನ್ನು ಮತ್ತು ಪುರಾಣಗಳ ಕಥೆಗಳನ್ನು ಕೇಳುತ್ತಾ ಬೆಳೆದು ಬರುವಂತಾಯಿತು. ಹಾಗಾಗಿ ನನಗೆ ಸಹಜವಾಗಿ ಪುರಾಣ-ಶ್ರವಣಗಳಲ್ಲಿ ಆಸಕ್ತಿಯಿತ್ತು, ಹಾಗಂತ ನಾನು ಅವುಗಳನ್ನು ಮೂಢ್ಯದಿಂದ ಸ್ವೀಕರಿಸುವ ಮನಸ್ಥಿತಿಯಲ್ಲಿ ಇರಲಿಲ್ಲ, ಜೊತೆಗೆ ಮನೆಯವರ ವೈಚಾರಿಕ ಪ್ರಜ್ಞೆಯೂ ಅಂತಹ ಕಥೆಗಳನ್ನು ತುಲನೆ ಮಾಡುವಂತಿತ್ತು, ಈ ಪೌರಾಣಿಕ ಕಥೆಗಳ ಒಗಟುಗಳನ್ನು ಅಥವಾ ಸಂಕೇತಗಳನ್ನು ಒಡೆಯುವಂತಹ ಅಥವಾ ಒಳಹೊಕ್ಕು ಹೋಗುವಂತಹ ಜಿಜ್ಞಾಸೆ ನನ್ನಲ್ಲಿ ಮೂಡುತ್ತಿತ್ತು, ಅಂತಹುದೇ ಪ್ರಯತ್ನ ಈ 'ಘುಂಢಿ'. ಆದರೆ ಈ ಸಾಹಸ ನನಗೇನೂ ಹೊಸತಲ್ಲ, 'ಶ್ರೀಮತಿ ಜಾನಕಿ ರಾಂ' ಎಂಬ

ನಾಟಕದಲ್ಲಿ ತ್ರೇತಾಯುಗದ ಶ್ರೀರಾಮನ ಹೆಂ
ಉತ್ತರ ರಾಮಾಯಣದಲ್ಲಿ ಮತ್ತೆ ಅರಣ್ಯವಾಸಕ್ಕೆ
ಅದನ್ನು ಶೋಷಣೆ ಎಂದು ಪರಿಗಣಿಸಿದ್ದಲ್ಲದೇ, ಕ
ಭೂಮಿಯು ಬಾಯ್ತೆರೆದು ಭೂದೇವಿಯು ಸಿ
ತನ್ನ ಮಡಿಲಲ್ಲಿ ಕೂರಿಸಿಕೊಂಡು ಹೋಗ
ಮಿಥ್‌ಅನ್ನು ಬೇರೆಯೇ ರೀತಿಯಲ್ಲಿ ಪ್ರಸ್ತಾಪಿಸಿದ್ದೆ
ರೀತಿಯಲ್ಲಿ, ಸಮುದ್ರ ಮಥನದ ಕಥೆಯನ್ನು,
ಕಥೆಯನ್ನು ಪ್ರಸ್ತುತ ವಿದ್ಯಮಾನಗಳಿಗೆ ಅನು
ಅನುಸಂಧಾನ ಮಾಡುವ ಯತ್ನ ಮಾಡಿದ್ದೇನೆ.
ಪೌರಾಣಿಕ ಮಾತ್ರವಲ್ಲ, ಜೀವನ ದರ್ಶ
ಕಥನಗಳನ್ನಾಗಿ ರೂಪಿಸಿರುವಂತಹ ಅನೇಕ ಕಾದಂ
ರಚಿಸಿದ್ದೇನೆ.

ಪ್ರಶ್ನೆ: 'ಘುಂಢಿ'ಗೆ ವಾಪಸ್ ಬರು
ಅದರಲ್ಲಿರುವ ವಸ್ತು ಸಂಶೋಧನೆ ಮತ್ತು ಇತಿಹ
ಹೊಸದಲ್ಲವಾದರೂ ಕನ್ನಡದ ಕಾದಂಬರಿ
ಹೊಸತು. ಎಸ್.ಎಲ್.ಭೈ
ಸಹ ಇಂತಹ ಪ್ರಯತ್ನಗಳ
ಇತಿಹಾಸ ಮತ್ತು ವ
ಎರಡಕ್ಕೂ ಅಪಚಾರ ಮ
ಏಕೆಂದರೆ ಅವರು ಆದರ
ಪೂರ್ವ ನಿರ್ಧಾರಿತ ಉದ್ದೇ
ಪೂರ್ವಗ್ರಹಗಳಿಗೆ ಮಣಿದ
ಕಾದಂಬರಿಯನ್ನು ಕರಪತ್ರ
ಇಳಿಸಿಬಿಟ್ಟಿದ್ದಾರೆ. ತಾ
ಕಾದಂಬರಿಯನ್ನು ಬರೆ
ಪಾತ್ರಗಳು ನಿಮಗೆ
ಅಧೀನವಾಗಿದ್ದವು?

ಉತ್ತರ: ನಾನು 'ನಾಯಿ
ಹೊರತಾಗಿ ಇದುವರೆಗೂ ಭೈರಪ್ಪನವರ
ಪುಸ್ತಕಗಳನ್ನೂ ಓದಿಲ್ಲ, ಹೈಸ್ಕೂಲ್‌ನಲ್ಲಿದ್ದಾಗ 'ನಾ
ನನಗೆ ಥ್ರಿಲ್ ಕೊಟ್ಟಿತಾದರೂ, ಮುಂದಿನ ದಿನ
ಕಾದಂಬರಿಯ ವಿಷಯವೇ ನನಗೆ ಪ್ರಶ್ನಾ
ಕಂಡಿದ್ದರಿಂದ ನನ್ನ ದೃಷ್ಟಿಯಲ್ಲಿ ಅದು ಅ
ವಿಶೇಷವಾಗಿ ಕಾಣಿಸಲಿಲ್ಲ, ಅವರ ಕೃತಿಗಳನ್ನು ಓ
ಎಂದೇನೂ ಇರಲಿಲ್ಲ, ಆದರೆ, ಓದುವ ಅವಕ
ಒದಗಲಿಲ್ಲ.

ನನ್ನ 'ಘುಂಢಿ'ಯ ಕಾದಂಬರಿಗಳ ಪಾತ್ರಗಳ
ಬಂದರೆ, ಬರಿದೇ ನೆನೆಯಲೂ ನನ
ರೋಮಾಂಚನವಾಗುತ್ತದೆ. ಇರುವಂತಹ ವಾತಾ
ಯಾವುದೇ ಭಯ ಮತ್ತು ಆಸೆಗಳಿರದೇ
ಜೀವನವನ್ನು ಪ್ರೀತಿಸುತ್ತಾ ಬದುಕುವ ಅರಣ್ಯವಾ
ತನ್ನ ಮಗನನ್ನು ಸ್ವಾವಲಂಬನೆಯಿಂದ
ಪ್ರಾಯೋಗಿಕವಾಗಿ ಹೇಳಿಕೊಡುವ ಕಾಮರೂಪ
ವಸುಮಾ, ಬದಲಾವಣೆಯ ಘಟ್ಟದಲ್ಲಿದ್ದ
ಸಮುದಾಯದಲ್ಲಿ ಗುರುತಿಸಿಕೊಂಡಿದ್ದರೂ ಪ್ರಾಯೆ
ತನ್ನನ್ನು ತೊಡಗಿಸಿಕೊಳ್ಳಲು ಯತ್ನಿಸುವ ಯಾಜ್ಞಿಕ
ಶೂದ್ರರ ಸಮುದಾಯವನ್ನು ಪ್ರತಿನಿಧಿಸುವ
ಅರಣ್ಯಕರ ಮುಗ್ಧ ಮತ್ತು ಸಹಜ ಸಿದ
ಬಾಯಾಗುವ ವದೀರ, ತನ್ನದೇ ಆದಂತಹ
ಸಾಧನೆಗಳಿಂದ ಯಾವುದೇ ಒಂದು ವರ್ಗಕ್ಕೆ ನಿ
ಸೇರದೇ ಪರೋಕ್ಷವಾಗಿ ಅಸ್ತಿತ್ವವಾದವನ್ನು ಸ
ರುದ್ರ, ಸಾಧಾರಣ ಹೆಣ್ಣಾಗಿ ಮತ್ತು ಪ್ರಬುದ್ಧ
ದ್ವಂದ್ವದಲ್ಲಿ ಬಳಲುವ ಪಾರ್ವತಿ, ಸಾಧಾರಣ
ಹಿನ್ನೆಲೆಯನ್ನು ಹೊಂದಿದ್ದು, ಅದಕ್ಕೆ
ನಡೆದುಕೊಳ್ಳುವಲ್ಲಿಯೇ ತನ್ನನ್ನು ಸ
ಸಮರ್ಪಿಸಿಕೊಳ್ಳುವ ಘುಂಢಿ, ಪುರೋಹಿತರ ಕು
ಸಾಂಕೇತಿಕವಾಗಿರುವ ಸುದರ್ಶನ ದೇವ, ಅ
ಓಲೈಸಲು ಇರುವ ರಾಜ್ಯವ್ಯವಸ್ಥೆಯ ಪ್ರತಿನಿಧಿ ವ
ಇತ್ಯಾದಿ ಪಾತ್ರಗಳು ತಾವೇ ತಮ್ಮ ತಮ್ಮ ವಿಷ
ಉದ್ದೇಶಗಳನ್ನು, ಗತಿಗಳನ್ನು ರೂಪಿಸಿಕೊಂಡು
ಅವರನ್ನು ನಾನು ನಿಯಂತ್ರಿಸುವ ಸಾಹಸ
ಬದಲಿಗೆ ಅವರೊಂದಿಗೆ ಸಂವಹನ ನಡೆಸಲು
ಅವುಗಳು ಅಭಿವ್ಯಕ್ತವಾದ ಬಗೆಯನ್ನು ನಾನ
ದಾಖಲು ಮಾಡಿದೆ. ಕಾದಂಬರಿಯೊಂದು
ಕ್ರಿಯೆಯೇ ಅಲ್ಲ, ಅವು ಮೂಡುವ, ಅರಳುವ
ಪ್ರಕ್ರಿಯೆ.

ಈ ದೇಶದ ಮೂಲನಿವಾಸಿಗಳ ಸಂಸ್ಕೃತಿಗಳನ್ನು ...ಸುವ ಹಾಗೂ ಆರ್ಯರ ಕುತಂತ್ರಗಳನ್ನು ಅತ್ಯಂತ ... ಬಯಲುಗೊಳಿಸುವ ಕೃತಿ 'ಘುಂಥಿ' ಎಂಬುದು ...ಭಿಪ್ರಾಯ. ಆದರೂ ಒಂದು ಕಡೆ (ವಾಮದೇವರ ... ಸ್ಯಾಹಾರದ ಶ್ರೇಷ್ಠತೆಯನ್ನು ಉಳಿದವರು ...ತೆ ಅಥವಾ ಮಾಂಸಾಹಾರಿ ಮಾತಂಗದವರು ...ವಚಿತ ಚಿತ್ರಿಸಲಾಗಿದೆ. ಮತ್ತೊಂದು ಕಡೆ ಸ್ವಾರ್ಯ ...ಯಾರು ಬೇಕಾದರೂ ಬ್ರಾಹ್ಮಣರಾಗಬಹುದೆಂಬ ...ಬ್ರಾಹ್ಮಣ ಶ್ರೇಷ್ಠತೆ ನುಸುಳಿಬಿಟ್ಟಿದೆ. ಏಕೆ?

...: ಮಾತಂಗರೇ ಮೊದಲಾಗಿ ಇತರ ಅರಣ್ಯಕ ... ಆರ್ಯರ ಗಣಗಳೊಂದಿಗೆ ಹೊಂದಾಣಿಕೆ ...ಸ್ಕೃತಿದ್ದಂತಹ ಘಟ್ಟವದು. ಅದಲ್ಲದೇ ಜನಾಂಗ ...ತದ ವಾಮದೇವರನ್ನು ತಮ್ಮ ಗುರುಗಳೆಂದು ... ಮನೋಭಾವ ಮಾತಂಗದವರಲ್ಲಿ ಕಾಣುತ್ತದೆ. ...ತಮ್ಮ ಪ್ರಶ್ನೆಗಳನ್ನು ಕೇಳಿ, ಅವರ ಉತ್ತರಗಳನ್ನು ...ಸ್ಕೃತಿದ್ದ ಅವರಲ್ಲಿ ಇದ್ದದ್ದು ಅವರ ಬಗ್ಗೆ ಇದ್ದ ...ವಾವ. ಬ್ರಾಹ್ಮಣಿಕೆಯ ಹುಸಿ ಪ್ರತಿಷ್ಠೆಯಿರುವ ... ಉತ್ತರವಾಗಿ, ಕಾಸಿ ಕಮ್ಮಾರನಾದಂತೆ, ಬೇಸಿ ...ನಾದಂತೆ, ತನ್ನ ಕಾರ್ಯಗಳಿಂದ ಯಾರು ... ಬ್ರಾಹ್ಮಣರಾಗಬಹುದೇ ಹೊರತು, ...ಯೂ ಯಾವುದೋ ಒಂದು ಗುಂಪಿನ ...ಲ್ಲಿರುವಂತಹುದಲ್ಲ ಎಂದು ತಿಳಿಸಲು ಯತ್ನಿಸಿದೆ.

...ನೀವು ಕನ್ನಡದ ಪ್ರಧಾನ ಧಾರೆ ಸಾರಸ್ವತ ...ಗಲೀ ಅಥವಾ ಪ್ರಗತಿಪರರ ಬಳಗಕ್ಕಾಗಲೀ ...ತಾಗಿದ್ದರೂ ನಿಮ್ಮ ಕೃತಿಯನ್ನು ಸಮರ್ಥಿಸಿ ...ಯೂ ಸಹ ಟೀವಿ ಚಾನೆಲ್‌ಗಳು ನಿಮ್ಮ ಖಾಸಗಿ ...ಗಳನ್ನು ತೋರಿಸುತ್ತಿದ್ದಂತೆ ತಮ್ಮ ಬೆಂಬಲದ ... ತಗ್ಗಿಸಿದರು. ನಮ್ಮ ಪ್ರಕಾರ ಕೃತಿಯ ಬಗ್ಗೆ ...ವಾರದ ತಕರಾರಿಗೂ ನಿಮ್ಮ ಖಾಸಗಿ ಬದುಕಿಗೂ ...ಸಂಬಂಧವೂ ಇಲ್ಲ. ಅದು ಹೇಗೆ ಇದ್ದರೂ ...ಅವರು ಮರೆಮಾಚುತ್ತಿದ್ದ ಸಾಂಸ್ಕೃತಿಕ ರಾಜಕಾರಣ ...ಯಳಾಗಿದ್ದಕ್ಕೆ ಅವರು ನಿಮ್ಮ ವಿರುದ್ಧ ಪ್ರಚಾರಕ್ಕೆ ...ರು. ಹೀಗಾಗಿ ನಿಮ್ಮ ಕೃತಿಯನ್ನು ಸಮರ್ಥಿಸಲು ...ಗಿಕ ಕಾರಣಗಳು ಮುಖ್ಯವೇ ಹೊರತು ಅದರ ...ದ್ದಲ್ಲ. ಆದರೂ ಹಲವು ಪ್ರಗತಿಪರರಿಗೆ ...ವಿರುವುದರಿಂದ ಆ ಫೋಟೋಗಳ ಕಥೆಯೇನು

...: ಅಯ್ಯೋ, ನಗ್ನತೆಗೂ ಅಶ್ಲೀಲತೆಗೂ ವ್ಯತ್ಯಾಸವಿದೆ. ...ಖ್ಯಾತ ರಂಗಪ್ರಯೋಗಗಳ ಫೋಟೋಗಳನ್ನು ...ವುಗಳನ್ನು ಆಯ್ದುಕೊಂಡ ಅವರ ಮನಸ್ಸಿನ ... ಸ್ಥಿತಿಯ ಬಗ್ಗೆ ನನಗೆ ಅನುಮಾನವಿದೆ. ಇರಲಿ, ... ಕೆಲವು ನಾವು ಕೆಲವು ಕಿರುಚಿತ್ರಗಳನ್ನು ...ವ ಸಂದರ್ಭಗಳಲ್ಲಿ ತೆಗೆದುದ್ದಾದರೆ, ಕೆಲವೊಂದು ... ರಂಗಪ್ರಯೋಗಗಳಿಂದ ಆಯ್ದಿರುವಂತವು. ನಾನು ...ಯೋಗವೊಂದರಲ್ಲಿ ವೇದಿಕೆಯ ಮೇಲೆಯೇ ಸ್ನಾನ ... ದೃಶ್ಯವೂ ಇದೆ. ಕೆಲವು ಚಿತ್ರಗಳು ನನ್ನ ಖಾಸಗೀ ... ಇದ್ದಂತವು: ಅದರೊಳಗೆ ಅತಿಕ್ರಮಿಸಿದ್ದೇ ... ಅಪರಾಧ. ಅವುಗಳನ್ನು ಮುಂದಿಟ್ಟು ...ತರ ಮಾಡುತ್ತಾ ನನ್ನ ತೇಜೋವಧೆಗೆ ಯತ್ನಿಸಿದ್ದು ...ತ್ಯಂತ ಆಶ್ಚರ್ಯ. ನನಗೆ ವಿಚಿತ್ರ ಎನ್ನಿಸಿತು ...ಉಂಟೇ ಎಂದು. ಮಾಧ್ಯಮದವರು ಹೀಗೆಲ್ಲಾ ...ಸ್ವಾರ್ಥಿಯಿಂದ ವರ್ತಿಸುತ್ತಾರೆಯೇ ಎಂದು ಒಂದು ...ಸಾಂಸ್ಕೃತಿಕ ಆಘಾತವೂ ಆಯಿತು.

...: ಈಗ ನೀವು ಜಾಮೀನಿನ ಮೇಲೆ ಬಂಧನದಿಂದ ... ಪಡೆದಿದ್ದೀರಿ. ಕನ್ನಡದ ಪ್ರಜ್ಞಾವಂತ ಲೋಕ ...ಬಲಕ್ಕೆ ಸಂಪೂರ್ಣವಾಗಿ ನಿಂತಿದೆ. ಈ ಹೊತ್ತಿನಲ್ಲಿ ...ಸುತ್ತಿದೆ? ನಿಮ್ಮ ಮುಂದಿನ ಕ್ರಮಗಳೇನು? ...ಗಳೇನು?

...: ಸಂತೆಯಲ್ಲಿ ದಿಕ್ಕೆಟ್ಟು, ಗಾಬರಿಯಿಂದ ನಿಂತಿದ್ದ ...ಸುರಕ್ಷಿತ ಕೈಗಳಲ್ಲಿ ಸೇರಿದಂತೆ ಅನ್ನಿಸುತ್ತಿದೆ. ವಸ್ತುನಿಷ್ಠೆ ...ಕತೆ ಇಷ್ಟರ ಮಟ್ಟಿಗೆ ಜೀವಂತವಾಗಿರಲಿಕ್ಕೆ ಸಾಧ್ಯ ...ರಲಿಲ್ಲ. ನಾನು ಯಾರೆಂದೇ ತಿಳಿಯದಿದ್ದರೂ ...ಜ್ಞಾವಂತರು ಮತ್ತು ಪ್ರಗತಿಪರರು ತೋರುತ್ತಿರುವ ...ದಾಗಿ ನಾನು ಇಷ್ಟು ದೊಡ್ಡ ಕುಟುಂಬಕ್ಕೆ ... ಎಂದು ತಿಳಿದು ಧನ್ಯತಾ ಭಾವವಿದೆ.

... ಮುಂದಿನ ಕ್ರಮಗಳ ಬಗ್ಗೆ ಏನೂ ಯೋಚಿಸಿಲ್ಲ. ...ಷ್ಟು ಪರಕೀಯರಂತೆ ನೋಡುತ್ತಾ, ಇದೀ ... ಸಂಸ್ಕೃತಿಯನ್ನೇ ಗುತ್ತಿಗೆಗೆ ಪಡೆದಿರುವವರಂತೆ ... ಅಧ್ಯಾಯಗಳಿಗೆ ನನ್ನ ಮತ್ತಷ್ಟು ಕೃತಿಗಳು ಕೊಡುಗೆ ...ಸರಕಬೇಕು. ಇದು ಈಗ ಹೀಗೆ ಯೋಚಿಸಿರು ... ನಾನು ...ಕೊಂಡು ಸಂದರ್ಭಾನುಸಾರ ...ತ್ತಿದ್ದೇನೆ ಅಷ್ಟೇ. ಆದರೆ, ನಾನು ನನ್ನ ...ಯೂ ಈ ಬಗೆಯ ಪೌರಾಣಿಕ ಸಂಕೇತಗಳನ್ನು ... ವೈಚಾರಿಕ ಅಭ್ಯಾಸವನ್ನು ಹೊಂದಿದ್ದೇನೆ. ಅದು ...ಸುತ್ತದೆ ಅಷ್ಟೇ!

...ದರ್ಶಕರು: ಶಿವಸುಂದರ್ ಮತ್ತು ಗೌರಿ ಲಂಕೇಶ್

ದೇವಾಲಯಗಳು, ವಸ್ತ್ರಸಂಹಿತೆ ಮತ್ತು ಅಶ್ಲೀಲತೆಯ ವ್ಯಾಖ್ಯಾನ

"50 ವರ್ಷಗಳ ನಂತರ ಊಟದ ಪದ್ಧತಿಯನ್ನು ಬದಲಾಯಿಸಬೇಕು. 100 ವರ್ಷಗಳ ನಂತರ ಮನೆಯನ್ನು ಕೆಡವಬೇಕು. 500 ವರ್ಷಗಳ ನಂತರ ಮಂದಿರ-ಮಸೀದಿಗಳನ್ನು ಬೀಳಿಸಿಬಿಡಬೇಕು. 1000 ವರ್ಷಗಳ ನಂತರ ಧರ್ಮಕ್ಕೆ ಬೆಂಕಿ ಹಚ್ಚಬೇಕು. 50 ವರ್ಷಗಳಲ್ಲಿ ಊಟದ ಏಕತಾನತೆ ರುಚಿಯನ್ನು ಹದಗೆಡಿಸಿರುತ್ತದೆ. 100 ವರ್ಷಗಳಲ್ಲಿ ಮನೆಗಳ ವಾಸ್ತುಶಿಲ್ಪ ಹಳೆಯದಾಗಿ ತೋರುತ್ತದೆ. 500 ವರ್ಷಗಳಲ್ಲಿ ಮಂದಿರ-ಮಸೀದಿಗಳು ತಮ್ಮ ಮೂಲ ಉದ್ದೇಶಗಳನ್ನು ಮರೆತುಬಿಡುತ್ತವೆ. 1000 ವರ್ಷಗಳಲ್ಲಿ ಧರ್ಮದಲ್ಲಿಯೂ (ರೂಢಿಗತವಾದ ಕಂದಾಚಾರಗಳಿಂದ) ಕೊಳೆ-ಗಲೀಜು ಸೇರಿಕೊಂಡು ಬಿಡುತ್ತದೆ. ಇಂದು ಪ್ರತಿಯೊಂದು ಧರ್ಮದ ಸ್ಥಿತಿಯೂ ಹೀಗೆಯೇ ಆಗಿರುವುದರಿಂದ ಅವು ಸಮಸ್ಯೆಗಳಿಗೆ ಸಮಾಧಾನ ನೀಡದಂತಾಗಿದೆ" ಮುತ್ತಿನಂಥ ಈ ಮಾತುಗಳನ್ನು ಆಡಿದವರು ಇನ್ಯಾರೂ ಅಲ್ಲ, ಪ್ರಸಿದ್ಧ ಜೈನಮುನಿ ತರುಣಸಾಗರ. 'ಬದಲಾವಣೆ ಜಗದ ನಿಯಮ'. ಜಗತ್ತಿನ ಯಾವ ಸಂಗತಿಯೇ ಆಗಲಿ, ಬದಲಾದ ಕಾಲದಲ್ಲೂ ಪ್ರಸ್ತುತವಾಗಿ ಉಳಿದುಕೊಳ್ಳಬೇಕಾದರೆ ಅದು ಕಾಲಕ್ಕೆ ಅನುಗುಣವಾಗಿ ತನ್ನನ್ನು ಬದಲಾಯಿಸಿಕೊಳ್ಳಬೇಕು.

ಬದಲಾವಣೆ ಬೇಕು ಮಾತ್ರವಲ್ಲ, ಅದು ಪ್ರಗತಿಯೆಡೆಗೆ ಸಾಗುವಂತಿರಬೇಕು ಎನ್ನಬೇಕಾದ ಹೊತ್ತಿನಲ್ಲಿಯೇ, ಅದು ಹಿಮ್ಮುಖವಾಗಿ ಚಲಿಸುವಂತಿರಬೇಕು ಎಂದು ಹಠ ಹಿಡಿಯುವವರ ಬಗ್ಗೆ ಏನನ್ನೋಣ? ಉದಾಹರಣೆಗೆ, ಮಂಗಳೂರಿನ ಪ್ರಸಿದ್ಧ ದೇವಾಲಯವೊಂದರಲ್ಲಿ ಇತ್ತೀಚೆಗೆ ಭಕ್ತಾದಿಗಳಿಗೆ ವಸ್ತ್ರಸಂಹಿತೆ ವಿಧಿಸಲಾಗಿದೆ. 'ಭಾರತೀಯ ಪರಂಪರೆಯಲ್ಲಿ ಬೆಳೆದು ಬಂದ ಸಾಂಪ್ರದಾಯಿಕ ಉಡುಪುಗಳು ಮತ್ತು ಅಶ್ಲೀಲ ಎನಿಸದ ಸಭ್ಯ ಉಡುಪುಗಳನ್ನು ಧರಿಸಿಕೊಂಡು ಭಕ್ತರು ದೇವಳಕ್ಕೆ ಬರಬಹುದು. ಫ್ಯಾಶನ್‌ನ ಹೆಸರಿನಲ್ಲಿ ಮೈಮಾಟ ಪ್ರದರ್ಶನಕ್ಕೆ ಅವಕಾಶವಾಗುವ ಯಾವುದೇ ಉಡುಪುಗಳನ್ನು ಮಹಿಳಾ ಮತ್ತು ಪುರುಷ ಭಕ್ತರು ಧರಿಸಿಕೊಂಡು ಬರಬಾರದು' ಎಂಬುದು ಇಲ್ಲಿ ವಿಧಿಸಲಾಗಿರುವ ನಿರ್ಬಂಧ. 'ದೇವಸ್ಥಾನದಿಂದಲೇ ನಮ್ಮ ಸಂಸ್ಕಾರ, ಸಂಸ್ಕೃತಿಯನ್ನು ಉಳಿಸಿ, ಪ್ರೋತ್ಸಾಹಿಸುವ ಕೆಲಸವಾಗಬೇಕು. ದೇವಸ್ಥಾನ ಧಾರ್ಮಿಕ ಕೇಂದ್ರವಾಗಬೇಕೇ ಹೊರತು, ಶಾಪಿಂಗ್ ಸೆಂಟರ್ ಅಥವಾ ಪ್ರವಾಸಿಕೇಂದ್ರವಾಗಬಾರದು. ದೇವಸ್ಥಾನಗಳಿಗೆ ಅದರದ್ದೇ ಆದ ಚೌಕಟ್ಟುಗಳಿವೆ. ಆಧುನಿಕತೆಯ ಗಾಳಿಯಲ್ಲಿ ದೇವಸ್ಥಾನವಠಾರ ಆ ಚೌಕಟ್ಟನ್ನು ಮೀರಿಹೋಗಬಾರದೆಂಬ ಉದ್ದೇಶದಿಂದ ಈ ನಿಯಮವನ್ನು ಜಾರಿಮಾಡಲಾಗಿದೆ' ಎಂಬುದು ದೇವಳದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯ ಸಮರ್ಥನೆ.

ಇಲ್ಲಿ ತಾಂತ್ರಿಕವಾಗಿ ಅನೇಕ ಪ್ರಶ್ನೆಗಳು ಏಳುತ್ತವೆ. ಸದರಿ ದೇವಸ್ಥಾನವು ಮುಜರಾಯಿ ಇಲಾಖೆಯ ಅಡಿಯಲ್ಲಿ ಬರುವುದರಿಂದ ಈ ನಿರ್ಬಂಧಗಳಿಗೆ ಸರಕಾರದ ಒಪ್ಪಿಗೆಯಿದೆಯೆಂದೇ ಭಾವಿಸಬೇಕಾಗುತ್ತದೆ. ಪ್ರಜಾತಾಂತ್ರಿಕವಾಗಿ ಆಯ್ಕೆಯಾಗುವ ಸರಕಾರವು ದೇಶದ ಸಂವಿಧಾನದ ಅನುಸಾರ ನಡೆದುಕೊಳ್ಳಲು ಕರ್ತವ್ಯಬದ್ಧವಾಗಿರುವಾಗ ಇಂತಹ ನಿರ್ಬಂಧವು ಸಂವಿಧಾನದ ಅಡಿಯಲ್ಲಿ ಸಮ್ಮತವೇ? ಸಂವಿಧಾನದ ನಿಯಮಗಳಲ್ಲಿ ಯಾವುದು ಸಾರ್ವಜನಿಕ ಅಶ್ಲೀಲ ನಡವಳಿಕೆ (ಭಾರತೀಯ ದಂಡಸಂಹಿತೆಯ ಸೆಕ್ಷನ್ 294) ಎಂದು ಸ್ಪಷ್ಟಪಡಿಸಿರುವಾಗ ಸಾರ್ವಜನಿಕ ದೇಗುಲದಲ್ಲಿ ವಿಧಿಸಲಾಗಿರುವ ಈ ನಿರ್ಬಂಧವು ಐಪಿಸಿಯ ಯಾವ ನಿಯಮದ ಅಡಿಯಲ್ಲಿ ಬರುತ್ತದೆ ಎಂಬುದನ್ನು ಆಡಳಿತಾಧಿಕಾರಿಗಳು ಸ್ಪಷ್ಟಪಡಿಸಬೇಕಾಗುತ್ತದೆ.

'ಭಾರತೀಯ ಪರಂಪರೆಯಲ್ಲಿ ಬೆಳೆದುಬಂದ ಸಾಂಪ್ರದಾಯಿಕ ಉಡುಪುಗಳು' ಎಂದರೆ ಯಾವುವು? ಸದರಿ ವಸ್ತ್ರಸಂಹಿತೆಯು ಪುರುಷರಿಗೂ ಅನ್ವಯಿಸುತ್ತದೆ ಎಂದು ಅಪ್ಪಣೆ ಕೊಡಿಸಿದರೂ, ಇದರ ಪ್ರಧಾನ ಗುರಿ ಬರೀ ಸ್ತ್ರೀಯರು ಎನ್ನುವುದರ ಬಗ್ಗೆ ಯಾವ ಅನುಮಾನವೂ ಬೇಡ. ಇಂದು ನಮ್ಮ ಪುರುಷರು ಧರಿಸುವ ಯಾವ ಉಡುಪೂ ಇವರು ಹೇಳುವ ಭಾರತೀಯ ಪರಂಪರೆಯಲ್ಲಿ ಬೆಳೆದುಬಂದ ಸಾಂಪ್ರದಾಯಿಕ ಉಡುಪುಗಳಲ್ಲ, ಪ್ಯಾಂಟ್, ಶರ್ಟುಗಳಂತೂ ಅಲ್ಲವೇ ಅಲ್ಲ, ಹಾಗಿರುವಾಗ ಪುರುಷರು ಯಾವ ಉಡುಪು ಧರಿಸಿಕೊಂಡು ಬರಬೇಕು? ಕೆಲವು ದೇಗುಲಗಳಲ್ಲಿ ಪುರುಷರು ಅಂಗಿ ಕಳಚಿ ಬರಬೇಕೆಂದು ನಿಯಮ ಮಾಡಿದ್ದಾರೆ. ಮೈಯನ್ನು ಮುಚ್ಚಿಬರಬೇಕು ಎನ್ನುವುದಕ್ಕಾದರೂ ಒಂದು ಅರ್ಥವಿದೆ, ಆದರೆ ಬರಿಮೈಯೊಂದಿಗೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳಬೇಕು ಎನ್ನುವುದು ಯಾವ ಸಭ್ಯತೆ?

ದೇವಸ್ಥಾನಕ್ಕೆ ಬರುವ ಭಕ್ತಾದಿಗಳಿಗೆ ವಸ್ತ್ರಸಂಹಿತೆ ಅನ್ವಯವಾಗುವುದಾದರೆ, ಆ ಗುಡಿಯಲ್ಲಿ ಕೆಲಸಮಾಡುವ ಅರ್ಚಕವರ್ಗಕ್ಕೂ, ಇದು ಅನ್ವಯವಾಗಬೇಡವೇ? ಅರೆಬೆತ್ತಲೆಯಾಗಿ ಅವರು ಭಕ್ತಾದಿಗಳ ಮುಂದೆ (ಮಹಿಳೆಯರ ಮುಂದೆ ಕೂಡಾ) ಕಾಣಿಸಿಕೊಳ್ಳುವುದು ಯಾವ ಸಭ್ಯತೆ? ಇಷ್ಟಕ್ಕೂ, ದೇವರ ಮೇಲಿನ ನಿಜಶ್ರದ್ಧೆ ಮತ್ತು ಭಕ್ತಿಯಿಂದ ದೇವಸ್ಥಾನಕ್ಕೆ ಹೋಗುವವರಿಗೆ ಅಲ್ಲಿಗೆ ಬಂದ ಇತರ ಭಕ್ತರು ಯಾವ ಉಡುಗೆಯಲ್ಲಿದ್ದಾರೆ ಎಂಬುದು ಗಮನಕ್ಕೇ ಬರಬಾರದಲ್ಲವೇ? ಹಾಗೆ ದೇವರಿಗಿಂತಲೂ ಭಕ್ತರೇ ಗಮನಕ್ಕೆ ಬಂದು ಅವರ ಚಿತ್ತ ಚಂಚಲಗೊಳ್ಳುತ್ತದೆಂದಾದರೆ ಅವರದ್ದು ಅದೆಂಥ ದೈವಭಕ್ತಿ?

ಮಹಿಳೆಯರು ಸೀರೆಯಂತಹ ಉಡುಗೆ ಧರಿಸಿಬರಬೇಕು ಎಂದು ಪರೋಕ್ಷವಾಗಿ ಇವರು ಅಪ್ಪಣೆ ಕೊಡಿಸುತ್ತಿದ್ದಾರೆಂಬುದು ಅರ್ಥವಾಗದ ಸಂಗತಿಯೇನಲ್ಲ, ವಸ್ತ್ರಸಂಹಿತೆ ಅದು ಶಿಕ್ಷಣ ಸಂಸ್ಥೆಗಳಲ್ಲಿರಲಿ ಅಥವಾ ದೇವಸ್ಥಾನಗಳಲ್ಲಿರಲಿ ಅದರ ಪ್ರಧಾನ ಗುರಿ ಮಹಿಳೆಯರು (ಯಾಕೆಂದರೆ ಅದನ್ನು ನಿರ್ಧರಿಸುವವರು ಬಹುತೇಕ ಪುರುಷರು). ಇಂತಹ ಸಂಹಿತೆಗಳನ್ನು ವಿಧಿಸುವಾಗಲೆಲ್ಲ ಅವರು ಸಂಸ್ಕೃತಿಯನ್ನು ಉಲ್ಲೇಖಿಸುತ್ತಿರುತ್ತಾರೆ. ಆದರೆ ಸಂಸ್ಕೃತಿ ಎಂದರೇನು? ಅದು ಹೇಗಿರಬೇಕು? ಅದು ನಿಂತ ಕೊಳಚೆ ನೀರಿನಂತಿರಬೇಕೇ? ಅಥವಾ ಹರಿವ ಪರಿಶುದ್ಧ ನದಿಯಂತಿರಬೇಕೇ? ಕಾಲದೊಂದಿಗೆ ಆಹಾರ, ಉಡುಪು, ಚಿಂತನೆ, ಜೀವನಶೈಲಿಗಳೂ ಬದಲಾಗುವುದು ಸಹಜವಲ್ಲವೇ? ಉಡುಪನ್ನು ಧರಿಸುವ ಮೂಲ ಉದ್ದೇಶ ಎಲ್ಲಾ ಕಾಲದಲ್ಲೂ ಒಂದೇ ಆಗಿರುವುದಿಲ್ಲ. ಮಳೆ, ಚಳಿಯಿಂದ ರಕ್ಷಿಸಿಕೊಳ್ಳಲು ಸೊಪ್ಪು ಸುತ್ತಿಕೊಳ್ಳುವ ಆದಿಮ ಕಾಲದಿಂದ ಹಿಡಿದು ಸೌಂದರ್ಯ, ಅನುಕೂಲ ಸೇರಿದಂತೆ ಹಲವು ಉದ್ದೇಶಗಳಿಂದ ಉಡುಪು ಧರಿಸುವ ಆಧುನಿಕ ಕಾಲದವರೆಗೂ ಅದರ ಸ್ವರೂಪದ ಜತೆಗೆ ಉದ್ದೇಶವೂ ಬದಲಾಗುತ್ತಾ ಬಂದಿದೆ. ನಾಲ್ಕು



ಗೋಡೆಯ ಒಳಗಡೆಯೇ ಇದ್ದ ಹೆಣ್ಣು ಇಂದು ಹೊರಗೆ ಬಂದು ದುಡಿಯುವಾಗ ಆಕೆ ತನ್ನ ಕೆಲಸಗಳಿಗೆ ಅನುಕೂಲವಾಗುವಂತಹ ಉಡುಪು ಧರಿಸಬೇಕಾಗುತ್ತದೆ. ಇಲ್ಲಿ ಸುರಕ್ಷತೆಯ ಜತೆಗೇ 'ಕಂಫರ್ಟ್' ಎನ್ನುವುದು ಬಹಳ ಮುಖ್ಯ, ಹಾಗಾಗಿಯೇ ಸಲ್ವಾರ್ ಕಮೀಜ್, ಚೂಡಿದಾರ, ಜೀನ್ಸ್, ನೈಟಿ (ಮನೆಯ ಪರಿಸರದಲ್ಲಿ), ಮೊದಲಾದವು ಬಳಕೆಗೆ ಬಂದಿವೆ. ಅದು ಹೆಣ್ಣಿಗೆ ಅಪಾರ ಆತ್ಮವಿಶ್ವಾಸವನ್ನು, ಭದ್ರತೆಯನ್ನು, ಚಲನೆಯ ಸ್ವಾತಂತ್ರ್ಯವನ್ನು ನೀಡಿದೆ. ಹಾಗಾಗಿ ಈ ಎಲ್ಲ ಉಡುಗೆಗಳೂ ಇಂದಿನ ಭಾರತೀಯ ಸಂಸ್ಕೃತಿಯ ಭಾಗವಲ್ಲವೇ?

ಸೀರೆಯನ್ನು ಭಾರತೀಯ ಸಂಸ್ಕೃತಿಯ ಪ್ರತೀಕವೆಂದು ಉಲ್ಲೇಖಿಸುವವರಿಗೆ ಆಧುನಿಕ ದಿನಗಳಲ್ಲಿ ನಾನಾ ಕ್ಷೇತ್ರಗಳಲ್ಲಿ ದುಡಿಯುವ ಹೆಣ್ಣಿನ ಪಾಲಿಗೆ ಅದು ಎಷ್ಟೊಂದು ಅಸುರಕ್ಷಿತ ಮತ್ತು ಅಪಾಯಕಾರಿ ಉಡುಗೆ, ಸೀರೆಯ ಸೆರಗು ವಾಹನಗಳಿಗೆ, ಯಂತ್ರಗಳಿಗೆ ಸಿಕ್ಕು ಎಷ್ಟೊಂದು ಮಂದಿ ಜೀವ ಕಳೆದುಕೊಂಡಿದ್ದಾರೆ, ಅಪಾಯದ ಸಂದರ್ಭದಲ್ಲಿ ಓಡಿ ತಪ್ಪಿಸಿಕೊಳ್ಳುವ ಪ್ರಮೇಯ ಒದಗಿದಾಗ ಅದು ಎಂಥಾ ಒಂದು ಅಡ್ಡಿ ಎನ್ನುವುದರ ಅರಿವಿದೆಯೇ? ಭಾರತೀಯ ಸಂಸ್ಕೃತಿಯ ಪ್ರತೀಕ ಎನ್ನಲಾಗುವ ಸೀರೆಯನ್ನು ಎಷ್ಟೊಂದು ಪ್ರಚೋದಕವಾಗಿಯೂ ಉಡುವುದು ಸಾಧ್ಯವಿದೆಯೆಂಬ ವಾಸ್ತವದ ಅರಿವಿದೆಯೇ?

ಯಾವುದು ಅಶ್ಲೀಲ ಮತ್ತು ಅದನ್ನು ನಿರ್ಧರಿಸುವವರು ಯಾರು? ಉಡುವ ವ್ಯವಸ್ಥೆಯೇ ಇಲ್ಲದ ಕಾಲದಲ್ಲಿ ಮನುಷ್ಯರು ಬತ್ತಲೆಯೇ ಇದ್ದರು. (ಈಗಲೂ ಕೆಲವೊಂದು ಆದಿವಾಸಿ ವರ್ಗಗಳಲ್ಲಿ ಮಹಿಳೆಯರು ತುಂಡು ಬಟ್ಟೆಯನ್ನೂ ಧರಿಸುವುದಿಲ್ಲ.) ಮಾನ ರಕ್ಷಣೆಯ ದೃಷ್ಟಿಯಿಂದ ಏನನ್ನಾದರೂ ಧರಿಸುವ ಪದ್ಧತಿ ಆರಂಭದ ಕಾಲದಲ್ಲಿ ಕೂಡಾ ಕೇವಲ ಸೊಂಟದ ಭಾಗವನ್ನೂ ಮಾತ್ರ ಮುಚ್ಚಿಕೊಳ್ಳುತ್ತಿದ್ದರು. ಭಾರತದಲ್ಲಿಯೇ ಕೆಲವೊಂದು ಭಾಗದಲ್ಲಿ ಮಹಿಳೆಯರು ಸೊಂಟದಿಂದ ಮೇಲ್ಭಾಗದಲ್ಲಿ ಏನನ್ನೂ ಧರಿಸುತ್ತಿರಲಿಲ್ಲ, ಕುಡುಬಿಗಳಂತಹ ಬುಡಕಟ್ಟು ಮಹಿಳೆಯರು ಎದೆ ಮುಚ್ಚಿಕೊಳ್ಳುವ ವಿಚಾರದಲ್ಲಿ ಅಷ್ಟೇನೂ ತಲೆಕೆಡಿಸಿಕೊಂಡವರಲ್ಲ, ಅತ್ಯಂತ ಪವಿತ್ರವೆಂದು ನಾವು ಹೇಳಿಕೊಳ್ಳುವ ಅನೇಕ ದೇವಸ್ಥಾನಗಳಲ್ಲಿ ಲೈಂಗಿಕ ಶಿಲ್ಪಗಳು ಯಥೇಚ್ಛವಾಗಿ ಕಾಣಸಿಗುತ್ತವೆ. ಖಜುರಾಹೋವಂತೂ ಇದರ ಮುಕುಟಮಣಿ. ನಮ್ಮ ಸಿನೆಮಾಗಳಲ್ಲಿ ಮತ್ತು ಜಾಹೀರಾತುಗಳಲ್ಲಿಯಂತೂ 'ತೋರಿಸುವುದಕ್ಕೆ' ಇನ್ನೇನು ತಾನೇ ಬಾಕಿ ಉಳಿದಿದೆ?

ಪಾಶ್ಚಿಮಾತ್ಯ ದೇಶಗಳಲ್ಲಿ ಸಾರ್ವಜನಿಕವಾಗಿಯೇ ಹೆಣ್ಣುಗಂಡು ಪ್ರಣಯ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವುದು ಸಾಮಾನ್ಯ ಸಂಗತಿ. ಅಧಿಕೃತ ವೇಶ್ಯಾವಾಟಿಕೆಗಳು, ಬ್ಲೂಫಿಲಂ ಉದ್ಯಮ ಎಲ್ಲವೂ ಅಲ್ಲಿ ಸಾಮಾನ್ಯ, ಆದರೆ ನಮ್ಮಲ್ಲಿ ಅವೆಲ್ಲವೂ ಅಶ್ಲೀಲ ಮತ್ತು ಕಾನೂನುಬಾಹಿರ. ಈ ಅರ್ಥದಲ್ಲಿ ಅಶ್ಲೀಲ ಎನ್ನುವುದು ಸಾಪೇಕ್ಷವಾದುವುದು. ಅಲ್ಲದೆ, ಯಾವುದು ಅಶ್ಲೀಲ ಮತ್ತು ಯಾವುದು ಸಭ್ಯತೆ ಎನ್ನುವುದು ವ್ಯಕ್ತಿಯೊಬ್ಬನ ಹಿನ್ನೆಲೆ ಮತ್ತು ಒಲವುಗಳ ಮೇಲೂ ನಿರ್ಧರಿತವಾಗುತ್ತವೆ. 'ಅಶ್ಲೀಲ ಎನಿಸದ ಸಭ್ಯ ಉಡುಪು' ಧರಿಸಿಬರಬೇಕು ಎಂದು ಇವರು ಅಪ್ಪಣೆ ಕೊಡಿಸುತ್ತಾರಲ್ಲ, ಯಾವುದು ಅಶ್ಲೀಲ ಮತ್ತು ಸಭ್ಯ? ಹಾಗೆಯೇ, ಯಾರಿಗೆ ಅಶ್ಲೀಲ ಮತ್ತು ಸಭ್ಯ? ವಿಪರ್ಯಾಸದ ಸಂಗತಿಯೆಂದರೆ, ಹೆಣ್ಣನ್ನು ಬತ್ತಲೆಯಾಗಿ ನೋಡಬಯಸುವವನೂ ಗಂಡು, ಆಕೆ ಸೆಕ್ಸಿಯಾಗಿ ಕಾಣಲು ಏನನ್ನು ಧರಿಸಬೇಕು ಎಂದು ನಿರ್ಧರಿಸುವವನೂ ಗಂಡು (ಫ್ಯಾಷನ್ ಪರೇಡುಗಳು, ಸಿನಿಮಾ, ಜಾಹೀರಾತುಗಳು, ಚಿತ್ರಕಲೆಗಳು, ನೃತ್ಯಗಳು ಮೊದಲಾದವನ್ನು ಗಮನಿಸಿ), ತನ್ನ ಮರ್ಜಿಗೆ ಸರಿಯಾಗಿ ಆಕೆ ಎಲ್ಲೆಲ್ಲಿ ಏನನ್ನು ಧರಿಸಕೂಡದು ಎಂದು ನಿರ್ಧರಿಸುವವನೂ ಗಂಡು. ಇದು ವಿಚಿತ್ರ!


ಈ ಅರ್ಥದಲ್ಲಿ ಅಶ್ಲೀಲ ಎನ್ನುವ ಪದದ ವ್ಯಾಖ್ಯೆಯನ್ನೇ ಬದಲಾಯಿಸಬೇಕಾಗಿದೆ. ಅದು ಗ್ರಹಿಸುವ ಪೂರ್ವಗ್ರಹಪೀಡಿತ ಮನಸುಗಳಲ್ಲಿರುವುದು, ರೋಗಗ್ರಸ್ತ ಕಣ್ಣುಗಳಲ್ಲಿರುವುದು. ನಿಜವಾದ ಅಶ್ಲೀಲತೆ ಎಂದರೆ ಹೆಣ್ಣು ತನ್ನ ಭೋಗದ ಸರಕು ಎಂಬ ಧೋರಣೆ ಅನುಸರಿಸುತ್ತಾ, ಹೆಣ್ಣನ್ನು ಆಕೆಯ ದೇಹದ ಮೂಲಕವೇ ನೋಡುವ ಮನೋಭಾವ ಆಧರಿಸಿದ ಗಂಡಿನ ನಡೆವಳಿಕೆಗಳು. ನಿಯಂತ್ರಿಸಬೇಕಾದುದು ಮತ್ತು ನಿರ್ಬಂಧಿಸಬೇಕಾದುದು ಈ ಅಶ್ಲೀಲತೆಯನ್ನು, ಈ ಅಸಭ್ಯತೆಯನ್ನು.

ಆಧುನಿಕ ಉಡುಪು ಧರಿಸುವುದರಿಂದ ದೇವರಿಗೆ ಅವಮಾನವಾಗುತ್ತದೆ ಎಂದುಕೊಂಡರೆ ದೇವರು ಸರ್ವಾಂತರ್ಯಾಮಿಯಾಗಿರುವ ನೆಲೆಯಲ್ಲಿ ತಾರ್ಕಿಕವಾಗಿ ಎಲ್ಲಿಯೂ ಅಂಥ ಬಟ್ಟೆ ಹಾಕಬಾರದು ಅಲ್ಲವೇ? ಇನ್ನೂ ಮುಂದುವರಿದು ಖಾಸಗಿ ಕೋಣೆಯಲ್ಲಿಯೂ ಯಾರೂ ಬತ್ತಲಾಗಬಾರದು ಅಲ್ಲವೇ? ಅದೆಲ್ಲ ಸರಿ, ದೇವರು ಸರ್ವಾಂತರ್ಯಾಮಿಯಾಗಿರುವ ಸಾರ್ವಜನಿಕ ಸ್ಥಳಗಳಲ್ಲಿ ಪುರುಷರು ಪ್ಯಾಂಟು ಜಾರಿಸಿ ಮೂತ್ರ ವಿಸರ್ಜನೆಗೆ ನಿಲ್ಲುತ್ತಾರಲ್ಲ ಅದು ಅಸಭ್ಯವಲ್ಲವೇ? ಇದರಿಂದ ಆ ದೇವರಿಗೆ ಅವಮಾನವಾಗುವುದಿಲ್ಲವೇ? ಆದರೆ ನೆನಪಿರಲಿ, ಸ್ತ್ರೀಯರಿಗೆ ಸಭ್ಯತೆಯ ಬಗ್ಗೆ ಪುರುಷರಿಗಿಂತಲೂ ಹೆಚ್ಚಿನ ಕಾಳಜಿ ಇರುವುದರಿಂದಲೇ ವಯೋವೃದ್ಧೆಯನ್ನೂ ಒಳಗೊಂಡಂತೆ ಯಾವ ಮಹಿಳೆಯೂ, ಎಷ್ಟೇ ಕಷ್ಟವಾಗಲಿ ಹೀಗೆ ಸಾರ್ವಜನಿಕವಾಗಿ ಅಸಭ್ಯತೆಯನ್ನು ಪ್ರದರ್ಶಿಸುವುದಿಲ್ಲ.

ದುರಂತವೆಂದರೆ, ದೇಗುಲಗಳ ಆಡಳಿತದ ಚುಕ್ಕಾಣಿ ಹಿಡಿದ ಬಹುತೇಕ ಪುರುಷ ಮನಸುಗಳಿಗೆ ಧರ್ಮ, ದೇವರು, ಸಂಸ್ಕೃತಿ, ಪರಂಪರೆ, ಸಂಪ್ರದಾಯ, ಸಭ್ಯತೆ ಎಂಬುದರ ನಿಜವಾದ ಅರ್ಥವೇನೆಂಬುದರ ಅರಿವಿಲ್ಲ, ಧರ್ಮಕ್ಕೂ ಮಿಗಿಲಾದ ದೇಶದ ಸಂವಿಧಾನ ಏನು ಹೇಳುತ್ತದೆ, ಮಾನವಹಕ್ಕುಗಳು ಏನನ್ನು ಹೇಳುತ್ತವೆ ಎಂಬುದರ ಬಗ್ಗೆ ಗೌರವವಿಲ್ಲ, ಭಕ್ತಾದಿಗಳಿಗೆ ಆಧ್ಯಾತ್ಮಿಕ ಸಮಾಧಾನ ನೀಡಲು ದೇಗುಲಗಳು ಹೇಗಿರಬೇಕು ಮತ್ತು ಅಲ್ಲಿ ಎಂತಹ ಸುಧಾರಣೆಗಳಾಗಬೇಕು ಎಂಬ ಕನಿಷ್ಠ ಪ್ರಜ್ಞೆಯೂ ಇಲ್ಲ, ಅವರ ಪ್ರಯತ್ನಗಳೆಲ್ಲವೂ ದೇವಾಲಯದ ಆದಾಯವನ್ನು ಹಿಗ್ಗಿಸುವುದರ ಮೇಲೆ ಕೇಂದ್ರೀಕೃತ! ಇಂತಹ ಮಂದಿ ಕಾಲಕ್ಕೆ ಸಲ್ಲದ ಅರ್ಥಹೀನ ನಿರ್ಬಂಧಗಳನ್ನು ಹೇರಿ ತಾವು ಸಂಸ್ಕೃತಿ ರಕ್ಷಣೆ ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿರುತ್ತಾರೆ. ವಾಸ್ತವದಲ್ಲಿ ಅವರು ಮಾಡುತ್ತಿರುವುದು ಸಂಸ್ಕೃತಿಗೆ ಮಾತ್ರವಲ್ಲ, ಅವರು ನಂಬಿದ ದೇವರಿಗೂ ಘೋರ ಅಪಮಾನ.

ನಮ್ಮ ಬಹುತೇಕ ದೇವಾಲಯಗಳು ದೈವ ಸಾಕ್ಷಾತ್ಕಾರಕ್ಕೆ ಅನುಕೂಲವಾಗುವ ರೀತಿಯಲ್ಲಿವೆಯೇ? ಅಲ್ಲಿನ ಗರ್ಭಗುಡಿ, ಸುತ್ತಲ ಪರಿಸರ ಎಷ್ಟರಮಟ್ಟಿಗೆ ಸ್ವಚ್ಛತೆಯಿಂದ ಕೂಡಿದೆ (cleanliness is next to Godliness ಎಂಬ ಮಾತೇ ಇದೆಯಲ್ಲ?) ಅಲ್ಲಿ ಭಕ್ತಾದಿಗಳಿಗೆ ಶುಚಿತ್ವ ಹೊಂದಲು ಎಷ್ಟರಮಟ್ಟಿಗೆ ಶೌಚ ಸೌಲಭ್ಯಗಳನ್ನು ಮಾಡಿಕೊಡಲಾಗಿದೆ? ಸ್ವಚ್ಛತೆಯ ವಿಚಾರದಲ್ಲಿ ನಮ್ಮ ಬಹುತೇಕ ದೇಗುಲಗಳ ಪರಿಸ್ಥಿತಿಯನ್ನು ನೋಡುವಾಗ ಅಲ್ಲಿ ದೇವರು ನೆಲೆಸುವುದು ಸಾಧ್ಯವೆಂದು ಅನಿಸುತ್ತದೆಯೇ? ಈ ವಿಚಾರದಲ್ಲಿ ಒಣಪ್ರತಿಷ್ಠೆ ಬದಿಗಿರಿಸಿ ಅನ್ಯಧರ್ಮೀಯರ ಚರ್ಚ್, ದರ್ಗಾ, ಮಸೀದಿ, ಗುರುದ್ವಾರಗಳಿಗೆ ಭೇಟಿಕೊಟ್ಟು ಅವರಿಂದ ಕಲಿಯಬೇಕಾದ ಸ್ವಚ್ಛತೆಯ ಪಾಠ ಬಹಳಷ್ಟಿದೆ. ದೇಗುಲಗಳ ಪರಿಸರವನ್ನು ವ್ಯಾಪಾರೀ ದಂಧೆಯ ಕೇಂದ್ರವನ್ನಾಗಿಸುವ, ನಿಷೇಧಿತ, ನಿರ್ಬಂಧಿತ ಪ್ರದೇಶಗಳನ್ನಾಗಿಸುವ ಬದಲು ನಿಜವಾದ ಅರ್ಥದಲ್ಲಿ ಮನಸ್ಸಿಗೆ ನೆಮ್ಮದಿ ನೀಡುವ ತಾಣಗಳನ್ನಾಗಿ ಪರಿವರ್ತಿಸಿದಾಗ ಅಂತಹ ದೇಗುಲಗಳ ಸ್ಥಾಪನೆಯ ಮೂಲ ಉದ್ದೇಶವೂ ಈಡೇರುತ್ತದೆ. ಅಂತರಂಗ ಮತ್ತು ಬಹಿರಂಗ ಎರಡೂ ಶುದ್ಧಿಗೆ ಅವಕಾಶವಿರುವ ಅಂತಹ ಪ್ರಶಾಂತ, ಪರಿಶುದ್ಧ ತಾಣದಲ್ಲಿ 'ದೇವರು' ನೆಲೆಸುವ ಎಲ್ಲ ಸಾಧ್ಯತೆಯೂ [illegible].


● ದುರ್ಗಾ ಎಸ್ ಭಟ್



ಪಪ್ಪಾ ಪ್ಲಸ್ ಅಥವಾ ಮೈನಸ್

ನಾವೆಲ್ಲ ಸಣ್ಣವರಿದ್ದಾಗಿನಿಂದಲೂ ಓದುತ್ತ ಇಲ್ಲ ಕೇಳುತ್ತ ಬಂದಿರುತ್ತೇವೆ "ಮನುಷ್ಯ ಸಮಾಜ ಜೀವಿ" ಎಂದು. ಹಾಗೆ ಹೇಳಲು ನಾವೇನೂ ಸಮಾಜ ಶಾಸ್ತ್ರಜ್ಞರೇ ಆಗಿರಬೇಕು ಎಂದಿಲ್ಲ, ಶಾಲೆಯನ್ನೇ ಹೊಕ್ಕಿರದ ಮನುಷ್ಯ ಸಹಿತ ಈ ಮಾತನ್ನು ಹೇಳುತ್ತಾನೆ. ಎಲ್ಲರೂ ತಮ್ಮದೇ ಆದ ವಿಚಾರ ಹಾಗೂ ಬುದ್ಧಿಮತ್ತೆಯ ಆಳ, ಅಗಲ ಹಾಗೂ ಹರಿವಿನ ಆಧಾರದ ಮೇಲೆ 'ಸಮಾಜ' ಎಂಬ ಪದದ ವ್ಯಾಖ್ಯಾನ ಮಾಡುತ್ತೇವೆ. ಆದರೆ ನಿಜವಾದ ಅರ್ಥದಲ್ಲಿ ಅದಕ್ಕೆ ಪೂರಕವಾಗಿ ನಡೆದುಕೊಳ್ಳಬೇಕಾಗಿ ಬಂದಾಗ ಮಾತ್ರ ಚಿತ್ರವಿಚಿತ್ರ ಕಾರಣಗಳನ್ನೊಡ್ಡಿ ನುಣುಚಿಕೊಳ್ಳಲು ಪ್ರಯತ್ನಿಸುತ್ತೇವೆ. ಈ 'ಸಾಮಾಜಿಕ ಜವಾಬ್ದಾರಿ' ಅಥವಾ 'ಸಮಾಜಜೀವಿಯ ನಡವಳಿಕೆಗಳು' ಎಂಬ ಶಬ್ದಗಳನ್ನು ಕೇವಲ ಹೊರಜಗತ್ತಿನ ಬಗ್ಗೆ ಮಾತಾಡುವಾಗ ಮಾತ್ರ ಬಳಸಬೇಕು ಎಂದಿಲ್ಲ. ಸಾಮಾಜಿಕ ಜವಾಬ್ದಾರಿ ನಿಭಾಯಿಸುವುದನ್ನು ನಮ್ಮ ವೈಯಕ್ತಿಕ ಬದುಕು ಹಾಗೂ ಕುಟುಂಬಗಳಿಂದಲೇ ಪ್ರಾರಂಭಿಸಬಹುದು. ಆದ್ದರಿಂದಲೇ ಸಮಾಜ ಶಾಸ್ತ್ರದಲ್ಲಿ "ಕುಟುಂಬವನ್ನು ಸಮಾಜದ ಮೂಲ ಅಂಗ" ಎಂದು ಕರೆಯುತ್ತಾರೆ. ಕುಟುಂಬಗಳು ಎಷ್ಟು ಆರೋಗ್ಯಕರ ಹಾಗೂ ಸಂತೋಷದಿಂದ ಇರುತ್ತವೆಯೋ ಅದರ ಆಧಾರದ ಮೇಲೆ ಸಮಾಜವೂ ಆರೋಗ್ಯಕರವಾಗಿರುತ್ತದೆ. ಒಂದು ಆರೋಗ್ಯಕರ ಸಮಾಜಕ್ಕೆ ಇನ್ನೂ ಹಲವಾರು ಅಂಶಗಳ ಅಗತ್ಯ ಇರುವುದು ನಿಜವಾದರೂ, ಈ ಲೇಖನದ ಮೂಲಕ ಕುಟುಂಬದ ಪ್ರಭಾವವನ್ನು ಮೊದಲು ಗಮನಿಸೋಣ. ವಿವರಣೆಗೆ ಮುಂಚೆ ಕೆಲವು ಕಥೆ ಅಥವಾ ಸನ್ನಿವೇಶಗಳನ್ನು ಉದಾಹರಣೆಗಾಗಿ ನೀಡುತ್ತೇನೆ.

ಪ್ರಸಾದ್ ಮತ್ತು ಪ್ರೇಮಾ ಆರ್ಕಿಟೆಕ್ಚರ್ ಮಾಡುವಾಗಿನಿಂದ ಸ್ನೇಹಿತರು. ಸ್ನೇಹ ಪ್ರೇಮಕ್ಕೆ ತಿರುಗಿತು. ಪ್ರಸಾದ್‌ಗೆ ತಂದೆತಾಯಿ ಇರಲಿಲ್ಲ, ಇದ್ದದ್ದು ಒಬ್ಬ ಅಕ್ಕ. ಹೀಗಾಗಿ ಯಾವ ಆತಂಕವೂ ಇಲ್ಲದೆ ಮದುವೆಯೂ ಆಯ್ತು, ಮದುವೆಯ ನಂತರ ಸ್ವಲ್ಪ ದಿನ ಎಲ್ಲ ಚೆನ್ನಾಗಿಯೇ ಇತ್ತು, ಆದರೆ ಪ್ರೇಮಾಳಲ್ಲಿ ಅದ್ಯಾಕೋ ಸ್ವಲ್ಪಸ್ವಲ್ಪವಾಗಿ ಅಸಹನೆ ಬೆಳೆಯತೊಡಗಿತು. ಮೊದಲಿನಿಂದಲೂ ಅವಳು ಸ್ವಲ್ಪ ಸಿಡುಕು ಹಾಗೂ ಹಠಮಾರಿ ಸ್ವಭಾವದವಳೇ ಇದ್ದುದರಿಂದ ಪ್ರಸಾದ್‌ಗೆ ಈ ಬದಲಾವಣೆಗಳು, ಅಷ್ಟಾಗಿ ಕಾಣಿಸಲಿಲ್ಲ, ಅವರಿಬ್ಬರೂ ಬೇರೆ ಬೇರೆ ಕಡೆ ಕೆಲಸಕ್ಕೆ ಸೇರಿದ್ದರು. ಆದರೆ ಪ್ರಸಾದ್ ಬಹಳ ಶೀಘ್ರವಾಗಿ ತನ್ನ ವೃತ್ತಿಯಲ್ಲಿ ನೆಲೆಯೂರತೊಡಗಿದ್ದ. ತನ್ನದೇ ಆದ ಛಾಪನ್ನು ತನ್ನ ಕೆಲಸಗಳಲ್ಲಿ ಮೂಡಿಸತೊಡಗಿದ್ದ. ಆದರೆ ಪ್ರೇಮಾಗೆ ಅದು ಸಾಧ್ಯವಾಗಿರಲಿಲ್ಲ, ಆದರೆ ಅವಳದನ್ನು ಒಪ್ಪಿಕೊಳ್ಳುವ ಮನಸ್ಥಿತಿಯಲ್ಲಿ ಇರಲಿಲ್ಲ, ಏಕೆಂದರೆ ಮೊದಲಿನಿಂದಲೂ ಅವಳು ಓದಿನಲ್ಲಿ ಯಾವಾಗಲೂ ಮುಂದೆ ಅಲ್ಲದೆ ಆರ್ಕಿಟೆಕ್ಚರ್‌ನಲ್ಲಿ ಕೂಡ ಅವಳೇ ಹೆಚ್ಚಿನ ಮಾರ್ಕ್ಸ್ ಗಳಿಸಿದ್ದಳು. ಅವಳ ಅಸಹನೆಯ ಕಾರಣ ಅದಾಗಿತ್ತು, ಓದೇ ಬೇರೆ ವೃತ್ತಿಜೀವನವೇ ಬೇರೆ ಎಂಬ ಕನಿಷ್ಠಮಟ್ಟದ ವ್ಯತ್ಯಾಸವನ್ನು ಅವಳಿಂದ ಗುರುತಿಸಲಾಗಲಿಲ್ಲ, ಮುಖ್ಯವಾಗಿ ಅವಳಿರುವ ವೃತ್ತಿಯಲ್ಲಿ ಕ್ರಿಯಾತ್ಮಕತೆ ಎಷ್ಟು ಮುಖ್ಯ ಎಂಬುದು ಎಂಥವರಿಗೂ ಅರ್ಥವಾಗುವ ವಿಚಾರ. ಆದರೆ ಅವಳ ಅಸಹನೆ ಮೀರಿ ಬೆಳೆಯತೊಡಗಿತು. ದಿನನಿತ್ಯ ಅನಗತ್ಯ ವಾದ ವಿವಾದ, ಏನಾದರೂ ಕಾರಣ ಒಡ್ಡಿ ಪ್ರಸಾದ್‌ನನ್ನು ಹೀಯಾಳಿಸುವುದು, ತಂದೆ ತಾಯಿ ಇಲ್ಲದೆ ಬಡತನದಲ್ಲಿ ಬೆಳೆದ ಅವನ ಜೀವನಶೈಲಿಯನ್ನು ಅಣಕಿಸುವುದು ಒಂದೆರಡಲ್ಲ. ಪ್ರಸಾದ್ ಬಹಳ ಶಾಂತ ಸ್ವಭಾವದವನಾದರೂ ಅವನ ಸಹನೆಯೂ ಮುಗಿಯುತ್ತ ಬಂದಿತ್ತು. ಅಷ್ಟರಲ್ಲಿ ಪ್ರೇಮಾ ಗರ್ಭಿಣಿ ಎಂದು ಗೊತ್ತಾದಾಗ ಇಬ್ಬರೂ ಬದಲಾದರು. ಪ್ರೇಮಾಗೆ ತನ್ನ ಗಮನ ಹರಿಸಲು ಬೇರೆ ವಿಷಯ ಸಿಕ್ಕಿತ್ತು, ಪ್ರಸಾದ್ ಖುಷಿಯಲ್ಲಿದ್ದ. ಗಂಡು ಮಗು ಹುಟ್ಟಿದಾಗ ಬದುಕೇ ಬದಲಾಗಿತ್ತು. ಸುಮಾರು ಒಂದು, ಒಂದೂವರೆ ವರ್ಷ ಆರಾಮವಾಗಿಯೇ ಇದ್ದ ಪ್ರೇಮಾ ಮತ್ತೆ ತನ್ನ ಕೆರಿಯರ್ ಪ್ರಾರಂಭಿಸುವ ಇಚ್ಛೆ ವ್ಯಕ್ತಪಡಿಸಿದಾಗ ಪ್ರಸಾದ್ ಉತ್ತೇಜಿಸಿದ. 'ಮನೆಯಿಂದ




ಪ್ರಾರಂಭಿಸು. ನಿಧಾನಕ್ಕೆ ಎಲ್ಲ ಸರಿಹೋಗುತ್ತದೆ' ಎಂದ. ಆದರೆ ತನ್ನ ನಿರಾಸಕ್ತಿ ಹಾಗೂ ಆಲಸ್ಯದಿಂದ ಪ್ರಸಾದ್ ಕಳಿಸಿದ ಕ್ಲೈಂಟ್‌ಗಳಿಗೆ ಸರಿಯಾಗಿ ಕೆಲಸ ಮಾಡದೆ ಅದರ ಕಾರಣವನ್ನು ಮಗುವಿನ ಮೇಲೆ ಹಾಕತೊಡಗಿದಳು. 4-5 ವರ್ಷ ಕಳೆದು ಹೋಗುವಷ್ಟರಲ್ಲಿ ಪ್ರಸಾದ್ ಬಹಳ ಮುಂದೆ ಹೋಗಿದ್ದ. ಅವನದೇ ಆದ ಆಫೀಸು, ಕೆಲಸಕ್ಕೆ ಸಹಾಯಕರು. ಎಲ್ಲ ನೋಡಿದಾಗ ಅವಳಿಗೆ ಸಹಿಸಲಾಗಲಿಲ್ಲ, ಅವನು ಹೊರಗೆ ಹೋದಾಗ ಅವನ ಆಫೀಸ್‌ಗೆ ಹೋಗಿ ಕೂಡುವುದು. ಅವನ ಸಹಾಯಕರ ಮೇಲೆ ಅಧಿಕಾರ ಚಲಾಯಿಸುವುದು ಮಾಡಲು ಪ್ರಾರಂಭಿಸಿದಾಗ ಪ್ರಸಾದ್ ಅವಳಿಗೆ "ನೋಡು ನಿನಗೊಂದು ಪ್ರತ್ಯೇಕ ಆಫೀಸ್ ಮಾಡಿಕೊಡುತ್ತೇನೆ. ಇಲ್ಲಿ ಬಂದು ಹೀಗೆ ಕೂಡಬೇಡ, ಆಫೀಸಿನ ಶಿಸ್ತು ಕೆಲಸದ ವಾತಾವರಣ ಕೆಡುತ್ತದೆ" ಎಂದಾಗ 'ಹೋ' ಎಂದು ರಂಪ ಮಾಡಿ ಸಹೋದ್ಯೋಗಿಗಳ ಎದುರು ಅವನನ್ನು ಬಾಯಿಗೆ ಬಂದಂತೆ ಬಯ್ದು ಹೋದಳು. ಅದಾದನಂತರ ದಿನಾಲೂ ಇದೇ ವಿಷಯವಾಗಿ ಜಗಳ ಮಾಡುವುದು ಪ್ರಾರಂಭವಾಯಿತು. ಆತ ಹೆಚ್ಚಿಗೆ ಮಾತಾಡದೇ ಇದ್ದಾಗ ಫೋನ್ ಹಚ್ಚಿ ಬಯ್ಯುತ್ತಲೇ ಇರುವುದು. ಅವಳ ಪ್ರಕಾರ ಅವಳ ಕೆರಿಯರ್ ಹಾಳು ಮಾಡಿದ್ದು ಪ್ರಸಾದನೇ. ಅವಳಿಗೆ ಮಗು ಹುಟ್ಟಿದ್ದರಿಂದ ಅವಳು ಹಿಂದೆ ಬಿದ್ದಳು ಎಂಬುದು ಅವಳ ಏಕೈಕ ವಾದ. ಮೊದಲ ಬಾರಿಗೆ ಈ ವಿಷಯದಲ್ಲಿ ಜಗಳವಾದಾಗಿನಿಂದಲೂ ಮಗುವಿನ ಎಲ್ಲ ಜವಾಬ್ದಾರಿಯನ್ನೂ ಪ್ರಸಾದನೇ ಎತ್ತಿಕೊಂಡಿದ್ದ. ಅದರ ಸ್ನಾನ, ತಿಂಡಿ, ಸ್ಕೂಲಿಗೆ ಬಿಡುವುದು, ತಿರುಗಾಡಲು ಕರೆದೊಯ್ಯುವುದು ಎಲ್ಲ ಅವನೇ ಮಾಡತೊಡಗಿದ್ದ ಆದರೂ ಅವಳಲ್ಲಿ ಯಾವ ಬದಲಾವಣೆಗಳು ಆಗಿರಲೇ ಇಲ್ಲ, ಆದರೆ ಪ್ರಸಾದ್ ಮತ್ತು ಮಗ ಅಭಿಷೇಕ್ ಮಧ್ಯೆ ಪ್ರೀತಿಯ ಬಾಂಧವ್ಯ ಮಾತ್ರ ಬಹಳ ಗಟ್ಟಿಯಾಗಿತ್ತು, ಒಬ್ಬರನ್ನೊಬ್ಬರು ಬಿಟ್ಟು ಇರದಷ್ಟು ಆತ್ಮೀಯತೆ, ಒಬ್ಬರಲ್ಲಿ ಇನ್ನೊಬ್ಬರಿಗೆ ಆಸರೆ. ಪ್ರಸಾದ್ ಮಗುವಿನ ಜೊತೆ ಹೆಚ್ಚುಕಾಲ ಕಳೆದಷ್ಟೂ ಪ್ರೇಮಾ ತನ್ನ ತವರುಮನೆಗೆ ಹೋಗಿ ಹೆಚ್ಚು ಹೆಚ್ಚು ಸಮಯ ಕಳೆಯತೊಡಗಿದಳು. ಅವರಿಬ್ಬರ ಸಂಬಂಧ ಕೇವಲ ಹೆಸರಿಗೆ ಮಾತ್ರ ಎನ್ನುವಂತೆ ಉಳಿದಿತ್ತು, ಆಗಲೇ ಎಲ್.ಕೆ.ಜಿ.ಗೆ ಹೋಗುತ್ತಿದ್ದ ಅಭಿಷೇಕ್‌ಗೂ ಇದೆಲ್ಲ ಅಭ್ಯಾಸವಾಗಿ ಹೋಗಿತ್ತು, ಇಂಥ ಕೃತಕ ವಾತಾವರಣದಿಂದ ದೂರಹೋಗುವ ನಿರ್ಧಾರ ಮಾಡಿ ಪ್ರಸಾದ್ ಪ್ರೇಮಾಗೆ ಡೈವೋರ್ಸ್ ಪಡೆಯುವ ಬಗ್ಗೆ ಹೇಳಿದ. ಪ್ರೇಮಾಗೆ ಸಂಬಂಧದಲ್ಲಿ ಯಾವ ಆಸಕ್ತಿಯೂ ಉಳಿದಿರಲಿಲ್ಲ, ಆದರೆ ಅವಳ ಈರ್ಷ್ಯೆ, ಮತ್ಸರ ಎಷ್ಟು ಬೆಳೆದಿದ್ದವೆಂದರೆ, "ನನ್ನ ಜೀವನ ಹಾಳು ಮಾಡಿ, ಕೆರಿಯರ್ ಹಾಳು ಮಾಡಿ ಈಗ ಆರಾಮವಾಗಿ ಹೊರಗೆ ಹೋಗಬೇಕು ಅಂದ್ಕೊಂಡಿದ್ದೀಯಾ, ನೋವು ಅನುಭವಿಸುವುದು ಅಂದರೆ ಹೇಗಿರುತ್ತದೆ ತೋರಿಸ್ತೀನಿ ನೋಡು" ಎಂದು ಆತ ನೀಡಿದ ಮ್ಯೂಚುವಲ್ ಡೈವೋರ್ಸ್‌ಗೆ ಒಪ್ಪಿಗೆ ನೀಡಲಿಲ್ಲ, ಅವನಾಗಿ ಡೈವೋರ್ಸಿಗೆ ಅರ್ಜಿ ಹಾಕಿದಾಗ, ತನಗೆ ಮಗುವಿನ ಸಂಪೂರ್ಣ ಕಸ್ಟಡಿ ಕೊಡಬೇಕು ಹಾಗೂ ಪ್ರಸಾದ್‌ಗೆ ಭೇಟಿ ಆಗುವ ಅವಕಾಶವನ್ನೂ ನೀಡಬಾರದು ಎಂದು ಕೋರ್ಟಿನ ಮುಂದೆ ಅರ್ಜಿ ಸಲ್ಲಿಸಿದಳು. ಪ್ರಸಾದ್ ಕಂಗಾಲಾದ. ಮಗುವಿನಿಂದ ದೂರ ಇರುವ ವಿಚಾರವೇ ಅವನನ್ನು ಕೊಲ್ಲತೊಡಗಿತು. ಕೇಸು ನಡೆದಾಗ ಕೋರ್ಟಿನಲ್ಲಿಯೇ ಮಗುವನ್ನು ಭೇಟಿಯಾಗಲು ನ್ಯಾಯಾಧೀಶರು ನೀಡಿದ ಅವಕಾಶ ಅವನನ್ನು ಕುಗ್ಗಿಸುತ್ತಿತ್ತು, ಭೇಟಿ ಮುಗಿದು ಪ್ರೇಮಾ ಒತ್ತಾಯದಿಂದ ಮಗುವನ್ನು ತಂದೆಯಿಂದ ದೂರ ಮಾಡಿ ಎಳೆದುಕೊಂಡು ಹೋಗುವಾಗ ಪ್ರಸಾದ್‌ನ ಕರುಳು ಕಿತ್ತು ಬಂದಂತಾಗುತ್ತಿತ್ತು, ಆದರೆ ಆತನಿಗೆ ಬೇರೆ ದಾರಿ ಇಲ್ಲ. ಇಷ್ಟು ವರ್ಷಗಳಿಂದಲೂ ತಾಯಿಯ ಸ್ಥಾನದಲ್ಲಿದ್ದು ಮಗುವಿನ ಎಲ್ಲ ಅಗತ್ಯಗಳನ್ನು ಆತನೇ ಪೂರೈಸಿದ್ದರೂ ಅದ್ಯಾವ ಆಧಾರದ ಮೇಲೆ ಕೋರ್ಟು ಮಗುವಿನ ಕಸ್ಟಡಿಯನ್ನು ತಾಯಿಗೆ ನೀಡಿತು ಎಂಬುದೇ ಆತನಿಗೆ ತಿಳಿಯಲಿಲ್ಲ.

ಆದರೆ ಸದಾ ತಂದೆಯೊಂದಿಗೆ ಸಂತೋಷದಿಂದ ಕಾಲಕಳೆಯುತ್ತಿದ್ದ, ಸ್ಕೂಲಿನ ನಂತರವೂ ತಂದೆಯ ಆಫೀಸಿನಲ್ಲಿ ಆತನ ಹಾಗೂ ಆತನ ಸಹೋದ್ಯೋಗಿಗಳೊಂದಿಗೆ ಆಡಿಕೊಂಡು ಇರುತ್ತಿದ್ದ ಅಭಿಷೇಕ್ ಮಾತ್ರ ಮಂಕಾಗಿದ್ದ. ಮಗುವಿನ ಮುಖದಲ್ಲಿ ನಗು ಮಾಯವಾಗಿ ವಿಷಾದ ನೆಲೆಮಾಡಿತ್ತು, ಪ್ರಸಾದ್ ಮುಖದಲ್ಲಿ ನೋವು ಕಂಡಾಗ ಪ್ರೇಮಾಗೆ ಅದೆಂಥ ಸಮಾಧಾನ ಆಗುತ್ತದೋ ಗೊತ್ತಿಲ್ಲ.

ಕುಮಾರ್ ಜಹಾಗೀರ್‌ದಾರ್ ಅವರ ಹೆಸರನ್ನು ಬಹುತೇಕ ನೊಂದ ಗಂಡಸರು ಕೇಳಿರಬಹುದು. "ಪತ್ನಿ ಪೀಡಿತರ ಸಂಘ" ಕಟ್ಟಿ ಹೆಂಗಸರ ಪರವಾದ ಕಾನೂನುಗಳ ದುರ್ಬಳಕೆಯಿಂದ ನೊಂದ, ತೊಂದರೆಗೆ ಒಳಗಾದ ಪುರುಷರಿಗೆ ನೈತಿಕ ಸಮಾಧಾನ ಹಾಗೂ ಮಾನಸಿಕ ಸ್ಥೈರ್ಯ ನೀಡುವ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಬೇರೆ ಯಾವುದೇ ಕಾರಣಕ್ಕೆ ದಮನಿತ ವ್ಯಕ್ತಿಗೆ ಸಹಾಯ, ಸಾಂತ್ವನ ನೀಡುವುದು ಬಹಳ ಸುಲಭ. ಆದರೆ ಹೆಂಡತಿಯಿಂದ ತೊಂದರೆಗೆ ಒಳಗಾದ ವ್ಯಕ್ತಿಗೆ ಸಮಾಧಾನ ನೀಡುವುದು ಎಂದಕೂಡಲೇ ನಮ್ಮ ಸಮಾಜದಲ್ಲಿ ಮಿಶ್ರ ಪ್ರತಿಕ್ರಿ[ಯೆ] ಬರಲು ಪ್ರಾರಂಭಿಸುತ್ತವೆ. ಅದರಲ್ಲಿ ಮೊದಲನೆ[ಯದು] ಅಪಹಾಸ್ಯ, ಎರಡನೆಯದು ವಿರೋಧ. ಈ ಎ[...] ಬಗೆಯ ಪ್ರತಿಕ್ರಿಯೆ ನೀಡುವವರಲ್ಲಿ ಗಂಡಸರು ಹ[...] ಹೆಂಗಸರು ಇಬ್ಬರೂ ಇದ್ದಾರೆ.

"ಏ ನೋಡೆ, ನನ್ನ ಮಾತೇನಾದ್ರೂ ಕೇಳದಿದ್ರೆ [...] ಪೀಡಿತರ ಸಂಘ' ಸೇರ್ಕೊಂಡು ನಿನ್ನ ವಿರುದ್ಧ ಪ್ರತಿ[...] ಮಾಡ್ತೀನಿ" ಎಂದು ನಗುವ ಗಂಡಸರು, "ಓಹೋ [...] ಸೇರ್ಕೊಂಡು ಅದೇನ್ ಕಿತ್ಕೊತೀರಿ ಕಿತ್ಕೊಳ್ಳಿ" ಎ[...] ಹೆಂಗಸರು, "ಸಂಘ ಕಟ್ಟಿ ಶತಮಾನದಿಂದ ತುಳಿತಕ್ಕೊ[...] ಹೆಂಗಸರ ಭಾವನೆಗಳಿಗೆ ಧಕ್ಕೆ ತಂದಿದ್ದೀರಿ" ಎನ್ನುವ ಮ[...] ಪರ ಸಂಘಟನೆಗಳು. ಇವೆಲ್ಲವುಗಳ ಮಧ್ಯೆ ಸ್ಥಿರವಾಗಿ [...] ಬಹಳ ದೊಡ್ಡದಲ್ಲದಿದ್ದರೂ ತನ್ನದೇ ಆದ ಮಟ[...] ಕೆಲಸ ಮಾಡುತ್ತಿರುವ ಸಂಘದ ಸಾಧನೆ ಮೆಚ್ಚಲೇ [...]

ಕುಮಾರ್ ಜಹಾಗಿರ್‌ದಾರ್ ಅವರು 198[...] ಚೇತನಾ ಎಂಬುವರನ್ನು ಮದುವೆ ಆಗಿದ್ದರು. 199[...] ಅವರಿಗೆ ಒಂದು ಹೆಣ್ಣು ಮಗುವಾಗಿ ಕೆಲ ಸ[...] ಸಹಜ ಜೀವನ ಮುಂದುವರಿಯಿತು. ಆದರೆ ಗಂಡಹ[...] ಮಧ್ಯೆ ಹೊಂದಾಣಿಕೆ ಆಗದ ಕಾರಣ ಇಬ[...] ಮ್ಯೂಚುವಲ್ ಡೈವೋರ್ಸಿಗೆ ಒಪ್ಪಿ ಸಹಮತ[...] ಮಗುವಿನ ಕಸ್ಟಡಿಯನ್ನು ಇಬ್ಬರೂ ಹೊಂದುವ ನಿ[...] ಮಾಡಿ ಡೈವೋರ್ಸ್ ಪಡೆದರು. ಆದರೆ ಸ್ವಲ್ಪ ಸಮಯ[...] ಚೇತನಾ ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರನ್ನು ಮ[...] ಆದರು. ಮೊದಲು ಮಗುವಿನ ಕಸ್ಟಡಿ ಹಂಚಿಕೊ[...] ವಿಚಾರದಲ್ಲಿ ಸಹಮತ ಹೊಂದಿದ್ದ ಚೇತನಾ [...] ಮಗುವಿನ ಸಂಪೂರ್ಣ ಕಸ್ಟಡಿ ತಮಗೇ ಬೇಕು [...] ಕೌಟುಂಬಿಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ[...] ಜಹಾಗೀರ್‌ದಾರ್ ಕೂಡ ಪ್ರತಿರೋಧ ಒಡ್ಡಿ ಚೇ[...] ತಮ್ಮ ಪತಿಯೊಂದಿಗೆ ನಿರಂತರ ವಿ[...] ಪ್ರವಾಸಗಳಲ್ಲಿರುವುದರಿಂದ ಹಾಗೂ ತಾವು ಬೆಂಗಳೂರಿ[...] ನೆಲೆಸಿರುವುದರಿಂದ ಮಗುವನ್ನು ತಮಗೇ ನೀಡ[...] ಎಂದು ವಾದಿಸಿದರು. ಜಹಾಗೀರ್‌ದಾರ್ ಅವರ [...] ಮನ್ನಿಸಿದ ಕೌಟುಂಬಿಕ ನ್ಯಾಯಾಲಯ ಕಸ್ಟಡಿ ಅವ[...] ನೀಡಿತು. ಅದರ ಮೇಲೆ ಹೈಕೋರ್ಟಿಗೆ ಹೋದ ಚೇ[...] ಅವರ ವಾದ ಮನ್ನಿಸಿದ ಹೈಕೋರ್ಟ್ ಕಸ್ಟಡಿ ಅ[...] ನೀಡಿತು. ನಂತರ ಸುಪ್ರೀಂಕೋರ್ಟಿನಲ್ಲಿ ನಿರ್ಧಾರ ಬ[...] ಕಸ್ಟಡಿ ತಾಯಿಗೆ ಹೋಗಿ ತಂದೆಗೆ ಭೇಟಿಯ ಅವ[...] ದೊರೆಯಿತು. ಆದರೆ ತೀರ್ಪಿನ ಮಾರ್ಪಾಡು ಬಯ[...] ಜಹಾಗೀರ್‌ದಾರ್‌ಗೆ ಅದು ದೊರೆಯಲಿಲ್ಲ, ಕಾರಣ[...] ಕೇಸುಗಳ ಪ್ರಕ್ರಿಯೆ ಪ್ರಾರಂಭವಾದಾಗ 9 ವರ್ಷದವಳ[...] ಮಗಳು ಇದಕ್ಕೊಂದು ನೆಲೆ ಬರುವಷ್ಟರಲ್ಲಿ [...] ವರ್ಷದವಳಾಗಿ ಕಾನೂನಿನ ದೃಷ್ಟಿಯಲ್ಲಿ ವಯಸ್ಕಳಾಗಿ[...] ಇಂತಹ ಸನ್ನಿವೇಶ ಅದೆಷ್ಟೋ ತಂದೆತಾಯಿಯ ಜೀವ[...] ಬರುತ್ತವೆ. ಆದರೆ ಅದನ್ನು ಅದೃಷ್ಟ, ಹಣೆಬರಹ, [...] ಎಂದು ಏನೇನೋ ಹೆಸರಿನಿಂದ ಹ[...] ಸುಮ್ಮನಾಗುವವರು ಬಹಳ. ಆದರೆ ಕುಮ[...] ಜಹಾಗೀರ್‌ದಾರ್ ಹಾಗಾಗದೆ ತಮ್ಮಂತೆ ನ[...] ಪುರುಷರಿಗೆ ಹಾಗು ಮಕ್ಕಳಿಂದ ದೂರವಾಗಿ ಮಾನಸಿ[...] ತೊಳಲಾಡುತ್ತಿರುವ ಜನರಿಗೆ ತನ್ನದೇ ಆದ ರೀತಿ[...] ಮಾರ್ಗದರ್ಶನ ನೀಡುವ ಉದ್ದೇಶದಿಂದ 'CRI[...] (Children's Rights Initiative for Sha[...] Parenting) ಸ್ಥಾಪಿಸಿದ್ದಾರೆ.



ಅದರ ಬಗ್ಗೆ, ಅದರ ಅಗತ್ಯ ಆಶಯ ಹಾಗು ಮಕ್ಕಳ ಜೀವನದಲ್ಲಿ ತಂದೆತಾಯಿಯ ಪಾತ್ರಗಳ ಬಗ್ಗೆ ಮುಂದಿನ ವಾರ ಬರೆಯುತ್ತೇನೆ.

● ರಾಜಲಕ್ಷ್ಮೀ ಅಂಕಲಗಿ

ಒಂದೇ ಮಾತರಂ, ಹರಿ ಓಂ
...ು ನಾನು ಬೆತ್ತಲಾದ ಕಥನ!
...ು ಪಶುಪತಿ ಬಿಟ್ಟ
...ರು ಬದಲಾಯಿಸಿಕೊಂಡಿದ್ದೇನೆ)
...ದುಪಿಯವನು, ಉಡುಪಿಲ್ಲದಿದ್ದರೆ
...ಲ್ಲ ಹಾಗೆಯೆ ಬೆತ್ತಲಾಗುವವನು.

...ು ಚಿಕ್ಕವನಿದ್ದಾಗ
...ಕ್ಕೂ ಮಗುವಿನ ಹಾಗೆಯೇ ಇದ್ದೆ.
...ಯಲ್ಲಿ ತುಂಬಾ ನಗುತ್ತಿದ್ದೆ
...ಕ್, ಸುಬ್ಬ, ಅಂತೋನಿಯೊಂದಿಗೆ
...ದೇ ಬೆಂಚಿನಲ್ಲಿ ಕೂತು
...ಠ ಕೇಳುತ್ತಿದ್ದೆ. ಅಲ್ಲಿಯತನಕ
...ು ನನ್ನ ಹೆಸರಿಗೆ ತಕ್ಕಂತೆ
...ು ಆಗಿಯೇ ಇದ್ದೆ.
...ೀಮುಖಿ ವ್ಯಾಘ್ರನಾಗಿದ್ದು
...ುಲೆಯ!

...ೇಜು ಸೇರಿದಾಗ
...ಡುಗಿಯರ ಬಗ್ಗೆ ಮತ್ತು ಅವರ
...ಗ ದಾವಣಿ ಕುಪ್ಪಸದ ಬಗ್ಗೆ
...ಪ್ಪಸದಲ್ಲಿ ಉಸಿರು ಬಿಗಿಯಾಗುವಷ್ಟು
...ೂಹಲವಿತ್ತು ನನಗೆ.
...ಲ್ಲ ವಯೋಸಹಜ ಎಂದು
...ಭಾವಿಸಿದ್ದ ನನಗೆ
...ೊಂದು ಕಾಯಿಲೆಯಾಗಿ ಉಳಿದುಬಿಟ್ಟಿತಲ್ಲ
...ದು ನಂತರ ಅನಿಸತೊಡಗಿತ್ತು.

...ೇಜಿನ ಕಾರಿಡಾರ್‌ನಲ್ಲಿ
...ಡುಗಿಯರ ಹಿಂದೆ ಸುತ್ತುತ್ತಿದ್ದಾಗ
...ಯನೊಬ್ಬ ಹೇಳಿದ
...ಎಸ್‌ಎಸ್ ಸೇರು ಮಜಾ ಇರುತ್ತೆ ಅಂತ.
...ಕಿವಿಗೆ ಅದು ತಪ್ಪಾಗಿ ಕೇಳಿ
...ು ಆರೆಸ್ಸೆಸ್ ಸೇರಿದೆ.
...ಗಾಗ ಉಕ್ಕುತ್ತಿದ್ದ ಯೌವನ
...ಘದಲ್ಲಿ ನನಗೆ ಸಂಗವಾಯ್ತು
...ಯಂಸೇವಕ ಸಂಘವಾದ ಕಾರಣ
...ಲ್ಲವೂ ಉಚಿತವಾಗಿಯೇ ಇತ್ತು ಬಿಡಿ.

...ಸಲ್ಮಾನರು ಗಂಡಾಂತರ
...ಸ್ತರು ಮತಾಂತರ ಎಂದೆಲ್ಲ
...ಗೆ ಅಲ್ಲಿ ಮನವರಿಕೆ ಮಾಡಿದರು.
...ನಾತ-ನ ಸಂಸ್ಕೃತಿ,
...ನುಸ್ಮೃತಿ ಮತ್ತನೇಕ ವಿಕೃತಿ
...ು ಮೀಮಾಂಸೆ, ಗೋಮಾಂಸೆ
...ಲ್ಲವನೂ ನಾನು ಅಲ್ಲಿಯೆ ಕಲಿತೆ.

...ಂಗಳೂರಿನ ಮಾಧವಿ
...ಟಪಳ್ಳದ ಕಾಸಿಮ್ ಜೊತೆ
...ಂಗಾಳದ ಪಾಂಡುರಂಗ ಭವನದಲ್ಲಿ
...ಕ್ರೀಮ್ ಮೆಲ್ಲುತ್ತಿದ್ದಾಗ
...ವರಿಬ್ಬರನೂ ಪೊಲೀಸರಿಗೊಪ್ಪಿಸಿ
...ವ್ ಜಿಹಾದ್ ತಡೆದು
...ಮ್ಮ ಧರ್ಮ ರಕ್ಷಿಸಿದ
...ರ್ತಿ ನನಗೇ ಸಲ್ಲಬೇಕು.

...ಮಿಗಳ ದಿನ ಬಸ್ಸಿಗೆ ಕಾಯುತ್ತಿದ್ದ
...ೋಡಿಯ ಮೇಲೆ ದಾಳಿ ಮಾಡಿದಾಗ
...ವು ಅಣ್ಣತಂಗಿ ಎಂದು
...ವರೆಷ್ಟೇ ಹೇಳಿದರೂ
...ವರ ತಂದೆ ತಾಯಿಯೇ
...ಪೊಲೀಸ್ ಠಾಣೆಗೆ ಬಂದು
...ದ ಮಾಡಿದರೂ
...ಎ ರಿಪೋರ್ಟ್ ಬರುವತನಕ
...ವು ಅವರನ್ನು ಬಿಟ್ಟಿರಲಿಲ್ಲ ಗೊತ್ತಾ

...ಷತ್, ದಳ, ಸೇನೆ, ಸಂಘ ಎಲ್ಲದರಲ್ಲೂ
...ರಿಷಿನಲ್ಲಿ ಉತ್ತೀರ್ಣನಾದ ನನಗೆ
...ಜಕಾರಣ ಸೆರಗು ಬೀಸಿ ಕರೆಯಿತು
...ವ ಪ್ರತಿನಿಧಿಯಾಗಿ ಆಯ್ಕೆಯಾದೆ.
...ಸಂಪರ್ಕ ಜಾಸ್ತಿಯಾಯಿತು
...ಂದಿ ಮಕ್ಕಳು ಬೋರಾಯಿತು
...ವನ ಸಹವಾಸವೂ ಬೋರಾಯಿತು

...ದತಿಗೆ ನನ್ನ ಬಗ್ಗೆ ಅಸಹನೆ
...ಗ್ಗಿ, ಕ್ಸ್ಟ್ರಂಡ ಆಕೆ ಹುಡುಗ್ಗಿ
...ನಾನದ ಮುಕ್ಕಡಿಯೊಂದರಲ್ಲಿ
...ಗ ತೇಯಿಸಿಕೊಂಡಳು.
...ಗೆ ನಾನು ಬೆತ್ತಲಾದೆ

ಪಶುಪತಿ ಬೆತ್ತಲಾದ ಕಥೆ!

(ಈ ಪದ್ಯದಲ್ಲಿರುವ ಎಲ್ಲಾ ವ್ಯಕ್ತಿಗಳು ಕಾಲ್ಪನಿಕ ಸೃಷ್ಟಿಗಳು)



ನನ್ನ ಕಥೆ ಮುಗಿಯಿತು
ಜೈಲಿಗೆ ಹೋಗಬೇಕಾಯಿತು
ಎಂದೆಲ್ಲ ಹತಾಶನಾಗಿ ಕೂತಿದ್ದೆ.
ಆದರೆ ನಮ್ಮೂರಿನ ಮೇಸ್ತ್ರ ಮಗ
ಭಾಸ್ಕರ್ ಫೆರ್ನಾಂಡಿಸ್ ಅಲ್ಲಿಂ-ದಿಲ್ಲಿಗೆ
ನನ್ನನ್ನು ಬಚಾವ್ ಮಾಡಿದರು.
ಉಕ್ಕಿ ಹರಿದ ಯಮುನೆಯಲ್ಲಿ
ಆ ಪ್ರಕರಣ ಕೊಚ್ಚಿ ಹೋಯಿತು
ಪ್ರಿಯೆಯ ಪದ್ಮ ನಯನ ಮುಚ್ಚಿ ಹೋಯಿತು.

ಸಂಘದವರು ಜನಪ್ರನಿಧಿಗಳಾಗಬೇಕಾದರೆ
ಸದಾ ಸುಳ್ಳು ಹೇಳಬೇಕು
ಜನರನ್ನು ಪ್ರಚೋದಿಸಬೇಕು
ಭಾವನೆ ಕೆರಳಿಸಬೇಕು
ಕಲ್ಲು ಹೊಡೆಯಬೇಕು
ಕತ್ತಿ ಮಸೆಯಬೇಕು ಎತ್ತಿ ಕಟ್ಟಬೇಕು
ಹೀಗೆಲ್ಲ ಮಾಡಿ ನಾವು ಗೆದ್ದು ಬರಬೇಕು!
ಜನರ ನಿತ್ಯದ ಬದುಕು-ಬವಣೆ
ನಮಗೆ ಚುನಾವಣೆಯ ವಿಷಯವಲ್ಲ
ಎಂದು ಜನರಿಗೂ ಗೊತ್ತು.

ನಾವು ಕಲ್ಲು ಹೊಡೆದಾಗ ಇಲ್ಲಿನ ಚರ್ಚಿಗೆ
ಅದು ಕೇವಲ ಚುನಾವಣೆಯ ಖರ್ಚಿಗೆ
ಎಂದು ಮಾನ ಉಳಿಸಿದ ಫೆರ್ನಾಂಡಿಸ್‌ಗೂ
ಮತ್ತು ಅವರ ಫೆವಿಕಾಲ್ ಹೆಂಡತಿಗೂ
ಹೇಳಿ ಸಮಾಧಾನಪಡಿಸಿದ್ದೆ.

ದನಪಾಲ ಚೋರ್ಣ ನನ್ನ ಸಂಘದ ಗೆಳೆಯ,
ಒಂದು ದಿನ ಹೊತ್ತು ಕಂತುವ ಹೊತ್ತಿನಲ್ಲಿ
ಆತ ಫೋನ್ ಮಾಡಿ ಹೇಳಿದ.
ದನ ಸಾಗಾಟ ಮಾಡುತ್ತಿದ್ದ
ಟೆಂಪೋ ಅಡ್ಡ ಹಾಕಿದ್ದೇವೆ
ಹಾಜಬ್ಬ ಹಸನಬ್ಬರನ್ನು ಥಳಿಸಿದ್ದೇವೆ
ಗೋಮಾತೆಯನ್ನು ತಲುಪಬೇಕಾದ
ಜಾಗಕ್ಕೆ ಕಳಿಸಿದ್ದೇವೆ
ಸ್ವಲ್ಪ ಮಾಂಸವನ್ನೂ ಉಳಿಸಿದ್ದೇವೆ
ಇನ್ನೇನು ಮಾಡಲಿ ಎಂದು ಕೇಳಿದ.
ನಾನು ತಕ್ಷಣ ಅಲ್ಲಿಗೆ ಧಾವಿಸಿದೆ.

ಇಬ್ಬರ ಅಂಗಿ ಆಗಲೇ ಕಳಚಿತ್ತು
ನಾನು ಲುಂಗಿಯನ್ನೂ ಕಿತ್ತು ಬಿಸಾಡಿ
ಎಂದು ಆದೇಶ ನೀಡಿದೆ ಮತ್ತು ನೋಡಿದೆ
ಹಾಜಬ್ಬ ಹಸನಬ್ಬ ಇಬ್ಬರೂ ಬೆತ್ತಲೆ!
ವಯಸ್ಸಿಗೆ ಮೀರಿದ ಮುಪ್ಪು
ಸುಕ್ಕುಗಟ್ಟಿದ ಕೈಕಾಲು,
ನಮ್ಮ ಸ್ವಯಂಸೇವಕರ ಒದೆ ತಿಂದು
ರಕ್ತ ಒಸರುತ್ತಿರುವ ಗಾಯಗಳು
ಬೆನ್ನಿಗೆ ಅಂಟಿಕೊಂಡ ಹೊಟ್ಟೆ
ಮುಖದಲ್ಲಿ ಅಸಹಾಯಕ ರೋದನ.
ಆರವತ್ತು ದಾಟಿದ ಮೇಲೆ
ನನ್ನ ಶಿಶ್ನವೂ ಹೀಗೆಯೆ ಸೊರಗಿದರೆ
ಎಂದು ಕಲ್ಪಿಸಿಕೊಂಡು ಒಮ್ಮೆ ದಂಗಾದೆ.

2

ಎಲ್ಲವನೂ ಮರೆತು
ಮೊನ್ನೆ ಟಿವಿ ನೋಡುತ್ತಾ ಕೂತಿದ್ದೆ.
ಅದ್ಯಾವುದೋ ಒಂದು ಚಾನೆಲ್‌ನಲ್ಲಿ
ನನ್ನ ಹಾಗೆಯೆ ಕಾಣುವ ಒಬ್ಬ
ಹಾಸಿಗೆಯ ಬಳಿ ನಗ್ನವಾಗಿ ನಿಂತಿದ್ದ.
ಹೌದು ಅಷ್ಟು ನನ್ನ ಹಾಗೆಯೇ ಇದ್ದ
ಜಗತ್ತಿನಲ್ಲಿ ಒಂದೇ ರೀತಿ ಕಾಣಿಸುವ
ಏಳು ಜನರು ಇರುತ್ತಾರೆ ಎಂದು
ಅಮ್ಮ ಹೇಳಿದ್ದು ನೆನಪಾಯಿತು.
ಹಾಗಾದರೆ ಅದು ನಾನಲ್ಲ ಎಂದು
ನನಗೆ ನಾನೇ ಸಮಾಧಾನ ಹೇಳಿದೆ.
ಆದರೆ ಟಿವಿಯಲ್ಲಿದ್ದ ನಗ್ನ ಮಾನವ
ಕಳಚಿಟ್ಟ ಬಟ್ಟೆಗಳು ನನ್ನದೇ!
ಬಿಳಿ ಪಾಯಿಜಾಮ, ಅದೇ ಬಣ್ಣದ ಕುರ್ತಾ
ಮತ್ತು ಕ್ಯಾಲ್ವಿನ್ ಕ್ಲೇನ್ ಕಂಪೆನಿಯ
ಕೇಸರಿ ಲಂಗೋಟಿ!


ಹಾಸಿಗೆಯಲ್ಲೊಬ್ಬಳು ಚೆಂದದ ಹುಡುಗಿ
ನನ್ನನ್ನು ಕಂಡು ಅಸಹ್ಯಪಟ್ಟು
ನೀನು ಮನುಷ್ಯನಂತೆ ಕಾಣಿಸುತ್ತಿಲ್ಲ
ಎಂದು ಓಡಿಹೋಗಿ
ಬಾತ್‌ರೂಮ್‌ನಲ್ಲಿ ಅವಿತುಕೊಂಡಳು
ನಾನು ಆಗಲೂ ಬೆತ್ತಲೆ ನಿಂತಿದ್ದೆ.

ಟಿ.ವಿಯಲ್ಲಿ ಬಂದವನು ನಾನೇ ಇರಬಹುದೇ
ಎಂಬ ಅನುಮಾನ ಬಂದು ಮೈಬೆವರಿತು.
ನಾನು ಇಷ್ಟು ಬೇಗ ಬೆತ್ತಲಾಗಿಬಿಟ್ಟೆನೆ
ಎಂದು ಕುಳಿತಲ್ಲೇ ಕಂಪಿಸಿದೆ.
ಕನ್ನಡಿ ಎದುರು ಬಂದು ನಿಂತೆ
ಬಟ್ಟೆಗಳನ್ನು ಕಳಚಿ ಎಸೆದೆ.
ಕನ್ನಡಿಯೊಳಗೆ ನನ್ನಂತೆಯೆ ಒಬ್ಬನಿದ್ದ
ಮೈತುಂಬಾ ರೋಮಗಳು
ರಕ್ತ ಬೆವರಿನ ವಾಸನೆ
ಆ ಹುಡುಗಿ ಹೇಳಿದ್ದು ನಿಜವೇ ಇರಬೇಕು
ನಾನು ಮನುಷ್ಯನಂತಿಲ್ಲ
ಮೃಗದಂತೆ ಕಾಣಿಸುತ್ತಿದ್ದೇನೆ

ಕನ್ನಡಿಯಲ್ಲಿ ನನ್ನ ಬಿಂಬದ ಹಿಂದೆ
ಇಬ್ಬರು ಇಣುಕುತ್ತಿದ್ದಾರೆ
ನನ್ನನ್ನು ನೋಡಿ ನಗುತ್ತಾ
ಮುಖ ಮುಚ್ಚಿಕೊಳ್ಳುತ್ತಿದ್ದಾರೆ!
ಕಣ್ಣುಜ್ಜಿಕೊಂಡು ನೋಡಿದೆ, ಇದು ಕನಸಲ್ಲ
ಇಬ್ಬರೂ ನನ್ನ ತಂದೆಯ ಪ್ರಾಯದವರು
ಅವರಂತೆಯೆ ಬಿಳಿಯಾದ ಪಂಚೆ
ಮತ್ತು ಅರ್ಧ ತೋಳಿನ ಬಿಳಿ ಅಂಗಿ.
ಆ ಮುಖಗಳ ನೆನಪಾಗಿ ಬೆಚ್ಚಿ ಬಿದ್ದೆ.
ಅಯ್ಯೋ ಈ ಕನ್ನಡಿಯಲ್ಲಿ
ನನ್ನ ಹಿಂದಿರುವುದು ಹಾಜಬ್ಬ ಹಸನಬ್ಬ.
ಅಂದು ನನ್ನೂರ ನಡುಬೀದಿಯಲ್ಲಿ
ನಾನೇ ಅವರನ್ನು ಬೆತ್ತಲು ಮಾಡಿದ್ದೆ.
ಈಗ ನಾನು ಜಗತ್ತಿನ ಎದುರು
ಸಂಪೂರ್ಣ ನಗ್ನವಾಗಿ ನಿಂತಿದ್ದೇನೆ.
ಛೇ...
ತಂತ್ರಜ್ಞಾನ ಎಷ್ಟೊಂದು ಮುಂದುವರಿದಿದೆ!

● ಶಶಿಧರ ಹೆಮ್ಮಾಡಿ, ಕುಂದಾಪುರ

ತಪ್ಪಾಗಿದ್ದರೆ



ಜಾರ್ಜ್ ಸಿ. ಸ್ಕಾಟ್ ಎಂಬ ನಟ ಮೊನ್ನೆ ತೀರಿಕೊಂಡ. ಇವನಿಗೆ ಅಕಾಡೆಮಿ ಪ್ರಶಸ್ತಿ ತಂದುಕೊಟ್ಟ 'ಪ್ಯಾಟನ್' ಎಂಬ ಚಿತ್ರವನ್ನು ನಾನು ನೋಡಿರುವುದರಿಂದ ಇಲ್ಲಿ ಎರಡು ಮಾತು. ಜನರಲ್ ಪ್ಯಾಟನ್ ಬಗ್ಗೆ ಬಹಳ ಜನಕ್ಕೆ ಗೊತ್ತಿರಲಿಕ್ಕಿಲ್ಲ. ಎರಡನೆಯ ಮಹಾಯುದ್ಧದಲ್ಲಿ ತನ್ನ ಸಾಹಸ ಶೌರ್ಯ ತೋರಿದ ಸೇನಾನಿಗಳಲ್ಲಿ ಈತ ಒಬ್ಬ. ಇವನು ಧೈರ್ಯವಂತ. ಎಲ್ಲರಂತೆ ಮಳ್ಳಿಯಲ್ಲ. ಮಿಲಿಟರಿ ಸ್ಕೂಲಿನಲ್ಲಿ ಮ್ಯಾನರ್ಸ್ ಮಾತ್ರ ಕಲಿತ ವ್ಯಕ್ತಿಯಲ್ಲ. 'ಅಲ್ಲೋ ಸೂಳೆ ಮಗನೆ, ಹೇಗಿದ್ದೀ?' ಎಂದು ಕೇಳುವುದರಿಂದ, 'ನಾನು ಹೇಳಿದ ಕೆಲಸ ಮಾಡಿದೆಯೇನಯ್ಯ ಮಿಂಡ್ರಿ ಮಗನೆ?' ಎಂದು ಕೇಳುವ ಮನುಷ್ಯ. ಪ್ಯಾಟನ್ ದಿಟ್ಟನಾದವನು. ಎಲ್ಲರಿಗಿಂತ ಮುಂಚೆ ಬಾಂಬ್, ಗುಂಡುಗಳನ್ನು ಎದುರಿಸಿ ಹೋರಾಡುವವನು. ಜೊತೆಯ ಸೈನಿಕರ ಬಲಿಕೊಟ್ಟು ತನ್ನ ಬಿಡಾರದಲ್ಲಿ ಕೂತು ಸ್ಕಾಚ್ ಹೀರುವವನಲ್ಲ. ಅವನು ಅನೇಕರಿಗೆ ವಿಚಿತ್ರನಾಗಿ, ಅಶ್ಲೀಲವಾಗಿ, ಭಯಂಕರವಾಗಿ ಕಂಡಿದ್ದ. ಹೀಗಾಗಿ ಒಂದು ದಿನ ಅವನ ಸೈನಿಕರು ಅವನ ವಿರುದ್ಧ ಮುಷ್ಕರ ಹೂಡಿದರು; 'ಪ್ಯಾಟನ್ ತನ್ನ ವರ್ತನೆ, ಮಾತುಗಳನ್ನು ಸರಿಪಡಿಸಿಕೊಳ್ಳದಿದ್ದರೆ ನಾವು ಹೋರಾಡುವುದಿಲ್ಲ' ಎಂದು ಹೇಳಿದರು. ಇದು ಪ್ಯಾಟನ್‌ಗೆ ಗೊತ್ತಾಯಿತು. ತನ್ನ ವರ್ತನೆಯಲ್ಲಿ ತಪ್ಪಿದೆ ಎಂದು ಆತನಿಗೆ ಎಂದೂ ಅನ್ನಿಸಿರಲಿಲ್ಲ. ಹೊರಗೆ ಸೇರಿದ ನೂರಾರು ಜನ ಸೈನಿಕರನ್ನು ಉದ್ದೇಶಿಸಿ ತಾನು ಮಾತಾಡುವುದಾಗಿ, ಕ್ಷಮೆ ಕೇಳುವುದಾಗಿ ಹೇಳಿದ.

ಮೈಕ್, ಅಂಗರಕ್ಷಕರು ಸಿದ್ಧರಾದರು. ಸೈನಿಕರು ಕಾತರದಿಂದ ಪ್ಯಾಟನ್‌ನ ಕ್ಷಮೆಗಾಗಿ ಕಾದರು. ಪ್ಯಾಟನ್ ಬಂದು ಜನರ ಎದುರು ನಿಂತ. ತನ್ನ ಭಾಷಣ ಶುರುಮಾಡಿದ. 'ಅಲ್ಲೋ ಸೂಳೆಮಕ್ಕಳಾ, ಕ್ಷಮಿಸಿ. ನಾನು ನಿಮ್ಮನ್ನು ಅವಮಾನಿಸಬೇಕು ಅಂತ ಎಂದಾದರೂ ವರ್ತಿಸಿದ್ದೇನೇನಯ್ಯ, ನನ್ಮಕ್ಕಳಾ?' ಎಂದು ಹೇಳಿದ.



ಸೈನಿಕರು ನಗೆ ತಡೆಯಲಾರದೆ ನಕ್ಕು ಚಪ್ಪಾಳೆ ಹೊಡೆದರು.

ಜನರಲ್ ಪ್ಯಾಟನ್ ತಮ್ಮ ಅಣ್ಣನಂತೆ ಎನ್ನುವುದು ಅವರಿಗೆ ಗೊತ್ತಿತ್ತು.

● ಜೂನ್ 30, 1999

ಅಂಗಂತ ಎಲ್ಲೂ ಹೇಳಕ್ಕೆ ಹೋಗಬೇಡಿ ಸಾರ್


ಥೂತ್ತೇರಿ

▸ ಯಾಹೂ

ಸಿದ್ದು ಸದ್ದಿಲ್ಲದೆ ನೂರು ದಿನ ಬಾರಿಸಿದ್ದಲ್ಲದೆ ಆ ಅವಧಿಯಲ್ಲಿ ಮಾಡಿದ್ದ ಮಾಡದೇಯಿದ್ದ ಕೆಲಸಗಳನ್ನೆಲ್ಲಾ ಸೇರಿಸಿ ನೂರು ದಿನ ನೂರಾರು ನಿರ್ಣಯಗಳ ಅವರ್ಣನೀಯ ಸಾಧನೆಗಳ ಪಟ್ಟಿ ಬಿಡುಗಡೆ ಮಾಡಿದರಂತಲ್ಲಾ, ಅದನ್ನ ನೋಡಿ ಬೆಚ್ಚಿಬಿದ್ದ ಚೆಡ್ಡಿಗಳು ಚೆಡ್ಡಿಯನ್ನು ಒದ್ದೆ ಮಾಡಿಕೊಂಡು ಕೇಶವಕೃಪಕ್ಕೆ ಓಡಿದವಂತಲ್ಲಾ. ಅಲ್ಲಿ ವಿರಾಜಮಾನವಾಗಿದ್ದ ಮನುವಾದಿಗಳನ್ನು "ಈ ಸಿದ್ದಪ್ಪನ ನೂರು ದಿನದ ಸಾಧನೆ ನೋಡಿ ನಾವು ಸುಮ್ಮನಿದ್ದರೆ ಮುಂದೆ ನಮಗೆಂದೂ ಗದ್ದುಗೆ ಸಿಗುವುದಿಲ್ಲ, ಇದಕ್ಕೆ ಸರಿಯಾದ ಗುದ್ದು ಕೊಡಲೇಬೇಕು'' ಎಂದು ಬೇಡಿಕೊಂಡವಂತಲ್ಲಾ. ಆಗ ಭಟ್ಟ, ಶರ್ಮ, ಶೆಟ್ಟಿ ಎಂಬಿತ್ಯಾದಿ ನಾಮಾಂಕಿತ ಹಳೆ ಚೆಡ್ಡಿಗಳು, ಉಡುಪಿಯಿಂದ ಪಾರ್ಸೆಲ್ ಬಂದ ಚಕ್ಕುಲಿ ಕುರುಕುವುದನ್ನು ನಿಲ್ಲಿಸಿ "ಹೆದರುವ ಅಗತ್ಯವಿಲ್ಲ, ಸಿದ್ದು ನೂರುದಿನದ ಸಾಧನೆ ನೂರು ದಿನದ ಸುಳ್ಳು ಎಂಬ ಸುದ್ದಿ ಹಬ್ಬಿಸಿದರಾಯ್ತು" ಎಂದು ಮುಂದಿದ್ದ ಇಸ್ತ್ರಿ ಎಲೆಗೆ ಮತ್ತೆ ಚಕ್ಕುಲಿ ಸುರಿದುಕೊಂಡವಂತಲ್ಲಾ. ಆಗ ಅಲ್ಲೇ ಇದ್ದ ಕಾಗೇರಿ ಎಂಬ ಕಾಗೆಜಾತಿಯ ಕೆಂಭೂತ, "ಆ ನೂರು ಸುಳ್ಳನ್ನು ಲಕ್ಷಾಂತರ ಪ್ರತಿಯಲ್ಲಿ ಪ್ರಿಂಟಾಕಿಸುವಷ್ಟು ಪೇಪರ್ ನನ್ನಲ್ಲಿದೆ" ಎಂದು ಮುಂದೆ ನುಗ್ಗಿದನಂತಲ್ಲಾ, ಕೂಡಲೇ ಹಲ್ಲುಬೀರನೊಬ್ಬ "ರೀ ಕಾಗೇರಿ, ನಿಮ್ಮ ಹಳೆ ಪೇಪರ್ ವಿಷಯ ಹಾಗಿರಲಿ. ನೂರು ಸುಳ್ಳನ್ನು ಕೂಡಲೇ ತಯಾರು ಮಾಡಬೇಕು. ಆ ಬಗ್ಗೆ ಯೋಚಿಸಿ" ಎಂದನಂತಲ್ಲಾ. ಆಗ ಕೋಡುಬಳೆ ಆಕಾರದ ಚಕ್ಕುಲಿಯನ್ನು ಬಾಯಿಗೆ ಹಾಕಿಕೊಂಡ ಭಟ್ಟರು "ಮಿಸ್ಟರ್ ಕುಮಾರ್, ನಮ್ಮ ಜನಕ್ಕೆ ನೂರು ಸುಳ್ಳು ಸೃಷ್ಟಿ ಒಂದು ಸಮಸ್ಯೆಯೇ ಅಲ್ಲ. ನಾವು ಬಾಯಿಬಿಟ್ಟರೆ ಸುಳ್ಳು. ಈ ಕ್ಷಣ ನಾವು ಸಾವಿರ ಸುಳ್ಳನ್ನು ಸೃಷ್ಟಿಸಬಲ್ಲೆವು. ಎಲ್ಲಿ ನಿಮ್ಮ ಕಡೆಯಿಂದ ಎರಡು ಸುಳ್ಳು ಎಸೆಯಿರಿ" ಎಂದನಂತಲ್ಲಾ. "ಅದಕ್ಕೆ ಹಲ್ಲುಬೀರ "ಸುಳ್ಳು ಹೇಳಲು ಬಾರದ ಸಿದ್ದು ಒಬ್ಬ ಮುಖ್ಯಮಂತ್ರಿಯೇ ಅಲ್ಲ" ಎಂದನಂತಲ್ಲಾ. ಥೂತ್ತೇರಿ!

* * *

ಸಿದ್ದು ವಿರುದ್ಧ ನೂರು ಸುಳ್ಳು ಹೊಸೆಯಲು ತಯಾರಾಗಿ ತಿಥಿ ಊಟಕ್ಕೆ ಕುಳಿತವರಂತೆ ಕುಳಿತಿದ್ದ ಚೆಡ್ಡಿಗಳ ಪೈಕಿ ರಾಷ್ಟ್ರೋತ್ಥಾನ ಸಾಹಿತ್ಯ ಪ್ರಸಾರದ ಜವಾಬ್ದಾರಿ ಹೊತ್ತಿದ್ದ ಶೆಟ್ಟಿಯೊಬ್ಬ ಗಾಢವಾಗಿ ಚಿಂತಿಸಿ, ಎಚ್ಚೆತ್ತವನಂತೆ, "ಹೀಗೆ ಮಾಡಿದರೆ ಹೇಗೆ? ಸಿದ್ದು ನೂರು ದಿನದ ಸಾಧನೆಗೆ, ನಮ್ಮ ಸರಕಾರ ಬಂದ ಹೊಸದರಲ್ಲಿ ತೆಗೆದುಕೊಂಡ ನಿರ್ಣಯಗಳನ್ನ ಬಿಡುಗಡೆ ಮಾಡಿದರೆ ಹೇಗೆ'' ಎಂದನಂತಲ್ಲಾ. ಆಗ ಅಲ್ಲೇ ಇದ್ದ ಯಡ್ಡಿ ವಿರೋಧಿ ಚೆಡ್ಡಿಯೊಂದು "ಮಿಸ್ಟರ್ ಶೆಟ್ಟರೆ, ನಮ್ಮ ನೂರು ದಿನಗಳ ಸಾಧನೆ ನಾವೆಲ್ಲೂ ಬಾಯಿ ಬಿಡದಂತಿದೆ. ಮೊದಲನೆಯದಾಗಿ ಎಡೂರಪ್ಪ ದಿಲ್ಲಿ ನಾಯಕರಿಗೆ ಹಣ ತೆಗೆದುಕೊಂಡು ಹೋದರು. ಅದೂ ರೆಡ್ಡಿಗಳಿಂದ. ನಂತರ ಬಂದವರೇ ಗೋಕರ್ಣ ಮಠವನ್ನು ರಾಮಚಂದ್ರಾಪುರದ ಮಠಕ್ಕೆ ವಹಿಸಿ, ಅಮೃತ್ ಮಹಲ್ ಕಾವಲನ್ನು ಗೋವುಗಳ ಸಮೇತ ರಾಘವೇಶ್ವರನ ಸುಪರ್ದಿಗೆ ವಹಿಸಿದರು. ಈ ಕೆಲಸ ನಡೆಯುತ್ತಿದ್ದಾಗಲೇ ಎಲ್ಲಾ ಜಿಲ್ಲೆಯಲ್ಲೂ ಬಿಜೆಪಿ ಆಫೀಸು ಮತ್ತು ಕೇಶವಕೃಪಾ ಕಟ್ಟಲು ನೀವು ಎಲ್ಲಿಂದಲಾದರೂ ಹೇಗಾದರೂ ಮಾಡಿ ದುಡ್ಡು ಒದಗಿಸಿಕೊಳ್ಳಿ ಎಂದರು. ಆಗ ಏಕಕಾಲದಲ್ಲಿ ಅಕ್ರಮವಾದ ಡಿನೋಟಿಫಿಕೇಶನ್ ಆರಂಭವಾದವು. ಶಿವಮೊಗ್ಗದಲ್ಲಿ ಒಂದೇ ವಾರದಲ್ಲಿ ಎಡೂರಪ್ಪನ ಕಾಲೇಜು, ಹಾಸ್ಟೆಲು, ಹೋಟೆಲು ಹಾಗು ಆತನ ಮಗನ ಮನೆಯ ಗುದ್ದಲಿ ಪೂಜೆ ನಡೆದವು.



ಆಗಲೇ ನಮ್ಮ ಉಡುಪಿ ಭಟ್ಟರ ಹೆಂಡತಿ ಗಂಡನಿಂದ ತಪ್ಪಿಸಿಕೊಂಡು ಓಡಿಹೋಗಿ ದೆಹಲಿಯಲ್ಲಿ ಆತ್ಮಹತ್ಯೆ ಮಾಡಿಕೊಂಡಳು. ಎಣಿಸಿದರೆ ನೂರು ದಿನವೂ ನಮ್ಮ ಪಾರ್ಟಿಯ ಹಗರಣಗಳು ದಾಖಲಾಗುತ್ತದೆ. ಆದ್ದರಿಂದ ಬೇರೆ ಸುಳ್ಳುಗಳನ್ನ ಸೃಷ್ಟಿ ಮಾಡಿ" ಎಂದನಂತಲ್ಲಾ ಥೂತ್ತೇರಿ!!

* * *

ಬಹಳ ದಿನಗಳ ನಂತರ ಕುಮಾರಣ್ಣನನ್ನು ಮಾತನಾಡಿಸಬೇಕೆನಿಸಿತಲ್ಲಾ, ಏಕೆಂದರೆ ಮಂಡ್ಯ ರಾಮನಗರದಲ್ಲಿ ಬಿದ್ದ ಏಟಿನಿಂದ ಚೇತರಿಸಿಕೊ "ಮತದಾರರ ತೀರ್ಪಿಗೆ ಬದ್ಧ" ಎಂಬ ಮಾತನ್ನು ಮನಸ್ಸಿನಿಂದ ಒಪ್ಪಿಕೊಂಡು ಈಗಾಗಲೇ ಮಲೆನಾ ಸಂಚರಿಸುತ್ತಿರುವ ಕುಮಾರಣ್ಣ ನಿಜಕ್ಕೂ ಜನಸ ಅನ್ನಿಸಿತು. ಫೋನ್ ಮಾಡಿದರೆ, ರಿಂಗಾಯ್ತು,

ರಿಂಗ್‌ಟೋನ್ : "ಇದು ಯಾರು ಬರೆದ ಕಥ ನನಗಾಗಿ ಬಂದ ವ್ಯಥೆಯೋ...."

"ಹಲೋ ಯಾರ್ರಿ?"

"ನಾನು ಸಾರ್ ಯಾಹು."

"ಎಲ್ರಿ ಯಾಹು, ಕಾಣ್ತಾನೆಯಿಲ್ಲ ಈಚೆಗೆ."

"ನಾನು ಕಾಣ್ತಾಯಿಲ್ಲ ಸರಿ. ಆದ್ರೆ ನೀವು ಕಾಣ್ತಾನೆಯಿದ್ದಿರಿ."

"ಎಲ್ಲಿ ಕಾಣ್ತಾಯಿದ್ದೀನಿ?"

"ಕಸ್ತೂರಿ ಟಿ.ವಿ.ಲಿ ದಿನ ನೋಡ್ತೀನಿ ಸಾರ್."

"ಆದಿರ್ಲಿ, ಫೋನ್ ಮಾಡಿದ್ದು ಯಾಕೆ ಹೇ

"ಎಲ್ಲಿದ್ದೀರಿ ಸಾರ್?"

"ಶಿವಮೊಗ್ಗದಲ್ಲಿದ್ದಿನಿ."

"ಅಲ್ಲಿಗ್ಯಾಕೋದ್ರಿ ಸಾರ್?"

"ಇಲ್ಲಿ ವಿಪರೀತ ಮಳೆ ಬಂದು, ಕೆಸ ಚರಂಡಿಗಳೆಲ್ಲಾ ಬಿದ್ದೋಗಿ, ಅಡಕೆ ಮರಗಳು ಸರಿ ಕಾಯಿ ಬಿಡ್ತಾಯಿಲ್ಲ, ಬಿಟ್ರೂ ಅವೆಲ್ಲಾ ಬಿದ್ದು ನೀರಲ್ಲಿ ತುಂಗಾನದಿ ಸೇರಿ ದೊಡ್ಡ ಅನಾವೃತನೆ ನ ಆಂದ್ರು. ನೋಡನ ಅಂತ ಬಂದೆ."

"ನೋಡಿ ಸಾರ್, ಆದ್ರೆ ನಿಮ್ಮ ಶಿವಮೊಗ್ಗದ ಕ್ಯಾಂ ಪಾರ್ಟಿ ಜನ ಸರಿಯಾಗಿ ಕೈಕೊಟ್ರು."

"ಅದೆಲ್ಲ ಕಾಂಗ್ರೆಸ್ಸಿನೋರ ಕೈವಾಡ ಕಂಡ್ರಿ."

"ಸಾರ್, ಕಾಂಗ್ರೆಸ್ಸಿನೋರ ಕೈವಾಡ ಇದ್ರೆ ಕು ಓಟು ಕಾಂಗ್ರೆಸ್ಸಿಗೆ ಹೋಗಬೇಕಾಗಿತ್ತು. ಆದ್ರೆ ಬಿ ಹೋದವಲ್ಲ ಹೇಳಿ."

"ಈಶ್ವರಪ್ಪನೂ ಕುರುಬರೋನು ಅಂತ ಹಾಕಿರು ಕಂಡ್ರಿ."

ಹೊಗಳಿಕೆ ತೆಗಳಿಕೆ

ಆಸಾರಾಮ್ ಎಂಬ ನೀಚ

ಪತ್ರಿಕೆಯಲ್ಲಿ ಬರೆದಂತೆ ಐಷಾರಾಮ ಡಾಕು, ಕ್ಷಮಿಸಿ ಆಸಾರಾಮ ರೇಪು, ಕ್ಷಮಿಸಿ ಆಶಾರಮ್ ಬಾಪು ಗುಜರಾತ್ ಮೂಲದವನಲ್ಲ. ಇವನು ಮೂಲತಃ ದೇಶ ವಿಭಜನೆಯ ಕಾಲದಲ್ಲಿ ಪಾಕಿಸ್ತಾನದಿಂದ ನಿರ್ವಸಿತನಾಗಿ ವಲಸೆ ಬಂದ ಸಿಂಧಿ ಕುಟುಂಬದವನು. 1947-48 ರಲ್ಲಿ ಪಾಕಿಸ್ತಾನದಿಂದ ಓಡಿಬಂದ ಎರಡು ಲಕ್ಷ ಸಿಂಧಿಗಳಿಗೆ ಮುಂಬೈ ಹತ್ತಿರದ ಉಲ್ಲಾಸ ನಗರ ಎಂಬಲ್ಲಿ ಬ್ರಿಟಿಷರು ಬಿಟ್ಟುಹೋಗಿದ್ದ ಮಿಲಿಟರಿ ಕಾಲೋನಿಗಳಲ್ಲಿ ಪುನರ್ವಸತಿ ಕಲ್ಪಿಸಲಾಯಿತು. ಈ ಆಸಾರಾಮ್ ಆಗ ಹುಡುಗನಾಗಿದ್ದ. ನಂತರ ಅವನು ದೊಡ್ಡವನಾದ ಮೇಲೆ ಗುಜರಾತಿನ ಅಹ್ಮದಾಬಾದಿಗೆ ವಲಸೆ ಹೋಗಿ ಅಲ್ಲಿ ಆಶ್ರಮ ಸ್ಥಾಪಿಸಿ ದೇವರು-ಧರ್ಮದ 'ವ್ಯಾಪಾರ' ಶುರು ಮಾಡಿದ. ಹಾಗಾಗಿ ಇಂದಿಗೂ ಇವನ ಅನುಯಾಯಿಗಳಲ್ಲಿ ಸಿಂಧಿಗಳೇ ಹೆಚ್ಚು. ಪಾಕಿಸ್ತಾನದ ಗಡಿಗೆ ತಾಗಿರುವ ಗುಜರಾತ್ ರಾಜ್ಯದ ಕಛ್ ಪ್ರದೇಶದಲ್ಲಿಯೂ ದೊಡ್ಡ ಸಂಖ್ಯೆಯಲ್ಲಿ ನೆರೆಯ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಿಂದ ವಲಸೆ ಬಂದ ಸಿಂಧಿಗಳು ನೆಲೆ ನಿಂತಿದ್ದಾರೆ. ಹಾಗಾಗಿ ಕಛ್‌ನಲ್ಲಿಯೂ ಈ ರೇಪು-ಬಾಪುಗೆ ತುಂಬಾ ಗೋಪುಗಳಿದ್ದಾರೆ. ಬಿಜೆಪಿಯ ಅಧ್ವಾನಿ ಸಹಾ ಸಿಂಧಿಯಾಗಿರುವುದರಿಂದ ಅವರು ಸಹ ಈ ಬಾಪೂವಿನ ಭಕ್ತರಂತೆ.

ಒಬ್ಬ ಅಪ್ರಾಪ್ತ ವಯಸ್ಸಿನ ಹುಡುಗಿಯ ಭಯಂಕರ ವಿರೋಧದ ನಡುವೆಯೂ ಅವಳನ್ನು ಬಲಾತ್ಕರಿಸಿದ ಈ ಮೃಗರಾಮ್ ಬಾಪು ಇನ್ನು ಸ್ವಯಿಚ್ಛೆಯಿಂದ ಬರುವ ನೂರಾರು ಸಿಂಧಿ ಮಹಿಳಾ ಭಕ್ತರೊಂದಿಗೆ ಹೇಗೆ ನಡೆದುಕೊಂಡಿರಬಹುದು ಊಹಿಸಿ.

- ವೀರಪ್ಪ ಡಿ. ಎನ್, ಮಡಿಕೇರಿ

ಚೂಡಿರಾಮನಿಗೆ 'ಹೆಣ್ ಫೋಬಿಯಾ' ಕಾಯಿಲೆಯಂತೆ

ನಿಜವಾದ ಸಂತರೆಂದರೆ ರೈತಾಪಿಗಳು ಮತ್ತು ಜನಸಾಮಾನ್ಯರೇ ಹೊರತು ಬಾಹ್ಯ ಬದುಕಲ್ಲಿ ಸರಳ ಖಾವಿ ತೊಟ್ಟು ವೈಯಕ್ತಿಕ ಬದುಕಲ್ಲಿ ಐಷಾರಾಮೀ ಬದುಕು ಸಾಗಿಸುವ, ವಿದೇಶೀ ಕಾರುಗಳಲ್ಲಿ ಅಲೆಯುವ ಧರ್ಮಗುರುಗಳಲ್ಲ. ಕಷ್ಟಸುಖಗಳನ್ನು ಅನುಭವಿಸುತ್ತಾ ಇತರರ ಅನ್ನದ ಮೂಲವಾಗಿ ಅದರಲ್ಲೇ ಸಾರ್ಥಕ ಬದುಕನ್ನು ಕಾಣುವ ರೈತಾಪಿಗಳೆಲ್ಲಿ? ಹವಾನಿಯಂತ್ರಿತ ಜಾಗಗಳನ್ನೇ ಬಯಸುವ ಈ ಢೋಂಗೇಶಗಳೆಲ್ಲಿ? ಯಾರದೋ ಬೆವರಿನ ಅನ್ನ ಉಣ್ಣುತ್ತಾ ಸುಖಪುರುಷರಾಗಿ ಬದುಕುವ ಇಂತಹ ವೇಸ್ಟ್ ಬಾಡಿಗಳಿಂದ ಜನರಿಗೆ



ಜೀವನ ಕಲೆಯ ಬಗ್ಗೆ ಉಪದೇಶ ಬೇರೆ.

ಅತ್ಯಾಚಾರಕ್ಕೀಡಾಗುವ ಸಂದರ್ಭ ಬಂದಾಗ ಮಂತ್ರ ಹೇಳದಿದ್ದರೆ, ಅಣ್ಣಾ ಎನ್ನದಿದ್ದರೆ ಅದು ಹೆಣ್ಣಿನದೇ ತಪ್ಪು ಎನ್ನುವ, ಮನಸ್ಸಿನ ಹತೋಟಿಯ ಬಗ್ಗೆ ಗಂಟೆಗಟ್ಟಲೆ ಪ್ರವಚನ ಹೊಡೆಯುವ, ತಾವು ಮಾತ್ರ ಅಪ್ರಾಪ್ತ ಹೆಣ್ಣನ್ನೂ ಬಿಡದ ಆಸಾರಾಮನಂತಹವರೆಲ್ಲ ಸಂತರುಗಳು ಎಂದು ಕರೆಸಿಕೊಳ್ಳುತ್ತಾರಲ್ಲ ಆಶ್ಚರ್ಯ..! ಗಂಡಸಿನ ಈ ದೌರ್ಬಲ್ಯಕ್ಕೆ ಗಂಡಸನ್ನೇ ದೂರುವ ಬದಲು ಮಹಿಳೆಯರನ್ನೇ ದೂರುವ ರಾಮದೇವನೆಂಬ ಲೇಡಿ ಉತ್ತರ ಕುಮಾರ (ಪೊಲೀಸರು ಬಂದಾಗ ಚೂಡಿ ಧರಿಸಿ ಪರಾರಿಯಾಗಿದ್ದ ಮಹಾನುಭಾವ) ತಾಯಿ, ಅಕ್ಕ, ತಂಗಿ ಅಥವಾ ಮಗಳೇ ಆದರೂ ಈ ಹೆಣ್ಣೆಂಬ ಮಾಯೆಯನ್ನು ದೂರವಿಡುವುದೇ ಲೇಸು ಎಂದಿದ್ದಾನೆ. ಒಟ್ಟಾರೆ ಎಲ್ಲಕ್ಕೂ ಹೆಣ್ಣೇ ಹೊಣೆ ಎಂಬಂತಹ ಇವರ ಮಾತಿಗೆ ಉಗಿಯುವವರು ಯಾರೂ ಇಲ್ಲವೇ?

ಅಲ್ಲಾ ಮಾರಾಯ ಚೂಡಿರಾಮ, ಈ ಅಕ್ಕ ತಂಗಿ ಮಗಳನ್ನೆಲ್ಲ ದೂರವಿಟ್ಟರೆ ಪೊಲೀಸರು ಬಂದಾಗ ಓಡಿಹೋಗಲು ಚೂಡಿದಾರಕ್ಕೆ ಯಾರನ್ನು ಕೇಳುವುದು?

-ಶಶಿ ಪುತ್ತೂರು, ದ.ಕ

ಗಣಪತಿ ಹಾಗು ವೈದಿಕರ ದೇವ ಮತಾಂತರ

ಯೋಗೇಶ್ ಮಾಸ್ಟರ್ ಎನ್ನುವವರು ಬರೆದ 'ಢುಂಢಿ-ಅರಣ್ಯಕನೊಬ್ಬ ಗಣಪತಿಯಾದ ಕಥೆ' ಇತ್ತೀಚೆಗೆ ಭಾರೀ ರಾದ್ಧಾಂತವನ್ನು ಹುಟ್ಟುಹಾಕುತ್ತಿದೆ. ಕೃತಿ ಹೇಗೇ ಇರಲಿ. ಇದರ ಲೇಖಕರ ಏಕಾಏಕಿ ಬಂಧನ ಹಾಗೂ ಪುಸ್ತಕ ಮಾರಾಟದ ಮೇಲಿನ ತಡೆ ಮಾತ್ರ ನಿಜಕ್ಕೂ ವಿಷಾದಕರ.

ಯೋಗೇಶ್ ಮಾಸ್ಟರ್ ಬರೆದರೆನ್ನಲಾದ ಗಣಪತಿ ಅನಾರ್ಯ ಕುಲದವನೆಂಬ ಸಂಗತಿ ಹೊಸತೇನಲ್ಲ. ಇದನ್ನು ಬಹಳಷ್ಟು ಹಿಂದೆಯೇ ದೇವಿಪ್ರಸಾದ್ ಚಟ್ಟೋಪಾಧ್ಯಾಯರು ತಮ್ಮ ಬರಹಗಳಲ್ಲಿ ನಿರೂಪಿಸಿದ್ದಾರೆ. 25-30 ವರ್ಷಗಳ ಹಿಂದೆ 'ಕಸ್ತೂರಿ' ಮಾಸ ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟವಾಗಿತ್ತು. ಹಿರಿಯ ಚಿಂತಕರಾಗಿದ್ದ ಗೌರೀಶ್ ಕಾಯ್ಕಿಣಿಯವರು ಬರೆದಿದ್ದ 'ಗಣಪತಿ ಗಜಮುಖನಾಗಿಯೇ ಹುಟ್ಟಿದನೇ?' ಎಂಬುದು ಅದರ ಶೀರ್ಷಿಕೆ. ಹಿಂದೂ ಪುರಾಣಗಳನ್ನಾಧರಿಸಿ ಅದರಲ್ಲಿ ಉಲ್ಲೇಖಿಸಿರುವ ಗಣಪತಿ ಹುಟ್ಟಿನ ಕುರಿತಾದ 10-12 ತರಹೇವಾರಿ ಕಥೆಗಳನ್ನು ಓದಿದರೆ ಚಾಲ್ತಿಯಲ್ಲಿರುವ ಪಾರ್ವತಿ ತಯಾರಿಸಿ ಶಿವನಿಂದ ತಲೆಹಾರಿಸಿಕೊಂಡ ಪ್ರಸಿದ್ಧ ಕಥೆಯೇ ಗೌಣವಾಗಿ ತೋರುತ್ತದೆ. ಕೆಲ ಕಥೆಯಲ್ಲಿ ಆತ ಹುಟ್ಟುವಾಗಲೇ ಗಜಮುಖನಾಗಿದ್ದ ಎಂದರೆ ಕೆಲ ಕಥೆಯಲ್ಲಿ ಶಿವನಿಗೂ ನೇರಸಂಬಂಧವಿದ್ದಂತೆ ಉಲ್ಲೇಖವಿದೆಯಲ್ಲದೇ ಶಿವ ಪಾರ್ವತಿಯರಿಗೆ ಹೊರತಾದ ಕಥೆಯೂ ಕೂಡ ಗಣಪತಿ ಹುಟ್ಟಿನ ಕುರಿತು ಚಾಲ್ತಿಯಲ್ಲಿವೆ. ಅದೇ ರೀತಿ ಗಣಪತಿ ಏಕದಂತನಾದ ಕಥೆಯಲ್ಲೂ ಕೂಡ ವಿಭಿನ್ನತೆ ಇದೆ. ತಮಾಷೆ ಮಾಡಿದ ಚಂದ್ರನಿಗೆ ಹೊಡೆಯಲು ಏಕದಂತನಾದ ಎಂಬುದು ಪ್ರಸಿದ್ಧ ಕಥೆಯಾದರೆ ಬ್ರಹ್ಮ ವೈವರ್ತ ಪುರಾಣದಲ್ಲಿ ಇದು ಬ್ರಾಹ್ಮಣ ನಾಯಕ ಪರಶುರಾಮನ ಜೊತೆಗಿನ ಯುದ್ಧದಲ್ಲಿ ಮುರಿದದ್ದು ಎನ್ನಲಾಗಿದೆ. ಈ ಕಥೆ ಐತಿಹಾಸಿಕವಾಗಿ ನಡೆದಿದ್ದ ಯಾವುದೋ ಸಂಘರ್ಷವನ್ನೇ ಸೂಚಿಸುತ್ತದಲ್ಲವೆ?

ಹಿಂದೆ ದೊಡ್ಡ ದೊಡ್ಡ ಸಾಂಕ್ರಾಮಿಕ ರೋಗಗಳು ಕಾಣಿಸಿಕೊಂಡಾಗ ಜನ ಹೆದರಿ ಮಾಡುವ ಮಾರಿಪೂಜೆ, ಮಾರಿಬಲಿ ಮೊದಲಾದವುಗಳೆಲ್ಲ ಭಕ್ತಿಗಿಂತ ಭಯದ ಹಿನ್ನೆಲೆಯಿಂದಲೇ ಹುಟ್ಟಿಕೊಂಡಂತವುಗಳು. ಆಂಧ್ರದಲ್ಲೆಲ್ಲೋ ಈಗ ಏಡ್ಸ್ ಅಮ್ಮನೂ ಸೃಷ್ಟಿಯಾಗಿದ್ದಾಳಂತೆ. ಯಜ್ಞ ಯಾಗಾದಿ ಪೂಜೆ ಮೊದಲಾದ ಶುಭ ಕಾರ್ಯಗಳಿಗೆಲ್ಲ ಯಾವುದೇ ವಿಘ್ನ ಒಡ್ಡದಿರೆಂದು ಕಾರ್ಯದ ಆರಂ ವಿಘ್ನೇಶನ ವಿನುತಿ ಪೂಜೆ ಇದೇ ಭಾವದ ಹಿನ್ನೆಲೆಯಿ ಹುಟ್ಟಿಕೊಂಡಿದ್ದು. ಗಣಪತಿಯನ್ನು ವಿಘ್ನವನ ಮಾಡಲೆಂದೇ ಬ್ರಹ್ಮ ರುದ್ರರು ಸೃಷ್ಟಿಸಿದ ಯಾಜ್ಞವಲ್ಕ್ಯನೇ ಉಲ್ಲೇಖಿಸಿದ್ದಾನೆ.

ಅನಾರ್ಯ ಬುಡಕಟ್ಟು ಜನಾಂಗದ ಅಥವಾ ತಾ ಗಣಪತಿ ಆರ್ಯರ ಪಾಲಾದ ಕಥೆಯಲ್ಲಿ ವಿಶೇಷವ ಅನುಕೂಲದ ಲಾಭಕ್ಕಾಗಿಯೋ, ಪ್ರಸಿದ್ಧವಾ ಕಾರಣಕ್ಕೋ ಅಥವಾ ಮತ್ತ್ಯಾವುದೋ ಕಾರಣಕ್ಕೋ ದೇವರನ್ನು ತಮ್ಮವರನ್ನಾಗಿಸಿಕೊಳ್ಳುವ ಪ್ರಕ್ರಿಯೆ ಹೊಸ ಇದೀಗ ಅತ್ಯಂತ ಪವರ್‌ಫುಲ್ ದೇವರ ಬಿಂಬಿತವಾಗಿರುವುದು ನಾಗ. ಸರ್ಪದ ಹೆಸರಲ್ಲಿ ಸಿಗು ಕಮಾಯಿ ಯಾವುದರಲ್ಲೂ ಇಲ್ಲ ಎಂಬಂತಾಗಿದೆ. ಕ ಸರ್ಪಸಂಸ್ಕಾರವಿರಲಿ, ಉಡುಪಿಯ ನಾಗಮಂಡಲ ಈ ಎಲ್ಲಿ ನಾಗಾರಾಧನೆ ಮೂಲತಃ ಇಲ್ಲಿನ ವರ್ಗದ ಆಚರಣೆಗಳೇ ಹೊರತು ಇ ಬದಲಾಗಿರುವಂತೆ ಬ್ರಾಹ್ಮಣರದ್ದಲ್ಲ.

ಉಡುಪಿ ಜಿಲ್ಲೆಯಲ್ಲಿ ದಲಿತರು ಪು ಕಾಲದಿಂದಲೂ ಆಚರಿಸಿಕೊಂಡು ಬರುತ್ತಿರುವ 'ಕಾ ಎನ್ನುವ ಸಂಪ್ರದಾಯವೇ ನಾಗಮಂಡಲಕ್ಕೆ ಎನ್ನುವುದು ಜನಪದ ವಿದ್ವಾಂಸರ ಅಭಿಪ್ರಾಯ. ಹಾ

ಅದಕ್ಕೆ ಕಾರಣಾ ನೀವೆ ಅಂತ ಸಾರ್. ಎಡೂರಪ್ಪನ
ಕೇಟ್ ಸೋಲಬೇಕಾದ್ರೆ ಈಶ್ವರಪ್ಪನ ಕೈಹಿಡಿರಿ ಅಂತ
ಜ್ ಬಂತಂತೆ. ಅದ್ಕೆ ನಿಮ್ಮ ಪಾರ್ಟಿ ಜನ ನಿಮ್ಮ
ಕೇಟಿಗೇ ಕೈಕೊಟ್ರು."
ಅದ್ಕಲ್ಲಿ ಮುಗಿದ ಕತೆ ಕಂಡ್ರಿ."
ಮುಗಿದ ಕತೆ ಸರಿ ಸಾರ್. ನಿಮ್ಮ ಶಿವಮೊಗ್ಗದ
ಕೇಟು ಬಂಗಾರಪ್ಪನ ಸಾವು ತಿಥಿಗೆಲ್ಲಾ ಖರ್ಚು
ದ್ದ್ರಿ. ರೈತ ಸಮಾವೇಶ ಮಾಡಿದ್ರಿ. ಅಂಗನವಾಡಿ,
, ಅದಿಗೆ ಭಟ್ರು, ಆಟೋದವ್ರುರು ಹಿಂಗೆ ಆತನ
ವರ್ಷದ ಹುಟ್ಟಿ ಕನಿಷ್ಠ ಇಪ್ಪತ್ತು ಕೋಟಿ ಆಗತ್ತೆ.
ಶ್ರಿನ್ನ ಮುಗಿಸಿ ಪುನಃ ಶಿವಮೊಗ್ಗದ ಕಡೆ ಹೋಗಿದ್ದಿರಲ್ಲಾ
ನಟ್ಟಿದೋರ ಕತೆಯೇನು ಸಾರ್. ಆ ಸಿದ್ದರಾಮಯ್ಯನ
ಗೆ ಈಗ ಅರ್ಥ ಹೋಳೀತಾ ಅದೆ."
ಆ ಸಿದ್ದರಾಮಯ್ಯನ ಮಾತ ನಂಬಕ್ಕೋಗಬೇಡಿ ಕಂಡ್ರಿ.
ದೇವೇಗೌಡ್ರನ್ನ ಮುಖ್ಯಮಂತ್ರಿ ಮಾಡಿದೆ ಅಂತ
ತರೆ."
ಸಿದ್ದರಾಮಯ್ಯ ಹೇಳದು ಸುಳ್ಳು ಸಾರ್. ಆ ದಿನ
ರಾಮನಗರದ ಕಡೆಯಿಂದ ಲಕ್ಷಾಂತರ ಜನಗಳನ್ನ
ವಿಧಾನಸೌಧಕ್ಕೆ ಮುತ್ತಿಗೆ ಹಾಕಿಸಿ, ಸಿದ್ದರಾಮಯ್ಯನ
ಊರಿಂದ ಹೆಗಡೆಗೆ ಮೆಟ್ಟಿನಲ್ಲಿ ಹೊಡಸದೆಯಿದ್ರೆ
ಗೌಡ್ರು ಮುಖ್ಯಮಂತ್ರಿ ಆಗದು ಕಷ್ಟ ಇತ್ತು."
ಹೌದು ಕಂಡ್ರಿ. ಅದನ್ನೇ ನಾನು ಸದನದಲ್ಲಿ ಹೇಳಿದ್ದು."
ನೀವಾದದ್ದು ಇನ್ನೂ ಚನ್ನಾಗಿದೆ ಸಾರ್. ರೆಡ್ಡಿಗಳತ್ರ
ಂಡ ದುಡ್ಡಲ್ಲಿ ಎಮ್ಮೆಲ್ಲೆಗಳನ್ನೆಲ್ಲಾ ರೆಸಾರ್ಟಿಗೆ
ಹೋಗಿ, ಆ ಬಿಜೆಪಿಗಳ ಬುಟ್ಟಿಗಾಯ್ಕಂಡು, ಓಲವ್ರೊ
ತಂದು ವಿಧಾನಸೌಧದ ಮುಂದೆ ಸುರುದು,
ಣವಚನ ತಗಂಡದ್ದು ನಿಜಕ್ಕೂ ಸಾಹಸ,
ರೋಮಾಂಚನ, ಐತಿಹಾಸಿಕ ಘಟನೆ ಸಾರ್."
ಹೌದು ಕಂಡ್ರಿ. ನಾನಿವತ್ತು ನೆನೆಸಿಕೊಂಡ್ರೂ ಆ
ಷದ ಕ್ಷಣ ಪುನಃ ಬರಬಾರ್ದೆ ಅನ್ನಸ್ತದೆ."
ಅದನ್ನ ಎಲ್ಲೂ ಹೇಳಕ್ಕೆ ಹೋಗಬೇಡಿ ಸಾರ್."
ಯಾಕ್ರಿ?"
ಅಪ್ಪ ಮಗ ಇಬ್ರು ಜನಾಭಿಪ್ರಾಯದಿಂದ
ಮಂತ್ರಿಯಾದೋರಲ್ಲ, ತೋಳಬಲ ಹಣಬಲದಿಂದ
ರು ಅಂತ ದಾಖಲಾಗಿಬುಡುತ್ತೆ."
ಥೂತ್ತೇರಿ !!"


ಉಪೇಂದ್ರನ ಹಳೇ ಗೇಟಪ್!



ಸೆಪ್ಟೆಂಬರ್ 18 ರಂದು ಉಪೇಂದ್ರ ನಿರ್ಮಿಸಿ, ನಿರ್ದೇಶಿಸಿ, ನಾಯಕನಾಗಿ ನಟಿಸಲಿರುವ 'ಉಪೇಂದ್ರ ಭಾಗ-2' ಚಿತ್ರ ಸೆಟ್ಟೇರಲಿದೆ. ಅಂದು ಉಪ್ಪಿಯ ಬರ್ತಡೇ ಆಗಿರುವುದರಿಂದ ಸಿನಿಮಾದ ಮುಹೂರ್ತದ ಜೊತೆಗೆ ಅಭಿಮಾನಿಗಳ ಜಾತ್ರೆಯೂ ನಡೆಯಲಿದೆ.

ಸುಮಾರು 10 ವರ್ಷಗಳ ಹಿಂದೆ ಉಪೇಂದ್ರ ನಿರ್ದೇಶಿಸಿದ್ದ 'ಉಪೇಂದ್ರ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಜಯಭೇರಿಯನ್ನು ಬಾರಿಸಿತ್ತು ಮಾತ್ರವಲ್ಲ, ಈ ಚಿತ್ರದ ಕಥಾವಸ್ತು ಮತ್ತು ನಿರೂಪಣಾ ಶೈಲಿ ದೊಡ್ಡ ಚರ್ಚೆಗೆ ಗ್ರಾಸವಾಗಿತ್ತು. ಈಗ ಮತ್ತೆ ಅದೇ ಚಿತ್ರದ ಮುಂದುವರೆದ ಭಾಗವನ್ನು ಕೈಗೆತ್ತಿಕೊಳ್ಳುವ ಮುಖಾಂತರ ಇತ್ತೀಚೆಗೆ ಕಳೆದುಹೋದ ನಿರ್ದೇಶಕ ಉಪೇಂದ್ರ ಮತ್ತೆ ಗಾಂಧಿನಗರದಲ್ಲಿ ಪ್ರತ್ಯಕ್ಷವಾಗಲಿದ್ದಾರೆ ಎನ್ನಬಹುದು.

ಕಳೆದ ಆರೇಳು ವರ್ಷಗಳಿಂದ ಸೋಲಿನ ಮೇಲೆ ಸೋಲನ್ನೇ ಕಾಣುತ್ತಿರುವ ಉಪ್ಪಿಗೆ ಸ್ವತಃ ತಾನೇ ಅಖಾಡಕ್ಕೆ ಇಳಿದು ಚಿತ್ರ ನಿರ್ದೇಶಿಸುವ ಅನಿವಾರ್ಯ ಪರಿಸ್ಥಿತಿ ಎದುರಾಗಿತ್ತು ಎಂದರೆ ತಪ್ಪಾಗಲಾರದು. ಅದಕ್ಕೆ ಕಾರಣ ನಟ ಉಪ್ಪಿಗಿಂತ, ನಿರ್ದೇಶಕ ಉಪ್ಪಿಯನ್ನು ಹೆಚ್ಚಿನವರು ಇಷ್ಟಪಡುವುದು.



ಇದೇ ರೀತಿ ಇನ್ನೊಂದು ಹಳೆಯ ಚಿತ್ರದ ಮುಂದುವರಿದ ಭಾಗವಾದ ಮತ್ತೊಂದು ಚಿತ್ರ ಆರಂಭವಾಗುವ ಸುದ್ದಿ ಕೇಳಿಬಂದಿದೆ. ಅದೇನೆಂದರೆ ಮೊನ್ನೆಯಷ್ಟೇ ಚುನಾವಣೆಯಲ್ಲಿ ಸೋತು ಈಗ ಮತ್ತೆ ಸಂಪೂರ್ಣವಾಗಿ ತನ್ನನ್ನು ಸಿನಿಮಾ ರಂಗಕ್ಕೆ ಅರ್ಪಿಸಿಕೊಂಡಿರುವ ನಿರ್ದೇಶಕ, ನಟ ಬಿ.ಸಿ.ಪಾಟೀಲ್ ಅವರೂ ಕೂಡ ಅವರಿಗೆ ತಾರಾಮೌಲ್ಯ ತಂದುಕೊಟ್ಟ 'ಕೌರವ' ಚಿತ್ರದ ಭಾಗ-2 ನ್ನು ಸದ್ಯದಲ್ಲೇ ಆರಂಭ ಮಾಡಲಿದ್ದಾರಂತೆ. ಅಂದು ಈ ಚಿತ್ರವನ್ನು ನಿರ್ದೇಶಿಸಿದ್ದ ಮಹೇಂದರ್ ಮತ್ತು ಸಂಗೀತ ನೀಡಿದ್ದ ಹಂಸಲೇಖ ಭಾಗ-2 ರಲ್ಲೂ ಮುಂದುವರೆಯುತ್ತಾರಂತೆ.

ವಿಶೇಷವೆಂದರೆ ಈ ಹಿಂದೆ ಈ ಎರಡೂ ಚಿತ್ರಗಳಲ್ಲಿ ನಾಯಕಿಯಾಗಿ ನಟಿಸಿದ್ದವರು ಪ್ರೇಮ. ಆದರೆ 'ಉಪೇಂದ್ರ ಭಾಗ-2'ರಲ್ಲಿ ಮತ್ತು 'ಕೌರವ ಭಾಗ-2'ರಲ್ಲಿ ಪ್ರೇಮಾ ನಟಿಸುತ್ತಾರೋ? ಇಲ್ಲವೋ? ಎಂಬುದರ ಬಗ್ಗೆ ಮಾತ್ರ ನಿರ್ದೇಶಕರು ಇಂದು ಬಾಯಿಬಿಡುತ್ತಿಲ್ಲ. ■

ಗಡಿದಾಟುವ ನಿರ್ದೇಶಕರಿಲ್ಲ?

ಸೆಪ್ಟೆಂಬರ್ 2 ರಂದು ಸುದೀಪ್ ತಮ್ಮ 40ನೆಯ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ತನ್ನ ಸಹೋದ್ಯೋಗಿಗಳು, ಉದ್ಯಮದ ಗಣ್ಯರು ಹಾಗೂ ಅಭಿಮಾನಿಗಳ ಸಮ್ಮುಖದಲ್ಲಿ ಆಚರಿಸಿದರು. ತಮ್ಮ 'ಫಾರ್ಟಿ ಪ್ಲಸ್' ಬರ್ತ್‌ಡೇ ಅನ್ನು ರಾಜ್ಯದ ಎಲ್ಲ ನಾಯಕ-ನಾಯಕಿಯರನ್ನು ಕರೆಸಿ ಅದ್ದೂರಿಯಾಗಿ ಆಚರಿಸಲು ಸುದೀಪ್ ಪ್ಲ್ಯಾನ್ ಮಾಡಿದ್ದರು. ಆದರೆ, ಅವರ ತಾಯಿ ಕಳೆದ ಕೆಲವು ತಿಂಗಳಿನಿಂದ ಅನಾರೋಗ್ಯದಿಂದ ಬಳಲುತ್ತಿದ್ದು ಅವರಿನ್ನೂ ಸಂಪೂರ್ಣವಾಗಿ ಚೇತರಿಸಿಕೊಂಡಿಲ್ಲವಾದ್ದರಿಂದ ಅದನ್ನು ಅವರು ರದ್ದುಪಡಿಸಿದರು.


ಆದರೆ ಗಾಂಧಿನಗರದ ಹಲವು ಜನ ಸುದೀಪ್ ಬರ್ತಡೇಯನ್ನು ತಮ್ಮದೇ ಆದ ರೀತಿಯಲ್ಲಿ ಕುಹಕವಾಗಿ ಹೀಗೆ ವಿಶ್ಲೇಷಿಸುತ್ತಿದ್ದಾರೆ. "ತಮ್ಮ ಹುಟ್ಟುಹಬ್ಬದ ದಿನದಂದು ಸುದೀಪ್ ಇಬ್ಬರು ತಮಿಳು ನಿರ್ದೇಶಕರಿಗೆ ತಮ್ಮ ಕಾಲ್‌ಶೀಟ್ ನೀಡಿದ್ದಾರೆ. ಸುದೀಪ್ ಚಿತ್ರ ನಿರ್ದೇಶಿಸಲು ಕನ್ನಡದಲ್ಲಿ ನಿರ್ದೇಶಕರುಗಳೇ ಇಲ್ಲವೇ?" ಎಂಬುದು ಅವರ ತಕರಾರು.



ಸೂರಪ್ಪಬಾಬು ನಿರ್ಮಾಣದ ಚಿತ್ರವನ್ನು ತಮಿಳಿನ 'ಪಡೆಯಪ್ಪ' ಖ್ಯಾತಿಯ ರವಿಕುಮಾರ್ ನಿರ್ದೇಶಿಸಲಿದ್ದಾರೆ ಮತ್ತು ಚಂದ್ರಶೇಖರ್ ನಿರ್ಮಾಣದ ಮತ್ತೊಂದು ಚಿತ್ರವನ್ನು ತಮಿಳಿನ ಪೆರಾರಸು ನಿರ್ದೇಶಿಸಲಿದ್ದಾರೆ ಎಂದು ಅವತ್ತು ಸುದೀಪ್ ಘೋಷಿಸಿದ್ದೇ ಇವರ ತಕರಾರಿಗೆ ಮೂಲಕಾರಣ.

ಆದರೆ ಒಂದು ಮಾತಂತೂ ನಿಜ. ಸುದೀಪ್ ಇಂದು ಕರ್ನಾಟಕದ ಗಡಿಯನ್ನು ದಾಟಿ ತಮಿಳು, ತೆಲುಗು ಮತ್ತು ಹಿಂದಿ ಚಿತ್ರರಂಗಗಳಲ್ಲೂ ವಿಜೃಂಭಿಸುತ್ತಿರುವುದರಿಂದ ಸಹಜವಾಗಿ ಎಲ್ಲ ಭಾಷೆಗೂ ಸಲ್ಲುವ ಒಬ್ಬ ನಿರ್ದೇಶಕ ಅವರಿಗೆ ಬೇಕಾಗಿದ್ದಾನೆ. ಅಂತಹ ಛಾತಿಯ ನಿರ್ದೇಶಕ ಸದ್ಯಕ್ಕೆ ಕನ್ನಡ ಚಿತ್ರರಂಗದಲ್ಲಿ ಕಾಣಸಿಗುತ್ತಿಲ್ಲ ಎಂಬುದು ಕಠೋರ ಸತ್ಯ. ■

ವಳಿಯ ಬ್ರಾಹ್ಮಣೇತರರು
ಧಿಸುವ ದೈವಭೂತಗಳೆಲ್ಲ
ಗ ಶಿವನ ಗಣಗಳಾಗಿ
ವಾಗಿವೆ. ಸ್ಥಳೀಯ ಭಾಷೆಯ
ಾದ ಜುಮಾದಿ-ಪಂಜುರ್ಲಿ
ಗಳನ್ನೆಲ್ಲ ಅನುಕೂಲಕ್ಕಾಗಿ ಸಂಸ್ಕೃತ
ರಿನಿಂದ ಧೂಮಾವತಿ-
ಹಮೂರ್ತಿಗಳನ್ನಾಗಿಸಲಾಗಿದೆ.



ನೂರು ವರ್ಷಗಳ ನಂತರ
ಾದರೂ 'ಈ ಧೂಮಾವತಿ
ು ತಪ್ಪು, ಅದು ಜುಮಾದಿ
ಗಬೇಕು' ಎಂದರೆ ಯೋಗೀಶ
ರಿಗಾದ ಗತಿಯೇ ಆತನಿಗೂ
ುವುದು ಸತ್ಯ.
ತಿರುಪತಿಯಲ್ಲಿನ ಮೂಲ ದೇವರು ಯಾರು?
ಿಪಿಯ ಜೈನ ಬಸದಿಯಲ್ಲಿನ ಅನಂತನಾಥ
ನಾಥರು ಮಾಯವಾಗಿ ಅನಂತೇಶ್ವರ ಚಂದ್ರಮೌಳೀಶ್ವರ
ರೆಂಬ ವಾದವಿದೆ. ಇದೇ ರೀತಿ ಕಾರ್ಕಳದ
ತಶಯನನೂ ಹಿಂದೆ ಜೈನರ ಅನಂತನಾಥನಾಗಿದ್ದ
ವುದನ್ನು ಅಲ್ಲಿನವರೇ ಒಪ್ಪುತ್ತಾರೆ. ದೇವರನ್ನು ಸೃಷ್ಟಿಸಿದ
ವ ಆತನನ್ನ ತನ್ನ ಅನುಕೂಲಕ್ಕೆ ತಕ್ಕಂತೆ ಪಳಗಿಸುತ್ತಾ
ದ.
ದನ್ನು ಜನ ಅರಿಯುವುದು ಮುಖ್ಯ.

- ರವಿ ಪುತ್ತೂರು, ದ.ಕ


ತಪ್ಪಿಸುವುದು ಹೇಗೆ?

ಅಜ್ಞಾನಿ ಮಾನವನಿಗೆ ಚಿನ್ನದ ಮೋಹವಿದೆಯೆಂದ ಮಾತ್ರಕ್ಕೆ ದೇವರಿಗೂ ಚಿನ್ನದ ಮೋಹವಿದೆ, ದೇವರೂ ಮನುಷ್ಯರಂತೆ ಲಂಚಕೋರ ಎಂದು ಭಾವಿಸುವ ಮೌಢ್ಯವನ್ನು ತೊಡೆಯುವುದು ಸಾಧ್ಯವೇ? ದೇವರಿಗೆ ತಾನೇ ಸೃಷ್ಟಿಸಿದ ಮಣ್ಣೂ ಒಂದೇ ಚಿನ್ನವೂ ಒಂದೇ; ದೇವರಿಗೆ ಚಿನ್ನದ-ರಥ ವಜ್ರದ-ಕಿರೀಟ ಅಗತ್ಯವಿಲ್ಲ ಎಂದು ಹೇಳಿದರೆ ನಂಬುವವರು ಯಾರಿದ್ದಾರೆ?

ಅಂಧಶ್ರದ್ಧೆ ಹರಡುವುದೇ ಒಂದು ದೊಡ್ಡ ಉದ್ಯಮವಾಗಿರುವಾಗ ಮೋಸಗಾರ ಅಮ್ಮ-ಬಾಬಾಗಳನ್ನು ನಿರ್ಬಂಧಿಸಲು ಸಾಧ್ಯವೇ? ಎಲ್ಲಾ ದೇವಸ್ಥಾನಗಳಲ್ಲಿ ನಡೆಯುವ ಭಕ್ತರ ಸುಲಿಗೆ ನಿಲ್ಲಿಸುವುದು ಹೇಗೆ? ಇಂತಹ ಪರಿಸ್ಥಿತಿಯಲ್ಲಿ ಅಂಧಶ್ರದ್ಧೆ ನಿರ್ಮೂಲನಾ ಕಾನೂನು ಹೊಸ ಸಮಸ್ಯೆಗಳನ್ನು ಸೃಷ್ಟಿಸಿ ಸಮಾಜದಲ್ಲಿ ಹೊಸ ಸಂಘರ್ಷಕ್ಕೆ ಕಾರಣವಾಗದಂತೆ ಮುಂಜಾಗ್ರತೆ ವಹಿಸಬೇಕಾಗುತ್ತದೆ.

-ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಮಹಾರಾಷ್ಟ್ರದ ವಿಚಾರವಾದಿ ನರೇಂದ್ರ
ಹೋಳ್ಕರರನ್ನು ಸಂಪ್ರದಾಯವಾದಿಗಳು ಸುಪಾರಿ ಹತ್ಯೆ
ಡಿಸಿದ ನಂತರ ಮಹಾರಾಷ್ಟ್ರ ಸರಕಾರವು ಜಾರಿಗೆ
ದ ಅಂಧಶ್ರದ್ಧೆ ನಿರ್ಮೂಲನಾ
ವಾಕ್ಷೆಯುಂತಹದ್ದೇ ವಿಧೇಯಕವನ್ನು ಇತರ
ಗಳೂ ಜಾರಿಗೆ ತರುವ ಬಗ್ಗೆ
ಚಿಸುತ್ತಿವೆಯಂತೆ.



ಆದರೆ ಇದು ಸುಲಭ ಸಾಧ್ಯವಲ್ಲ. ಸಚಿನ್
ಕೊಲ್ಕರ್ ಮತ್ತು ಅಮಿತಾಭ್
ರನ್ನು ಕುಕ್ಕೆ ಸುಬ್ರಮಣ್ಯಕ್ಕೆ
ಂದು ನಾಗದೋಷವೆಂಬ
ಗದ ಮೌಢ್ಯವನ್ನು ಉತ್ತರ
ತದಲ್ಲಿ ವ್ಯವಸ್ಥಿತವಾಗಿ 'ಮಾರ್ಕೆಟಿಂಗ್'
ನವರನ್ನು ಪ್ರತಿಬಂಧಿಸುವಂತಹ ಅಂಧಶ್ರದ್ಧಾ
ಧ ಕಾನೂನು ಎಂದಾದರೂ ತರಲು ಸಾಧ್ಯವೇ?
ರಿಕೆಟಿಗರು ಮತ್ತು ಸಿನಿಮಾರಂಗದವರು
ದ 'ಬ್ರಾಂಡ್ ಅಂಬಾಸಡರ್' ಆಗುವುದನ್ನು


ಅಪಾಯಕಾರಿ ಹೆಣ್ಣುಗಳ ಬಗ್ಗೆ ಸಮಾಜ ಜಾಗ್ರತವಾಗಿರಬೇಕು

ಮೂರು ವಿಚಾರಗಳನ್ನು ಪ್ರಸ್ತಾಪಿಸಲು ಈ ಪತ್ರ ಬರೆಯುತ್ತಿದ್ದೇನೆ.

ಪಶ್ಚಿಮಘಟ್ಟದ ಬಿ.ಜಿ.ಕೆ ಬರೆದ ಕವನ ನನ್ನ ಮನ ಕಲಕಿತು.

ನಮ್ಮ ವಸತಿ ಸಚಿವ ಅಂಬರೀಶ್ ಕುರಿತು ಬರೆಯುವ ಧೈರ್ಯವನ್ನು ನೀವು ತೋರಿದ್ದೀರಿ. ಅದಕ್ಕೆ ನಿಮ್ಮ ಬಳಗಕ್ಕೆ ಅಭಿನಂದನೆ. ಅಪಾರ ಅಭಿಮಾನಿ ಬಳಗ ಇದೆ ಎಂದು ಹೇಳಲ್ಪಡುವ ಅಂಬರೀಶ್ ತರಹದ ಸಿನಿಮಾನಟರ ಬಗ್ಗೆ ವಿಮರ್ಶೆಗಳನ್ನು ಬರೆಯಲೂ ಸಹ ಇಂದಿನ ದಿನಗಳಲ್ಲಿ ಎದೆಗಾರಿಕೆ ಬೇಕು. ನಮ್ಮ ವ್ಯವಸ್ಥೆಯ ದುರಂತವೆಂದರೆ ಸಂಸತ್ತಿನಲ್ಲಿ ಇದ್ದು ಕರ್ನಾಟಕದ ಜನರಿಗಾಗಿ ಏನನ್ನೂ ಮಾಡದ, ಕೊನೆಗೆ ಸಂಸತ್ತಿಗೆ ನಿರಂತರ ಗೈರುಹಾಜರಾಗಿ ತನ್ನ ಸಂಸದನ ಸ್ಥಾನವನ್ನೇ ಕಳೆದುಕೊಳ್ಳುವ ಹಂತಕ್ಕೆ ತಲುಪಿದ್ದ ಅಂಬರೀಶ್ ಇಂದು ಕರ್ನಾಟಕದ ವಸತಿ ಸಚಿವರು. ಮಂಡ್ಯ ಜಿಲ್ಲೆಯಿಂದ ಪುನಃ ಶಾಸಕರಾಗಿ ಆಯ್ಕೆಯಾದಾಗ ಇದೊಂದು ದುರಂತ ಎಂದುಕೊಂಡಿದ್ದ ನನ್ನಂಥವರಿಗೆ ಅಂಬರೀಶ್ ಕರ್ನಾಟಕದ ವಸತಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದು ನಮ್ಮೆಲ್ಲರ ದುರಂತವಾಗಿ ಕಂಡಿತ್ತು. ಸಮಾಜದ ತಳಸಮುದಾಯದ, ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ನೇರ ಸಂಬಂಧ ಹೊಂದಿರುವ ಈ ಖಾತೆಯನ್ನು ಅಂಬರೀಶ್‌ಗೆ ನೀಡಿದ್ದು ನಿಜಕ್ಕೂ ಖೇದದ ಸಂಗತಿ. ಇನ್ನು ಕರ್ನಾಟಕದ ಜನರಿಗೆ ವಸತಿ ಯೋಜನೆಗಳು ದಕ್ಕಿದಂತೆಯೆ ಬಿಡಿ. "ಸಿದ್ದರಾಮಯ್ಯ ಕರ್ನಾಟಕದ ಮೋದಿ" ಎನ್ನುವ ಈ ಮನುಷ್ಯನಿಗೆ ತಲೆಯಲ್ಲಿ ಏನಿದೆ ಎಂಬುದು ಅರ್ಥವಾಗುತ್ತಿಲ್ಲ.

ಪತ್ನಿ ಪೀಡಿತರ ಕಥೆಯನ್ನು ಕೆಲವರು ನಿಲ್ಲಿಸಿ ಎಂದೂ, ಪತ್ರಿಕೆ ಸ್ತ್ರೀ ಕುಲಕ್ಕೆ ಘೋರ ಅನ್ಯಾಯ ಎಸಗುತ್ತಿದೆ ಎಂಬರ್ಥದ ಪತ್ರಗಳನ್ನು ಬರೆಯುತ್ತಿದ್ದಾರೆ. ಇದು ವಿಚಿತ್ರವಾಗಿದೆ. ಪತ್ನಿ ಪೀಡಿತರ ಸಂಖ್ಯೆ ಕಡಿಮೆ ಇರಬಹುದು. ಸ್ತ್ರೀಯರ ಶೋಷಣೆಗೆ ಹೋಲಿಸಿದರೆ ಅದು ತುಂಬಾನೇ ಕಡಿಮೆಯೂ ಇರಬಹುದು. ಆದರೆ ಸ್ತ್ರೀಯರು ಮಾಡುವ ಶೋಷಣೆಯ ಕುರಿತು ಬರೆಯಲೇಬಾರದು, ಅದನ್ನು ಪ್ರಕಟಿಸಲೇಬಾರದು ಎಂದರೆ ಅದನ್ನು ಹೇಗೆ ಒಪ್ಪಲು ಸಾಧ್ಯ? ಪತ್ನಿ ಪೀಡಿತರ ಕಥೆಯನ್ನು ಓದಲೂ ಆಗದ ಮನಸ್ಥಿತಿ ನಮ್ಮದಾಗಬೇಕೆ? ಮದುವೆಯಾಗುವಾಗ ನಿಮ್ಮ ಮನೆಯಲ್ಲಿ 'ಗುಜರಿ' (ವೃದ್ಧ ತಂದೆತಾಯಿಯರಿಗೆ ಕೆಲವು



ಹುಡುಗಿಯರು ಇಟ್ಟ ಕೋಡ್‌ವರ್ಡ್) ಇದ್ದರೆ ನಾನು ನಿನ್ನನ್ನು ಮದುವೆಯಾಗಲಾರೆ ಎನ್ನುವ ಹುಡುಗಿಯರು, ಮದುವೆಯಾಗಿ ಬಂದಕೂಡಲೇ ಅತ್ತೆ-ಮಾವನನ್ನು ಮನೆಯಿಂದ ಅಮಾನವೀಯವಾಗಿ ಹೊರಹಾಕಿದ ಅಥವಾ ವೃದ್ಧಾಶ್ರಮಕ್ಕೆ ಕಳುಹಿಸಿದ ಸೊಸೆಯಂದಿರು, ನಾದಿನಿಯರು ಮನೆಗೆ ಬಂದರೆ ಕೆಂಡವಾಗುವ ಅತ್ತಿಗೆಯರು, ವಿಧವೆ ಅತ್ತೆಯ ಉಸಾಬರಿ ಬೇಡ ಎಂದು ಕಾಶಿಗೆ ಕರೆದುಕೊಂಡು ಹೋಗಿ ಭಿಕ್ಷಾಟನೆಗೆ ಬಿಟ್ಟ ಸೊಸೆಯಂದಿರು, ಗಂಡ ಇರುವಾಗಲೇ ಇನ್ನೊಂದು ಸಂಬಂಧವನ್ನು ಇಟ್ಟುಕೊಂಡು ಗಂಡನ ಕೊಲೆ ಮಾಡುವ ಮಟ್ಟಕ್ಕೆ ಮುಂದುವರಿದ ಹೆಂಡತಿಯರು, ಹೆಣ್ಣು ಮಗುವೇ ಬೇಡ ಎಂದು ಅಬಾರ್ಷನ್ ಮಾಡಿಸಿಕೊಳ್ಳುವ ತಾಯಂದಿರು, ರಾಜಕಾರಣದಲ್ಲಿ ಪುರುಷರಿಗೆ ಸಮಾನವಾಗಿ ಭ್ರಷ್ಟರಾಗಿರುವ ಹೆಂಗಸರು ಎಲ್ಲರೂ ಇರುವುದು ನಮ್ಮ ಸಮಾಜದಲ್ಲಿಯೇ. ನಮ್ಮ ಜನರ ನಡುವೆಯೆ ಅಲ್ಲವೆ? ಇವೆಲ್ಲ ವಾಸ್ತವದ ಸಂಗತಿಗಳೇ ಅಲ್ಲವೆ? ಹೀಗಿರುವಾಗ ಅಂತಹ ವ್ಯಥೆಗಳನ್ನ, ಕಥೆಗಳನ್ನ ಸಹ ನಾವು ಕೇಳಬೇಕು, ಓದಬೇಕು. ಸ್ತ್ರೀ ಕುಲಕ್ಕಿಂತ ಪುರುಷರೇ ಹೆಚ್ಚು ಅಪಾಯಕಾರಿಗಳು ನಿಜ. ಸ್ತ್ರೀಯರ ಪರವಾಗಿ ಸಹಾನುಭೂತಿ ಇರಬೇಕಾದದ್ದು ಅಪೇಕ್ಷಣೀಯ. ಆದರೆ ಅಪಾಯಕಾರಿ ಹೆಣ್ಣುಗಳ ಬಗ್ಗೆ ಸಮಾಜ ಜಾಗ್ರತವಾಗಿರಬೇಕಾದದ್ದು ಸಹ ಅತ್ಯಗತ್ಯ. ಪತ್ನಿಪೀಡಿತರ ವ್ಯಥೆ ಲೇಖನ ಮಾಲೆ ಖಂಡಿತವಾಗಿ ಮುಂದುವರಿಯಲಿ.

-ಶಶಿಧರ ಹೆಮ್ಮಾಡಿ, ಕುಂದಾಪುರ

'ಮಕ್ಕಳ ಪೀಡಕ ಆಸಾರಾಮ್' ಎಂಬ 'ಕಂಡಹಾಗೆ' ಅಂಕಣ ತುಂಬಾ ಚಿಂತನಾರ್ಹವಾಗಿತ್ತು. ಅಸಾರಾಮ್ ಎಂಬ ನಕಲಿ ಸಂತ ಹಿಂದೂ ಧರ್ಮದ ಪ್ರಚಾರಕ ಎಂದು ರಾಷ್ಟ್ರದ ಜನರಿಗೆ ಪರಿಚಯಿಸುವ ಕೆಲಸ ಮಾಡಿದ ಸಂಘ ಪರಿವಾರ ಮತ್ತು ನರಹಂತಕ ನರೇಂದ್ರ ಮೋದಿಯ ಪಟಾಲಂ ಇವತ್ತು ಜನತೆಯ ಎದುರು ಬೆತ್ತಲಾಗಿವೆ.

ಮಕ್ಕಳ ಪೀಡಕ, ಸಾರ್ವಜನಿಕ ಆಸ್ತಿ ಭಕ್ಷಕ ಎಲ್ಲವೂ ಆಗಿರುವ ಈ ನಕಲಿ ದೇವಮಾನವ ಮಾಡಿರುವ ಅಕ್ರಮ, ಅನೈತಿಕತೆ, ಭೂ ಲೂಟಿ ಎಲ್ಲವೂ ಸಮಗ್ರ ತನಿಖೆಗೆ ಒಳಗಾಗಬೇಕಿದೆ. ಜೊತೆಗೆ ಇವನಿಗೆ ಬೆನ್ನೆಲುಬಾಗಿ ನಿಂತಿರುವವರ ಮೇಲೂ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕಿದೆ. ಆಗ ಮಾತ್ರ ಇಂತಹ ನೀಚರು ದೇವಮಾನವರಂತೆ ಪೋಸು ಕೊಡುವುದನ್ನು ನಿಯಂತ್ರಿಸಬಹುದು.

- ಭೀಮನಗೌಡ ಪರಗೊಂಡ, ಜೇವರ್ಗಿ

ಗೌರಿಯವರ 'ಕಂಡಹಾಗೆ' ಮತ್ತು ಡಾ.ವಾಸು ಅವರ 'ಅಂಚಿನಿಂದ' ಅಂಕಣಗಳು ಸೂಪರ್ ಆಗಿ ಮೂಡಿಬರುತ್ತಿವೆ. ಅಭಿನಂದನೆಗಳು.

-ಸುಮಿಮಾ ಪೆರುಮಾಜೆ

ಸೆಪ್ಟೆಂಬರ್ 11ರ ಸಂಚಿಕೆಯಲ್ಲಿ ಮಂತ್ರಿ ಅಂಬರೀಶ್ ಬಗ್ಗೆ ಪಾರ್ವತೀಶ್ ಅವರು ಬರೆದ ವರದಿ ನೋಡಿ ಸಿದ್ದು ಸರ್ಕಾರಕ್ಕೆ ಇವರು ಕಂಟಕವಾಗುತ್ತಾರೆ ಅನಿಸಿತು. ಸಿದ್ದು ಇವರನ್ನು ಹಸೋಟಿಯಲ್ಲಿ ಇಟ್ಟುಕೊಳ್ಳಲಿ.

- ಎನ್. ನಿಂಗಪ್ಪ, ಹಂಪನಹಳ್ಳಿ, ಎಚ್.ಬಿ.ಹಳ್ಳಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಕಳುಹಿಸಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

Registered No.KA/RNP/BGS/2036/2014-16 Posted at : GPO, Bangalore-01. Friday R B P LANKESH



ಮೊಬೈಲ್ ಕೀಚಕರು

ಈಗ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ರೋಗ ಆರಂಭವಾಗಿದೆ. ಅದೇನೆಂದರೆ, ನಾಯಕಿಯರಿಗೆ ಚಿತ್ರತಂಡದ ಹುಡುಗರು ಅಶ್ಲೀಲ ಸಂದೇಶಗಳನ್ನು ಕಳುಹಿಸುವುದು.

ತಿಂಗಳ ಹಿಂದೆ ನಟಿ ರಾಧಿಕಾ ಪಂಡಿತ್ ಅವರ ಫೋನ್ 'ಹ್ಯಾಕ್' ಮಾಡಿದ ಕಿರಾತಕನೊಬ್ಬ ಚಿತ್ರರಂಗದ ಅನೇಕ ನಾಯಕ-ನಾಯಕಿಯರಿಗೆ ಆಕೆಯ ಹೆಸರಿನಲ್ಲೇ ಸಂದೇಶಗಳನ್ನು ಕಳುಹಿಸುತ್ತಿದ್ದ ಘಟನೆ ಬಹಿರಂಗಗೊಂಡಿತ್ತು, ವಿಧಿ ಇಲ್ಲದೆ ರಾಧಿಕಾ ಪಂಡಿತ್ ಪೊಲೀಸ್ ಸ್ಟೇಷನ್‌ಗೆ ದೂರು ನೀಡಿದರು. ಆಗ ಆಕೆ ನಟಿಸಿದ್ದ ಮೊದಲ ಚಿತ್ರದ ಸಹ ನಿರ್ದೇಶಕನೊಬ್ಬ ಅಂತಹ ಸಂದೇಶಗಳನ್ನು ಕಳುಹಿಸುತ್ತಿದ್ದದ್ದು ಬಹಿರಂಗವಾಗಿತ್ತು, ಆತನನ್ನು ಪೊಲೀಸರು ಚೆನ್ನಾಗಿ ತರಾಟೆಗೆ ತೆಗೆದುಕೊಂಡಿದ್ದೂ ಆಯಿತು.

ಈ ಸುದ್ದಿ ಇನ್ನೂ ಹಸಿಹಸಿಯಾಗಿರುವಾಗಲೇ ಈಗ ಮತ್ತೊಂದು ಅಂತಹುದೇ ಘಟನೆ ಗಾಂಧಿನಗರದಿಂದ ಕೇಳಿಬಂದಿದೆ. ಅದೇನೆಂದರೆ, 'ತುಪ್ಪ' ಖ್ಯಾತಿಯ ಹುಡುಗಿ ರಾಗಿಣಿಗೆ ಉಮೇಶ್ ಎಂಬ ಸಹ ನಿರ್ದೇಶಕ ತೀರಾ ಅಶ್ಲೀಲವಾದ ಸಂದೇಶವನ್ನು ಕಳುಹಿಸಿ ಆಕೆಗೆ ಇರುಸುಮುರುಸು ಮಾಡುತ್ತಿದ್ದ. ಅವನ ಕಿರಿಕಿರಿತಾಳದೆ ರಾಗಿಣಿ ಕೂಡ ಪೊಲೀಸ್ ಸ್ಟೇಷನ್ ಮೆಟ್ಟಿಲನ್ನು ಏರಿದ್ದರು. ಪೊಲೀಸರಿಂದ 'ಟ್ರೀಟ್‌ಮೆಂಟ್' ಪಡೆದ ನಂತರ ಈ ಹಿಂದೆಯೂ ಅನೇಕ ನಾಯಕಿಯರಿಗೆ ಈ ರೀತಿಯ ಸಂದೇಶಗಳನ್ನು ಕಳುಹಿಸಿದ್ದನ್ನು ಆತ ಒಪ್ಪಿಕೊಂಡಿದ್ದಾನೆ.



ಇದಕ್ಕಿಂತಲೂ ಬೆಚ್ಚಿ ಬೀಳುವ ಸಂಗತಿ ಏನೆಂದರೆ ಕನ್ನಡ ಚಿತ್ರರಂಗದ ಈಗಿನ ಜಮಾನದ ಬಹುತೇಕ ಎಲ್ಲ ಹೊಸ ನಾಯಕಿಯರಿಗೆ ಸಹಾಯಕ ನಿರ್ದೇಶಕರುಗಳು ಈ ರೀತಿ ಅಶ್ಲೀಲ ಸಂಭಾಷಣೆಗಳನ್ನು ಕಳುಹಿಸುತ್ತಿದ್ದಾರಂತೆ. ಆದರೆ ಈ ಉದ್ಯಮ ಮತ್ತು ಸಮಾಜಕ್ಕೆ ಹೆದರಿ ಈ ನಾಯಕಿಯರು ಅಂತಹ ಸಂದೇಶಗಳನ್ನು ಓದಿ ಸುಮ್ಮನಿರುತ್ತಾರೆ. ಸದ್ಯಕ್ಕೆ ರಾಗಿಣಿ ಮತ್ತು ರಾಧಿಕಾ ಪಂಡಿತ್ ಮಾತ್ರ ಈ ಬಗ್ಗೆ ಪ್ರತಿಭಟಿಸಿರುವುದರಿಂದ ವಿಷಯ ಬಹಿರಂಗವಾಗಿದೆ. ಇದನ್ನು ಉದ್ಯಮಕ್ಕೆ ಸಂಬಂಧಪಟ್ಟ ಸಂಘ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸಿ ಹಲವು ನೀತಿನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಿದೆ. ಹಾಗೆ ಮಾಡಿದರೆ ಮಾತ್ರ ಪುರುಷ- ಪ್ರಧಾನವಾದ ಚಿತ್ರರಂಗದಲ್ಲಿ ಮಹಿಳೆಯರಿಗೆ ರಕ್ಷಣೆಯನ್ನು ನೀಡಿದಂತಾಗುತ್ತದೆ. ■

100ನೇ ವರ್ಷ- ಪ್ರಶಸ್ತಿ ಅಪಸ್ವರ



ಭಾರತೀಯ ಚಿತ್ರೋದ್ಯಮಕ್ಕೆ ನೂರು ವರ್ಷ ತುಂಬಿದ ಸಂಭ್ರಮ ಆರಂಭವಾಗುವ ಮೊದಲೇ ಕನ್ನಡ ಚಿತ್ರರಂಗದಲ್ಲಿ ಈ ಸಮಾರಂಭದ ಬಗ್ಗೆ ಅಪಸ್ವರ ಕೇಳಿಬರುತ್ತಿದೆ. ಇದಕ್ಕೆ ಕಾರಣ ಕನ್ನಡ ಚಿತ್ರರಂಗದಿಂದ ಸನ್ಮಾನಕ್ಕೆ ಆಯ್ಕೆಯಾಗಿರುವ 50 ಜನ ಸಾಧಕರ ಪಟ್ಟಿಯಿಂದ ಹಲವು ಪ್ರಮುಖರನ್ನು ಕೈಬಿಟ್ಟಿರುವುದು.

ಉದಾಹರಣೆಗೆ 'ಬಂಗಾರದ ಮನುಷ್ಯ' ಖ್ಯಾತಿಯ ಸಿದ್ದಲಿಂಗಯ್ಯ ಅವರು ಈ ಪಟ್ಟಿಯಲ್ಲಿ ಇಲ್ಲ, ಅದೇರೀತಿ ಗೀತಪ್ರಿಯ, ಅನಂತ್ ನಾಗ್, ಗಿರೀಶ್ ಕಾಸರವಳ್ಳಿ, ಪಿ.ಶೇಷಾದ್ರಿ ಮೊದಲಾದವರ ಹೆಸರುಗಳನ್ನೂ ಕರ್ನಾಟಕ ಫಿಲಂ ಛೇಂಬರ್ ಪಟ್ಟಿಯಲ್ಲಿ ಸೇರಿಸಿಲ್ಲದಿರು[...] ಅನೇಕರು ಹುಬ್ಬೇರಿಸುವಂತೆ ಮಾಡಿದೆ. ಆದರೆ ಛೇಂಬರ್ ತನ್ನದೇ ಆದ ಕಾರಣಗಳನ್ನು ಒಡ್ಡಿದೆ. ಅದೇನೆ[...] "ಸೌತ್ ಇಂಡಿಯನ್ ಫಿಲ್ಮ್ ಛೇಂಬರ್ ರೂಪಿಸಿರುವ ನಿಯಮಗಳ ಪ್ರಕಾರ ಯಾರಿಗೆ ಪ್ರಶಸ್ತಿ ದೊರಕು[...] ಅವರೇ ಬಂದು ಪ್ರಶಸ್ತಿಯನ್ನು ಸ್ವೀಕರಿಸಬೇಕೇ ವಿನಃ ಅವರ ಪರವಾಗಿ ಬೇರೆ ಯಾರೂ ಪ್ರಶಸ್ತಿ ಸ್ವೀಕರಿಸುವ[...] ಹಾಗೆಯೇ ಇನ್ನೊಂದು ನಿಯಮ ಯಾವುದೆಂದರೆ ಕನಿಷ್ಠ 50 ವರ್ಷಗಳ ಕಾಲ ಚಿತ್ರರಂಗಕ್ಕೆ ಸೇವೆ ಸಲ್ಲಿಸಿರುವ[...] ಮಾತ್ರ ಪ್ರಶಸ್ತಿಗೆ ಆಯ್ಕೆ ಮಾಡಬೇಕು. ಗೀತಪ್ರಿಯ ಮತ್ತು ಸಿದ್ದಲಿಂಗಯ್ಯ ಅವರನ್ನು ಆಯ್ಕೆ ಮಾಡಲಾ[...] ಆದರೆ ಅನಾರೋಗ್ಯದ ನಿಮಿತ್ತ ಅವರು ಮದ್ರಾಸ್‌ಗೆ ಬರಲು ಸಾಧ್ಯವಿಲ್ಲ ಎಂದಿದ್ದರಿಂದ ಅವರನ್ನು ಕೈಬಿಡಲಾಯಿ[...] ಹಾಗೆಯೇ ಗಿರೀಶ್ ಕಾಸರವಳ್ಳಿ ಅವರು ಇನ್ನೂ 50 ವರ್ಷದ ಸೇವೆಯನ್ನು ಸಂಪೂರ್ಣಗೊಳಿಸದ ಕಾರಣ[...] ಅವರನ್ನು ಪಟ್ಟಿಗೆ ಸೇರಿಸಲಾಗಲಿಲ್ಲ."

ಸೌತ್ ಇಂಡಿಯನ್ ಫಿಲ್ಮ್ ಛೇಂಬರ್ ರೂಪಿಸಿದ್ದ ನಿಯಮಗಳು ಸೃಷ್ಟಿಸಿದ್ದ ಬಿಕ್ಕಟ್ಟನ್ನು ಬಗೆಹರಿಸಲು [...] ಕೊನೆಕ್ಷಣದಲ್ಲಿ ಹಲವು ಬದಲಾವಣೆಗಳನ್ನು ತರಲಾಗಿದೆ. ಮೊದಲನೆಯದಾಗಿ 50 ವರ್ಷ ಸೇವೆ ಸಲ್ಲಿಸಿರಬೇ[...] ನಿಯಮವನ್ನು ಸಡಲಿಸಿ ಗಿರೀಶ್ ಕಾಸರವಳ್ಳಿ ಹೆಸರನ್ನು ಸೇರಿಸಲಾಗಿದೆ. ಜೊತೆಗೆ ದಕ್ಷಿಣ ಭಾರತದ [...] ಛೇಂಬರ್ ಒಂದರ ಪ್ರಥಮ ಮಹಿಳಾ ಅಧ್ಯಕ್ಷೆ ಎಂಬ ಕಾರಣಕ್ಕೆ ಜಯಮಾಲಾ ಅವರ ಹೆಸರು ಈಗ ಪಟ್ಟಿ[...] ಸ್ಥಾನ ಪಡೆದಿದೆ. ಇವರಿಬ್ಬರಲ್ಲದೆ ಈಗ ವಸತಿ ಸಚಿವ ಆಗಿರುವ ಅಂಬರೀಷ್ ಕೂಡ ಸನ್ಮಾನ ಪಡೆಯಲಿ[...]

ಎರಡನೆಯದಾಗಿ ಪ್ರಶಸ್ತಿ ವಿಜೇತರೇ ಬರಬೇಕೆಂಬ ನಿಯಮವನ್ನೂ ಸಡಿಲಿಸಿರುವುದರಿಂದ ವಜ್ರೇಶ್ವರಿ ಸಂಸ[...] ಪರವಾಗಿ ಶಿವರಾಜ್‌ಕುಮಾರ್ ಅಥವಾ ರಾಘವೇಂದ್ರ ರಾಜ್‌ಕುಮಾರ್, ಈಶ್ವರಿ ಸಂಸ್ಥೆಯ ಪರವಾಗಿ ರವಿಚಂ[...] ಮೊದಲಾದವರಿಗೆ ಪ್ರಶಸ್ತಿಯನ್ನು ಸ್ವೀಕರಿಸಲು ಅನುವು ಮಾಡಿಕೊಡಲಾಗಿದೆ.

ಅಂದರೆ, ಆರಂಭದಲ್ಲಿ ಅತ್ಯಂತ ಕಟ್ಟುನಿಟ್ಟಿನ ಷರತ್ತುಗಳನ್ನು ಹಾಕಿಕೊಂಡಿದ್ದ ದಕ್ಷಿಣ ಭಾರತ ಚಲನ[...] ವಾಣಿಜ್ಯ ಮಂಡಳಿ ಈಗ ಗ್ಲಾಮರ್ ದೃಷ್ಟಿಯಿಂದ ಸ್ವಲ್ಪಮಟ್ಟಿ ಹೊಂದಾಣಿಕೆ ಮಾಡಿಕೊಂಡಿದೆ. ಅಂತೂ ಇ[...] ಅಂತಿಮ ಪಟ್ಟಿ ಹೊರಬರುವ ಮೊದಲೇ ಕನ್ನಡ ಚಿತ್ರರಂಗದಲ್ಲಿ ಅಪಸ್ವರ ಕೇಳಿಬರುತ್ತಿರುವುದು ಒ[...] ದುರಂತವೇ ಸರಿ.

ಪ್ರೇಕ್ಷಕ ಪ್ರಾಯೋಜಿತ ಲೂಸಿಯಾ

'ನಿರುಪಮ' ಎಂಬ ಕನ್ನಡ ಚಿತ್ರರಂಗದ ಮೊದಲ ಮೂಕಿ ಚಿತ್ರವನ್ನು ನಿರ್ಮಿಸಿದ್ದವರು ಆಗಿನ ಮೈಸೂರು ಸಂಸ್ಥಾನದ ಒಡೆಯರು. ಈಗ ಚಿತ್ರರಂಗ ಶತಮಾನೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಬಿಡುಗಡೆಯಾಗುತ್ತಿರುವ 'ಲೂಸಿಯಾ' ಎಂಬ ಕನ್ನಡ ಚಿತ್ರವನ್ನು ನಿರ್ಮಿಸಿರುವವರು ಸಾಮಾನ್ಯ ಪ್ರಜೆಗಳು.

ಅಂದರೆ ಅಂದು 'ಪ್ರಭು'ಗಳು ಸಿನಿಮಾ ನಿರ್ಮಾಣ ಮಾಡಿದ್ದರೆ, ಇಂದು ಪ್ರಜೆಗಳು ಒಟ್ಟು ಸೇರಿ ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

ನಿಮಗೆ ಗೊತ್ತಿರುವಂತೆ 'ಲೂಸಿಯಾ' ಚಿತ್ರವನ್ನು ಯುವ ನಿರ್ದೇಶಕ ಪವನ್‌ಕುಮಾರ್ ನಿರ್ದೇಶಿಸುತ್ತಿದ್ದಾರೆ. ಇವರು ಇಂಟರ್‌ನೆಟ್ ಮುಖಾಂತರ ಈ ಚಿತ್ರಕ್ಕೆ ಹಣ ಹಾಕುವವರನ್ನು ಆಹ್ವಾನಿಸಿದ್ದರು. ಅದರಂತೆ ಸುಮಾರು 1,350 ಜನ ತಮ್ಮ ಶಕ್ತ್ಯಾನುಸಾರವಾಗಿ ಹಣ ಹಾಕಿದ್ದರು. ಪವನ್ ಹೇಳುವ ಪ್ರಕಾರ ಸುಮಾರು 70 ಲಕ್ಷ ರೂ.ಗಳು ಈ ರೀತಿ ದೇಣಿಗೆಯಾಗಿ ಬಂದಿದೆಯಂತೆ. ಆದರೆ ಚಿತ್ರದ ಒಟ್ಟು ಬಜೆಟ್ ಎರಡು ಕೋಟಿ ಮೇಲಿದೆಯಂತೆ. ಮುಂದಿನ ವಾರ ಈ ಚಿತ್ರ ಬಿಡುಗಡೆಯಾದ ನಂತರ ಹಣ ಹಾಕಿದವರಿಗೆ ಮೊದಲಿಗೆ ಅವರ ಹಣವನ್ನು ವಾಪಸ್ ನೀಡುವ ವ್ಯವಸ್ಥೆ ಮಾಡಿದ್ದಾರಂತೆ. ಅದಾದನಂತರ ಚಿತ್ರದ ಲಾಭವನ್ನೂ ಕೂಡ ಇದೇ ರೀತಿ ಹಂಚಿಕೆ ಮಾಡಲಾಗುತ್ತದಂತೆ.





ಪವನ್‌ರಂತಹ ಹೊಸ ಮತ್ತು ಯುವ ನಿರ್ದೇಶಕನ ಮೇಲೆ ನಂಬಿಕೆಯಿಟ್ಟು, ಇಷ್ಟು ಜನ ಬಂಡವಾಳ ಹೂಡಿದ್ದೇ ಒಂದು ವಿಶೇಷ. ಇಂತಹ ಪ್ರಯೋಗ ಕನ್ನಡ ಚಿತ್ರದಲ್ಲಿ ಯಶಸ್ಸು ಕಂಡರೆ ಬಹುಶಃ ಮುಂದಿನ ದಿನಗಳಲ್ಲಿ ಸಾಮಾನ್ಯ ಪ್ರಜೆಗಳು ಅಥವಾ ಪ್ರೇಕ್ಷಕರೇ ನಿರ್ಮಾಪಕರಾಗಿ ಕನ್ನಡ ಚಿತ್ರರಂಗದಲ್ಲಿ ಹೆಚ್ಚು ಹೆಚ್ಚು ಕಾಣಿಸುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ.

'ಲೂಸಿಯಾ' ಚಿತ್ರದ ಹಾಡುಗಳು ಈಗಾಗಲೇ ಎಲ್ಲರ ಬಾಯಲ್ಲಿ ಕೇಳಿಬರುತ್ತಿದೆ. ನೀನಾಸಂ ಸತೀಶ್‌ಗೆ ಈ ಚಿತ್ರದ ನಂತರ ನಾಯಕ ನಟನಾಗಿ ಗಾಂಧಿನಗರದಲ್ಲಿ ಬೇಡಿಕೆ ಬರುವ ಸಾಧ್ಯತೆಯೂ ಇದೆ. ಎಲ್ಲರ ಪ್ರಯತ್ನಕ್ಕೆ ಯಶಸ್ಸು ಸಿಗಲಿ ಎಂಬ ಹಾರೈಕೆ ನಮ್ಮದು. ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone
Fax : 26604536 E-mail :